# ಸಹಜಮಾರ್ಗ ದರ್ಶನ

ಮೂಲ (ಇಂಗ್ಲೀಷ್) :

ಶ್ರೀ ರಾಮಚಂದ್ರಜಿ ಮಹಾರಾಜ

ಶಾಹಜಹಾನಪುರ (ಉ. ಪ್ರ.)

ಕನ್ನಡಕ್ಕೆ :

ಲಕ್ಷ್ಮೀಕಾಂತ



# ಸಹಜಮಾರ್ಗ ದರ್ಶನ

ಮೂಲ (ಇಂಗ್ಲೀಷ್) :

**ಶ್ರೀ ರಾಮಚಂದ್ರಜಿ ಮಹಾರಾಜ**

**ಶಾಹಜಹಾನಪುರ (ಉ. ಪ್ರ)**

ಕನ್ನಡಕ್ಕೆ :

**ಲಕ್ಷ್ಮೀಕಾಂತ**

**ಯೋಗಾಶ್ರಮ ಕಮೀಟಿ**


# ೫೩ ಬನಶಂಕರಿ ನಗರ, ಕೆಲಗೇರಿ ರಸ್ತೆ

ಧಾರವಾಡ–೫೮೦ ೦೦೧

ಸ್ವಾಧ್ಯಾಯಕ್ಕೋಸ್ಕರ ಮಾತ್ರ
(ನಿಃಶುಲ್ಕ)

300412

ಮುದ್ರಕರು :
ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ
ದೂರವಾಣಿ : ೦೮೩೬ – ೨೭೯೦೦೩೦, ೨೭೪೧೯೮೪
ಮೊಬಾಯಿಲ್ : ೦೯೧೪೧೨೦೧೧೭೦



ಸಮರ್ಥ ಸದ್ಗುರು ಶ್ರೀ ರಾಮಚಂದ್ರಜಿ (ಬಾಬೂಜಿ) ಮಹಾರಾಜರು
ಶಾಹಜಹಾನಪೂರ

# ವಿಷಯ ಸೂಚಿಕೆ

ಅಧ್ಯಾಯ ೧ : ಪ್ರವೇಶಿಕೆ

- ದರ್ಶನದ ಪರಿಕಲ್ಪನೆ ೧
- ಸಹಜ ಮಾರ್ಗದ ಚಾರಿತ್ರಿಕ ಹಿನ್ನೆಲೆ ೨
- ಸಹಜ ಮಾರ್ಗದ ವಿಶೇಷ ಲಕ್ಷಣಗಳು ೫

ಅಧ್ಯಾಯ ೨ : ಸತ್ಯ ಅದರ ಸ್ಥಾಯಿ ಮತ್ತು ಕ್ರಿಯಾತ್ಮಕ ಮುಖಗಳು

- ಪರಮ ಸತ್ಯ ೮
- ಸಾರೂಪ್ಯತೆ ೧೨
- ವಿಶ್ವೋತ್ಪತ್ತಿ ೧೩
- ದೇಶ ಮತ್ತು ಕಾಲ ೧೫
- ಜೀವ ಮತ್ತು ಬ್ರಹ್ಮ ೧೭
- ಪ್ರಕೃತಿಯಲ್ಲಿ ಸಮಾನಾಂತರತೆ ೧೮
- ಅವತಾರಗಳು ೨೦

ಅಧ್ಯಾಯ ೩ : ಜ್ಞಾನ ಮತ್ತು ಅದರ ಸ್ವರೂಪ

- ಜ್ಞಾನ, ಅಜ್ಞಾನ, ಸಂಪೂರ್ಣ ಅಜ್ಞಾನ ೨೩
- ಜ್ಞಾನ ಸಾಧನಗಳು : ತರ್ಕ, ಶ್ರುತಿ, ಮತ್ತು ಅನುಭವ ೨೫

**ಅಧ್ಯಾಯ ೪ : ಮಾನವ**

- ಬ್ರಹ್ಮಾಂಡದಲ್ಲಿ ಅವನ ಸ್ಥಾನ ಮತ್ತು ಗತಿ ೨೮
- ಮಾನವತೆ ಮತ್ತು ದೈವತ್ವಗಳ ನಡುವಣ ಸಮಾನಾಂತರತೆಯ ಅಳಿವು ೩೦
- ಸಾಕ್ಷಾತ್ಕಾರ ಮತ್ತು ಅದರ ಸಾಧನೋಪಾಯಗಳು ೩೨

**ಅಧ್ಯಾಯ ೫ : ಸಾಕ್ಷಾತ್ಕಾರಕ್ಕೆ ಮಾರ್ಗ (ಅಭ್ಯಾಸಿಯ ಪಾತ್ರ)**

- ವೈರಾಗ್ಯ ೩೭
- ಧ್ಯಾನ ೩೯
- ಧ್ಯಾನಕ್ಕೆ ಪೂರ್ವ ಸಿದ್ಧತೆಗಳು ೪೫
- ಪ್ರಾರ್ಥನೆ ೪೭
- ನಿರಂತರ ಸ್ಮರಣೆ ೪೮
- ಭಕ್ತಿ ೫೦
- ಸಮರ್ಪಣೆ ೫೨

**ಅಧ್ಯಾಯ ೬ : ಸಾಕ್ಷಾತ್ಕಾರಕ್ಕೆ ಮಾರ್ಗ (ಮಾರ್ಗದರ್ಶಿಯ ಪಾತ್ರ)**

- ಗುರು ಅವನ ಕಾರ್ಯ ೫೫
- ಪ್ರಾಣಾಹುತಿ ೬೩

**ಅಧ್ಯಾಯ ೭ : ಸಾಕ್ಷಾತ್ಕಾರದಲ್ಲಿಯ ಮಾರ್ಗದಲ್ಲಿಯ ಹಂತಗಳು** ೬೮

- ಪ್ರಾರ್ಥನೆ ೭೧

ಅನುಬಂಧ : ಸಹಜ ಮಾರ್ಗದ ಹತ್ತು ನಿಯಮಗಳು ೭೨

ॐ तत् सत्

# ಅಧ್ಯಾಯ – ೧

# ಪ್ರವೇಶಿಕೆ

## ದರ್ಶನದ ಪರಿಕಲ್ಪನೆ

'ದರ್ಶನ' ಅಥವಾ ತತ್ತ್ವಸಾಕ್ಷಾತ್ಕಾರವು ತರ್ಕವನ್ನಾಶ್ರಯಿಸಿದ ವಿಷಯವಲ್ಲ. ಅದು ಆಶ್ರಯಿಸಿರುವುದು ಅಂತರ್ದೃಷ್ಟಿ (ಅಂತರ್ಬೋಧೆ)ಯನ್ನು. ಬಹುತೇಕ ತತ್ತ್ವಜ್ಞಾನಿಗಳು ನಂಬುವಂತೆ ಅದು ಸಂಶಯದಿಂದ ಪ್ರಾರಂಭವಾಗುವುದಿಲ್ಲ. ಬದಲಿಗೆ, ಅದು ಪ್ರಾರಂಭವಾಗುವುದು 'ಆಶ್ಚರ್ಯ'ದಿಂದ. ಸಾಮಾನ್ಯವಾಗಿ ತತ್ತ್ವಜ್ಞಾನಿಗಳು ಪ್ರತ್ಯಕ್ಷ ಅನುಷ್ಠಾನದ ಜೀವನವನ್ನು ಅಂಗೀಕರಿಸಿ ಅನುಸರಿಸುವುದಕ್ಕೆ ಮುಂಚೆಯೇ ವಿಷಯಗಳ ವಿಶದೀಕರಣದ ಪ್ರಯತ್ನ ಮಾಡಿದ್ದಾರೆ. ಪಾಶ್ಚಿಮಾತ್ಯ ತತ್ತ್ವಜ್ಞಾನಿಗಳು ಸಾಮಾನ್ಯವಾಗಿ ಮಾಡಿರುವುದು ಹೀಗೆಯೇ. ಒಬ್ಬನು ತತ್ತ್ವಜ್ಞಾನಿಯಾದ ಮಾತ್ರಕ್ಕೆ ಭ್ರಷ್ಟನಾಗಲಾರ ಅಥವಾ ಪತಿತನಾಗಲಾರನೆಂಬುದು ನಿಶ್ಚಿತವಲ್ಲವೆಂದು ನಾನು ಹೇಳಿಯೇನು. ಆದರೆ, ಪ್ರಾಯೋಗಿಕ ಜೀವನ ನಡೆಸುವ ಮೂಲಕ ಅವನು ವಸ್ತು-ವಿಷಯಗಳನ್ನು ಅರಿತುಕೊಂಡವನಾಗಿದ್ದರೆ, ಅಂಥವನು ಭ್ರಷ್ಟನಾಗುವ ಸಂಭವವಿಲ್ಲ. ಭಾರತದಲ್ಲಿ ಋಷಿಗಳು ಮೊದಲಿಗೆ ಪ್ರಾಯೋಗಿಕ ಅನುಷ್ಠಾನದ ಜೀವನವನ್ನು ನಡೆಸಿ, ಅನಂತರವಷ್ಟೇ ತತ್ತ್ವವಿವೇಚನೆ ಮಾಡಲು ತೊಡಗಿದರು. ತಮ್ಮ ತಮ್ಮ ಪ್ರಗತಿಯ ಮಟ್ಟದಲ್ಲಿ, ತಮ್ಮ ಕೈಗೆಟುಕಿದ ಮಟ್ಟಿಗೆ ಅವರು ಅಸ್ತಿತ್ವದಲ್ಲಿರುವ ವಸ್ತುಗಳ ರಹಸ್ಯವನ್ನು ತೆರೆದಿಟ್ಟರು. ತತ್ಫಲವಾಗಿ ವಿವಿಧ ವರ್ಣಗಳನ್ನುಳ್ಳ ಷಡ್ದರ್ಶನಗಳು ಬಂದವು. ನಮ್ಮ ಅಭ್ಯಾಸ ಅಥವಾ ಸಾಧನೆ ಪೂರ್ಣಗೊಂಡ ನಂತರವಷ್ಟೇ ನಾವು ವಿಷಯ ವಿವರಣೆಗೆ ಕೈಹಾಕಬೇಕು. ವಿಷಯ ವಿವೇಚನೆಯಲ್ಲಿ ನಿಷ್ಕೃಷ್ಟತೆ, (ದೋಷರಾಹಿತ್ಯ) ಸಾಧಿಸಬೇಕಿದ್ದರೆ, ತತ್ತ್ವಜ್ಞಾನಿಯು ಲಕ್ಷ್ಯದಲ್ಲಿಟ್ಟಿರಬೇಕಾದ ಸೂತ್ರವಾಕ್ಯ ಇದೇ ಆಗಿದೆ.

ಭಾರತವು ಅಧ್ಯಾತ್ಮದ ತವರುಮನೆ. ಅಂತೆಯೇ, ಇಲ್ಲಿ ಎಲ್ಲ ಯುಗಗಳಲ್ಲಿಯೂ ಸತ್ಯಾನ್ವೇಷಣೆ ಕ್ರಿಯಾಶೀಲವಾಗಿದೆ. ಅಧ್ಯಾತ್ಮವಿದ್ಯೆಯು ಮೂಲ ಭಂಡಾರದಿಂದ ಪ್ರವಹಿಸುವ ಶಕ್ತಿಗಳಿಗೆ ಸಂಬಂಧಿತವಾದ ಶಾಸ್ತ್ರ ಅಥವಾ ವಿಜ್ಞಾನ. ಗ್ರಂಥಿಗಳ ರೂಪದಲ್ಲಿರುವ ಆ ಶಕ್ತಿಗಳಿಗೆ ಸೃಜನಾತ್ಮಕ ಹಾಗೂ ವಿನಾಶಾತ್ಮಕ ಎರಡೂ ಸಾಮರ್ಥ್ಯಗಳುಂಟು. ಭಾರತದಲ್ಲಿ ಋಷಿಗಳು ಸೃಜನಾತ್ಮಕ (ರಚನಾತ್ಮಕ) ಶಕ್ತಿಯನ್ನು ಮಾನವತೆಯ ಸುಧಾರಣೆಗೋಸ್ಕರ ವಿನಿಯೋಗಿಸಿದ್ದಾರೆ. ಹೋಲಿಕೆಯಲ್ಲಿ ಅಣುಬಾಂಬಿನ ಶಕ್ತಿಯೂ ಏನೂ ಅಲ್ಲವೆಂದೆನಿಸುವಷ್ಟು ವಿಪುಲ ವಿನಾಶಾತ್ಮಕ ಶಕ್ತಿಯೂ ಇದೆ. ದೈವೀ ಆದೇಶಕ್ಕನುಸಾರ, ತನ್ನ ಸಂಕಲ್ಪಶಕ್ತಿಗೆ ಅನುಗುಣವಾಗಿ ಯೋಗಿಯಾದವನು ಇವುಗಳನ್ನು ಉಪಯೋಗಿಸುತ್ತಾನೆ. ವರ್ತಮಾನ ಕಾಲದಲ್ಲಿಯೂ ಈ ಶಕ್ತಿಯು ಉಪಯೋಗಿಸಲ್ಪಡುತ್ತಿದ್ದು, ಒಂದು ಹೊಸ ಪ್ರಪಂಚ ರೂಪಿಸಲ್ಪಡುತ್ತಿದೆ. ಆಧ್ಯಾತ್ಮಿಕ ಪುನರುತ್ಥಾನ ಅವಶ್ಯ ಘಟಿಸಲೇ ಬೇಕಿದೆ, ಮತ್ತು ಭಾರತವೇ ಮತ್ತೆ ಜಗತ್ತಿಗೆ ಮಾರ್ಗದರ್ಶನವಿತ್ತು ಮುನ್ನಡೆಸುವುದು; ಅದಕ್ಕೆ ಎಷ್ಟು ದೀರ್ಘಕಾಲ ತೆಗೆದುಕೊಂಡರೂ ಸರಿಯೆ. ಯಾವ ದೇಶವೂ ಆಧ್ಯಾತ್ಮಿಕತೆಯಿಲ್ಲದೆ ಉಳಿಯಲು ಸಾಧ್ಯವಾಗದೆಂಬುದನ್ನು, ಇತರ ದೇಶಗಳೂ ಮನಗಾಣಗಲು ಪ್ರಾರಂಭಿಸಿವೆ. ರಾಜಕೀಯ ಮುತ್ಸದ್ದಿತನ, ವ್ಯೂಹ ಯುಕ್ತಿಗಳ ಕಾಲ ಶೀಘ್ರ ಸರಿಹೋಗುತ್ತಿವೆ. ಈ ಶತಮಾನ ಕೊನೆಗೊಳ್ಳುವ ಹೊತ್ತಿಗೆ ಒಂದು ಮಹಾ ಪರಿವರ್ತನೆ ಸಂಭವಿಸುವುದು ಖಂಡಿತ. ಆಗಲಿಕ್ಕಿರುವುದನ್ನು ಪ್ರತಿಯೋರ್ವನೂ ಸಂತೋಷದಿಂದ ಸ್ವಾಗತಿಸಿ, ಆಧ್ಯಾತ್ಮಿಕತೆಯ ಪಥಕ್ಕೆ ಬರಲೇಬೇಕು. ಅದರಿಂದಲೇ ಆತನ ಶ್ರೇಯಸ್ಸು ವರ್ಧಿಸುವುದು. ಅತ್ಯುನ್ನತ ದರ್ಶನವನ್ನು ನಾನು ಬಹಿರಂಗಪಡಿಸುತ್ತಿದ್ದೇನೆ. ಜನರು ಮೊದ ಮೊದಲು ಅದನ್ನು ಗ್ರಹಿಸಲೂ ಬಹುದು, ಗ್ರಹಿಸದಿರಲೂ ಬಹುದು; ಆದರೆ ಕಾಲಕ್ರಮೇಣ ಅವರು ಅದನ್ನು ಖಂಡಿತ ಮನಗಾಣಲು ಪ್ರಾರಂಭಿಸುವರು.

## ಸಹಜಮಾರ್ಗದ ಚಾರಿತ್ರಿಕ ಹಿನ್ನೆಲೆ

ಮಹಾತ್ಮರು ಜನ್ಮತಾಳುವುದು ಆಕಸ್ಮಿಕವಾಗಿ ಅಲ್ಲ. ಜಗತ್ತು ಅವರ ಕಾತರದ ಪ್ರತೀಕ್ಷೆ ಮಾಡಿದಾಗ ಅವರು ಜನ್ಮತಳೆಯುತ್ತಾರೆ. ಪ್ರಕೃತಿಯ ನಿಯಮವಿರುವುದೇ ಹೀಗೆ. ಅಧ್ಯಾತ್ಮ ವಿದ್ಯೆಯ ಮೂಲ ನೆಲೆಯಾದ ಭಾರತವು ಪುರಾತನ ಯೋಗಪದ್ಧತಿಯನ್ನು ಸಂಪೂರ್ಣವಾಗಿ ಮರೆತು ಕತ್ತಲೆಯಲ್ಲಿ ತಡಕಾಡುತ್ತಿತ್ತು. ಸೂಕ್ಷ್ಮ ಅಧ್ಯಾತ್ಮದ ಸ್ಥಾನದಲ್ಲಿ ಸ್ಥೂಲ (ಜಡ) ಭೌತಿಕವಾದವು ಆಕ್ರಮಿಸಿ ಕುಳಿತಿತ್ತು. ಅಜ್ಞಾನದ ಕಾರ್ಮೋಡಗಳು ಎಲ್ಲ ಕಡೆಗೂ ಮುಸುಕುತ್ತಿದ್ದವು. 'ಯೌಗಿಕ ಪ್ರಾಣಾಹುತಿ' ಹಿಂದುಗಳಿಗೆ ಪರಕೀಯವಾಗಿಬಿಟ್ಟಿತ್ತು. ಅಧ್ಯಾತ್ಮವಿದ್ಯೆಯು ಅಸಹಾಯಕತೆಯಿಂದ ತತ್ತರಿಸುತ್ತಿದ್ದ ಈ ಸಂದರ್ಭದಲ್ಲಿ ಮಾನವತೆಯ ಉದ್ಧಾರಕ್ಕೋಸ್ಕರ ಎಲ್ಲವನ್ನೂ ಸರಿಪಡಿಸಲು ಓರ್ವ ಮಹಾತ್ಮನ ಆಗಮನದ ತುರ್ತು ಆವಶ್ಯಕತೆಯಿತ್ತು.

೧೮೭೩ನೆಯ ಫೆಬ್ರುವರಿ ೨೮, ಬಸಂತಪಂಚಮಿಯ ಶುಭದಿನದಂದು, ಫರೂಕಾಬಾದ (ಉ.ಪ್ರ.) ಜಿಲ್ಲೆಯ ಫತೇಹ್‌ಗಡದಲ್ಲಿ, ಪ್ರಕೃತಿಯ ಶಕ್ತಿಯು, 'ಸಮರ್ಥ ಗುರು ಮಹಾತ್ಮಾ ರಾಮಚಂದ್ರಜಿ ಮಹಾರಾಜ'ರೆಂಬ ಮಾನವ ಸ್ವರೂಪದಲ್ಲಿ ಅವತರಿಸಿತು. ವರ್ಷದ ಅತಿ ಆಹ್ಲಾದಕರ ಋತುವಿನೊಂದಿಗೆ ಅಷ್ಟು ಸುಂದರವಾಗಿ ಸಂಗತವಾದ ಆ ಶುಭದಿನವು ಪ್ರತಿಯೊಬ್ಬರ ಹೃದಯದಲ್ಲಿಯೂ ವಸಂತೋದಯದ ನವಚೈತನ್ಯವನ್ನು ಸಂಚರಣಗೊಳಿಸಿತು.

ಅವರ ಆಗಮನದಿಂದ ಸೂಚಿತವಾದ ಆ ಆನಂದಮಯ ಕ್ಷಣವು ಆಧ್ಯಾತ್ಮಿಕ ಜಾಗೃತಿಯ ನವಯುಗವೊಂದನ್ನು ಆರಂಭಿಸಿತು; ಇದು ಮಾನವ ಜೀವನದ (ಅಸ್ತಿತ್ವದ) ಸಮಸ್ಯೆಗೆ ಒಂದು ಅನುಷ್ಠಾನಸಾಧ್ಯವಾದ ಪರಿಹಾರವನ್ನೀಯುವ ಭರವಸೆ ಕೊಡುತ್ತದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವರು ಉಂಟುಮಾಡಿದ ಭವ್ಯ ಪುನರುತ್ಥಾನವನ್ನು ನಾವು ನೆನಪಿಸಿಕೊಂಡರೆ ಸಾಕು, ನಮಗೆ ಗೌರವ ಮತ್ತು ಆನಂದಭರಿತ ಆಶ್ಚರ್ಯಾಘಾತವಾಗುತ್ತದೆ. ಅತಿ ದೊಡ್ಡ ಋಷಿಗಳಿಗೂ ಎಂದಿಗೂ ದಿಗ್ಭ್ರಮೆಗೊಳಿಸುತ್ತಿದ್ದ ಅಸ್ತಿತ್ವದ ಸಮಸ್ಯೆಗೆ ಸುಲಭ ಪರಿಹಾರವನ್ನು ಅವರು ನೀಡುತ್ತಾರೆ.

ಈ ದಿವ್ಯಪುರುಷರು ಒಂದು ಗೌರವಾರ್ಹ ಕಾಯಸ್ಥ ಕುಟುಂಬದಲ್ಲಿ ಜನಿಸಿದರು. ಅವರ ತಾಯಿ ಉದಾರ ಮನಸ್ಸಿನ ಸರಳಜೀವಿಯಾಗಿದ್ದು, ಹೆಚ್ಚಿನ ಸಮಯವನ್ನು ಭಕ್ತಿ–ಪೂಜೆಗಳಲ್ಲಿ ಕಳೆಯುತ್ತಿದ್ದರು; ಅವರ ಬಾಲ್ಯವು ತಾಯಿಯಿಂದ ತುಂಬ ಪ್ರಭಾವಿತವಾಗಿತ್ತು. ಅತ್ಯಂತ ಎಳೆವಯಸ್ಸಿನಲ್ಲಿಯೇ ಅವರಿಗೆ ಸ್ಫೂರ್ತಿಯುಂಟಾದುದು ಅವರ ಪ್ರಭಾವದಿಂದಲೇ. ಒಂದಾನೊಂದು ದಿನ, ಅವರು ತಮ್ಮ ಜೊತೆಗಾರರೊಂದಿಗೆ ಆಟವಾಡುತ್ತಿರುವಾಗ ಯಾವುದೋ ದೈವೀ ಶಕ್ತಿಯೊಂದು 'ತಾನು (ಹುಟ್ಟಿ) ಬಂದಿರುವುದು ತಾನೀಗ ತೊಡಗಿದ್ದ ಕೆಲಸಕ್ಕಾಗಿ ಅಲ್ಲ' ಎಂಬ ಭಾವನೆಯನ್ನು ಜಾಗ್ರತಗೊಳಿಸಿತು. ಅವರು ಆತ್ಮ ಸಾಕ್ಷಾತ್ಕಾರ ಪಡೆದು, ಮುಂದಿನ ಮಹಾಕಾರ್ಯಕ್ಕೆ ಸಿದ್ಧಗೊಳ್ಳಬೇಕಿತ್ತು. ಅವರ ಆತ್ಮವು ಜಾಗ್ರತಗೊಂಡಿತು. ಮತ್ತು ಅವರು ಅದಕ್ಕೆ ಮನಃಪೂರ್ವಕ ಒಗ್ಗಿಕೊಂಡರು. ಕೇವಲ ಏಳು ತಿಂಗಳಲ್ಲಿಯೇ ಅವರು ಪರಿಪೂರ್ಣತೆಯನ್ನು ಹೊಂದಿದರು. ಇದು ನಿಜವಾಗಿಯೂ ಒಂದು ಅಸದೃಶ ಉದಾಹರಣೆ. ಅಗಿನಿಂದ ಅವರು ತಮ್ಮ ಸಂಪೂರ್ಣ ಜೀವಮಾನವನ್ನು ಆಧ್ಯಾತ್ಮಿಕ ಉದ್ದೇಶಕ್ಕೆ ಮೀಸಲಾಗಿ ಅರ್ಪಿಸಿಕೊಂಡರು. ಅವರೇ ನಮ್ಮ ಸಂಸ್ಥೆಯ ಆದಿಗುರು.

ಅವರು ಮಿತತ್ತ್ವ, ಸಹಿಷ್ಣುತೆ ಮತ್ತು ಭಕ್ತಿಗಳೇ ಮೈವೆತ್ತಂತಿದ್ದರು. ಯೌಗಿಕ ಪ್ರಾಣಾಹುತಿಯ ಮೂಲಕ ಯೋಗ ಶಿಕ್ಷಣವನ್ನು ನೀಡುವ ಹೊಸಯುಗ ಅವರೊಡನೆ ಉದಯವಾಯಿತು. ಅದರ ಮೇಲೆ ಅವರು ಆ ಕಾಲದಲ್ಲಿ ಪರಮಾಧಿಕಾರ ಪಡೆದವರಾಗಿದ್ದರು. ಗೃಹಸ್ಥ ಜೀವನವನ್ನು ನಡೆಸುತ್ತಿದ್ದರೂ ಕೂಡ,

ಒಂದೇ ಜನ್ಮದಲ್ಲಿ ಮಾನವನು ಪರಿಪೂರ್ಣತೆ ಹೊಂದುವಂತೆ ಮಾಡುವ ಮಾರ್ಗವನ್ನು ಅವರು ತೋರಿಸಿದರು. ಗೃಹಸ್ಥ ಜೀವನದ ಕಷ್ಟ-ಕಾರ್ಪಣ್ಯಗಳು ಆಧ್ಯಾತ್ಮಿಕ ಸಿದ್ಧಿಗೆ ಸಲ್ಲುವ ತ್ಯಾಗ ಮತ್ತು ತಪಸ್ಸುಗಳೆಂದು ಅವರು ಹೇಳುತ್ತಿದ್ದರು. ಆಧ್ಯಾತ್ಮಿಕ ತರಬೇತಿಯ ವಿಧಾನವನ್ನು ಅವರು ಬಹಳಷ್ಟು ಸರಳಗೊಳಿಸಿ, ನಮ್ಮ ಕಾಲದ ಆವಶ್ಯಕತೆಗೆ ಅನುಗುಣವಾಗಿ ಹೊಂದಿಸಿದ್ದರು. ಉನ್ನತ ಮಟ್ಟದ ಸಾಮರ್ಥ್ಯ ಮತ್ತು ಆಧ್ಯಾತ್ಮಿಕ ಘನತೆ ಹೊಂದಿದ, ದೈವೀ ತೇಜಸ್ಸೇ ಆದ ನಮ್ಮ ಮಹಾ ಗುರುಗಳು ತಮ್ಮ ಜೀವಮಾನದ ಪ್ರತಿಕ್ಷಣವನ್ನು ಮಾನವನ ಉದ್ಧಾರಕ್ಕೆ ಮುಡುಪಿಟ್ಟಿದ್ದರು. ಅವರು ನಿಜಕ್ಕೂ ಪ್ರಕೃತಿಯ ಅದ್ಭುತ ಪವಾಡಸದೃಶ ಮೂರ್ತಿ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅವರು ಗೈದ ಕಾರ್ಯವು ಸಾಮಾನ್ಯರ ಕಲ್ಪನೆಗೆ ಮೀರಿದುದು. ಈ ಅಧ್ಯಾತ್ಮವಿಜ್ಞಾನ ಕ್ಷೇತ್ರದಲ್ಲಿ ಅವರು ಮಾಡಿರುವ ಸಂಶೋಧನೆಗಳು ಅತ್ಯಲ್ಪ ಕಾಲದಲ್ಲಿಯೇ ಮಾನವನು ಅತ್ಯುನ್ನತ ಮಟ್ಟವನ್ನು ತಲುಪುವುದು ಸಾಧ್ಯವಾಗುವಂತೆ ಮಾಡಿವೆ. ಅವು ಸುಲಭಸಾಧ್ಯವೂ, ಪ್ರಾಯೋಗಿಕವೂ ಆಗಿವೆ. ಅವರು ರಾಜಯೋಗದ ಪರಿಷ್ಕೃತ ಪದ್ಧತಿಯನ್ನು ಜಾರಿಗೆ ತಂದರು. ಅದೇ, ಅನಂತರ 'ಸಹಜಮಾರ್ಗ'ವೆಂದು ಹೆಸರಾಗಿದೆ. ಸುಮಾರು ೩೬ ವರ್ಷ ಕಾಲ ಮಾನವತೆಗೆ ಸೇವೆ ಸಲ್ಲಿಸಿ, ೧೯೩೧, ಅಗಸ್ಟ ೧೪ರಂದು ತಮ್ಮ ೫೮ನೆಯ ವಯಸ್ಸಿನಲ್ಲಿ ಈ ಆಧ್ಯಾತ್ಮಿಕ ವಿಭೂತಿಯು ದೇಹತ್ಯಾಗ ಮಾಡಿದರು. ಅವರು ತಮ್ಮ ಜೀವನಕಾಲದಲ್ಲಿ ಮಾಡಿದ ಕಾರ್ಯ ಕಲ್ಪನಾತೀತವಾದುದು. ಮುಂಬರುವ ಪೀಳಿಗೆ ಅದರ ಮಹತ್ತ್ವವನ್ನು ಕಾಲಕ್ರಮೇಣ ಮನಗಂಡೀತು.

೧೯೪೫ನೆಯ ಇಸವಿ, ಮಾರ್ಚ ೩೧ರಂದು ಷಹಜಹಾನಪುರ (ಉ.ಪ್ರ.)ದಲ್ಲಿ ಅವರ ಉತ್ತರಾಧಿಕಾರಿಯಾದ ನನ್ನಿಂದ, ಅವರ ಕೃಪೆಯಿಂದ, ಆ ಮಹಾತ್ಮರ ಹೆಸರಿನಲ್ಲಿಯೇ 'ಶ್ರೀ ರಾಮಚಂದ್ರ ಮಿಷನ್' ಸ್ಥಾಪಿಸಲ್ಪಟ್ಟಿತು. ಆ ಸಂಸ್ಥೆ ಎಲ್ಲೆಡೆಯಿಂದಲೂ ಸತ್ಯಾನ್ವೇಷಿಗಳನ್ನು ಸಾವಕಾಶವಾಗಿ ಆಕರ್ಷಿಸುತ್ತಿದೆ. ಈ ದಿಶೆಯಲ್ಲಿ ಗುರುಕೃಪೆ ಕೆಲಸಮಾಡುತ್ತಿದೆ. ಅದರಿಂದ ಲಾಭಾನ್ವಿತರಾಗಲು ಜನರು ಆಕರ್ಷಿತರಾಗುತ್ತಿರುವುದು ಸಂತೋಷಕರ.

ಮಿಷನ್ನಿನಲ್ಲಿ ಅನುಸರಿಸಲಾಗುತ್ತಿರುವ ಸಹಜಮಾರ್ಗ ಸಾಧನಪದ್ಧತಿಯು ಪರವಸ್ತುವನ್ನು ಪಡೆದುಕೊಳ್ಳುವ ಸುಲಭವೂ ಸಹಜವೂ ಆದ ಮಾರ್ಗವೊಂದನ್ನು ಪ್ರಸ್ತುತಪಡಿಸುತ್ತದೆ. ಮನುಷ್ಯನ ನಿತ್ಯ ಜೀವನದಲ್ಲಿ ಅನುಸರಿಸಲು ಅಸಾಧ್ಯವೆನಿಸುವ ಒರಟು ವಿಧಾನಗಳನ್ನು ಸಹಜಮಾರ್ಗವು ಸೂಚಿಸುವುದಿಲ್ಲ. ಸಹಜಮಾರ್ಗ ಪದ್ಧತಿಯ ಆಧ್ಯಾತ್ಮಿಕ ಶಿಕ್ಷಣದಲ್ಲಿ ಇಂದ್ರಿಯಗಳು ತಮ್ಮ ಸಹಜಮೂಲ ಸ್ಥಿತಿಯನ್ನು ಪಡೆಯುವಂತೆ ಅವುಗಳ ಕಾರ್ಯಗಳು ಕ್ರಮಗೊಳಿಸಲ್ಪಡುತ್ತವೆ, ಅಂದರೆ, ಮೊಟ್ಟ ಮೊದಲಿಗೆ ಮಾನವರೂಪವನ್ನು ಪಡೆದಾಗ ಅವು ಇದ್ದ ಸ್ಥಿತಿಗೆ ನೇರ್ಪಡಿಸಲ್ಪಡುತ್ತವೆ ಎಂದು ಅರ್ಥ. ಅಷ್ಟೇ ಅಲ್ಲ, ತಮಗೆ ತಾವೇ ನಿರಂಕುಶವಾಗಿ ವರ್ತಿಸುತ್ತಿರುವ

ನಿಮ್ನ ವೃತ್ತಿಗಳು ಉನ್ನತ ಪ್ರಜ್ಞಾನಕ್ಕೆ ಅಧೀನಗೊಳಿಸಲ್ಪಡುತ್ತವೆ. ಆ ಮೂಲಕ ಅವುಗಳ ವಿಕೃತ ವೈಪರೀತ್ಯದ ಕ್ರಿಯೆಗಳು ನಿಲ್ಲಿಸಲ್ಪಡುತ್ತವೆ. ಎಲ್ಲ ಉಚ್ಚ ಸ್ತರದ ಕೇಂದ್ರಗಳು ದೈವೀ ಕೇಂದ್ರಗಳ ಅಧೀನದಲ್ಲಿ ಬರುತ್ತವೆ. ಮತ್ತು ಈ ರೀತಿಯಲ್ಲಿ ವ್ಯಷ್ಟಿ ಸತ್ತೆಯ ಇಡೀ ಮಂಡಲವು ದೈವೀಕರಣಗೊಳ್ಳಲಾರಂಭಿಸುತ್ತದೆ.

## ಸಹಜಮಾರ್ಗದ ವಿಶೇಷ ಲಕ್ಷಣಗಳು

ಶಂಕರ, ರಾಮಾನುಜ ಅಥವಾ ಇತರರು ತಮ್ಮ ಅನುಭವ ಕುರಿತು ಅದೇನೇ ಹೇಳಿದ್ದರೂ ಸರಿಯೆ; ನಾನು ಹೇಳುವುದೆಲ್ಲ, ಬರೆಯುವುದೆಲ್ಲ ನನ್ನ ಅನುಭವದ ಮೇಲೆ ಆಧರಿಸಿದೆ. ಈ ಜಗತ್ತಿನಲ್ಲಿ ಪ್ರತಿಯೋರ್ವನೂ ಶಾಂತಿಯನ್ನು ಬಯಸುತ್ತಾನೆ. ಅಂದರೆ ಸಾಕ್ಷಾತ್ಕಾರ ಅವರ ಉದ್ದೇಶವಲ್ಲ. ಹಾಗಿರುವಾಗ, ಅವರಿಗೆ ಶಾಂತಿ ಲಭಿಸೀತೇ ಹೊರತು ಸಾಕ್ಷಾತ್ಕಾರವಲ್ಲ. ಆದರೆ ಸಾಕ್ಷಾತ್ಕಾರವು ಉದ್ದೇಶವಾಗಿದ್ದರೆ, ಅದರ ಬೆನ್ನಿಗೆ ಶಾಂತಿ ತಾನಾಗಿಯೇ ಬರುತ್ತದೆ. 'ಸಾಕ್ಷಾತ್ಕಾ'ರ ಎಂದರೇನೆಂದು ನಾವು ಕೇವಲ ತಿಳಿದುಕೊಳ್ಳುವುದರ ಹಿಂದೆ ಬೀಳಬಾರದು, ಅದನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು.

ಇದೇ ಜನ್ಮದಲ್ಲಿ ಮುಕ್ತಿಯನ್ನು ಪಡೆಯುವುದು ಕಷ್ಟ, ಅಷ್ಟೇಕೆ, ಅದು ತೀರ ಅಸಾಧ್ಯವೆಂದು ಜನರು ಭಾವಿಸುತ್ತಾರೆ. ಆದರೆ, ಇದೊಂದು ತಪ್ಪು ಕಲ್ಪನೆ. ಬಹುಶಃ ಇದೇ ಜನ್ಮವೇ ನಮ್ಮನ್ನು ಮುಕ್ತಿಗೆ ಕೊಂಡೊಯ್ಯುವ ಕೊನೆಯ ಜನ್ಮವಾಗಿರಲೂ ಬಹುದು; ಯಾರಿಗೆ ಗೊತ್ತು? ಸಾಧಕನು ಇದೇ ಒಂದೇ ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯಬಲ್ಲ. ಅಷ್ಟೇ ಅಲ್ಲ, ಆತನು ತತ್ಪರ ಸಾಧನಾನಿಷ್ಠನಾಗಿದ್ದರೆ ಮತ್ತು ಒಬ್ಬ ನಿಜವಾದ ಮಾರ್ಗದರ್ಶಿ ದೊರೆತರೆ, ಇನ್ನೂ ಕಡಿಮೆ ಅವಧಿಯಲ್ಲಿಯೇ ಅಂಥ ಸ್ಥಿತಿಯನ್ನು ಪಡೆಯಬಹುದು ಎಂದು ನಮ್ಮ ಗುರುಗಳು ಸಾರಿ ಹೇಳಿದ್ದಾರೆ. ಇದನ್ನು ಅವರು ಸಿದ್ಧಮಾಡಿಯೂ ತೋರಿಸಿದರು. ಆದರೆ, ಶಬ್ದಗಳಲ್ಲಿ ಅದಕ್ಕೆ ನಿದರ್ಶನ ಕೊಡುವುದು ಸಾಧ್ಯವಿಲ್ಲ. ನಮ್ಮ ಅನುಭವವೊಂದೇ ಅದನ್ನು ತೋರಿಸಿಕೊಡಬಲ್ಲದು.

ದೇವರನ್ನು ಅರಣ್ಯ ಮಧ್ಯದಲ್ಲಿಯೇ ಹುಡುಕಬೇಕು ಎಂಬ ಸಾಮಾನ್ಯ ನಂಬಿಕೆ ವ್ಯರ್ಥ ಹಾಗೂ ಅಸಂಬದ್ಧ; ಅವನು ವನವಾಸಿಯೋ ಎಂಬಂತಿದೆ ಈ ಭಾವನೆ. ನಮ್ಮ ಹೃದಯ ಕುಹರದಲ್ಲಿಯೇ ಅವನನ್ನು ಅರಸುವುದು ಹೆಚ್ಚು ಲೇಸು ಎಂದು ನಾನು ನಂಬುತ್ತೇನೆ. ಆದರೆ, ಆ ಉದ್ದೇಶ ಸಾಧನೆಗೆ ಯೋಧರಿಗೆ ಇರುವಂಥ ಧೃತಿ ಇರಬೇಕಾದುದು ಅಗತ್ಯ.

ತನ್ನ ಪ್ರಾಪಂಚಿಕ ಕರ್ತವ್ಯಗಳನ್ನು ಸಂಪೂರ್ಣ ಕಡೆಗಣಿಸಿ, ಮನೆ ಬಿಟ್ಟು ಪಲಾಯನಮಾಡಿ, ಯಾವ ನಿರ್ದಿಷ್ಟ ಗುರಿ ಅಥವಾ ಉದ್ದೇಶವಿಲ್ಲದೆ ತಿರುಗುವುದು ಯಾರ ಮಟ್ಟಿಗೂ, ಎಳ್ಳಷ್ಟೂ ಸಮರ್ಥನೀಯವಲ್ಲ. ನಿಜಾಂಶವೇನೆಂದರೆ, ಆ ತೆರನಾದ ವೈರಾಗ್ಯ ಸ್ಥಿತಿಯಲ್ಲಿಯೂ ಅವನು ಪ್ರಾಪಂಚಿಕ ಭಾವನೆಗಳಿಂದ

ಬಿಡುಗಡೆಹೊಂದಿದ್ದಾನೆ ಎಂಬುದು, ಕ್ವಚಿತ್ತಾಗಿಯೇ ಇದೆ, ಇಲ್ಲವೇ ಇಲ್ಲ ಎಂದರೂ ಸರಿಯೆ. ಸಾಮಾನ್ಯ ಮನುಷ್ಯನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳುಳ್ಳ ಜೀವನದೊಂದಿಗೆ, ಅವುಗಳಿಗೆ ಯುಕ್ತವಾದ ಗಮನವನ್ನೀಯುತ್ತ, ಸಮನ್ವಯ ಸಾಧಿಸಿಕೊಂಡು ಮುಂದುವರಿಯುವುದು ಈ ಸಾಧನ ಪದ್ಧತಿಯ ಅತ್ಯಂತ ಮುಖ್ಯಲಕ್ಷಣ. ಅದರಿಂದ ಇಹ–ಪರ (ಪ್ರಾಪಂಚಿಕ–ಆಧ್ಯಾತ್ಮಿಕ)ಗಳೆಂಬ ಜೀವನದ ಎರಡೂ ಮುಖಗಳೂ ಸಮಾನ ಪ್ರಭೆಯಿಂದ ವೃದ್ಧಿಗೊಳ್ಳುವಂತಾಗುತ್ತದೆ. ಈ ವಿಚಾರಗಳನ್ನು ಕೇವಲ ಉಪದೇಶ ಮಾಡುವುದಾಗಲಿ, ಪ್ರಚಾರಮಾಡುವುದಾಗಲಿ ನಮ್ಮ ಅರ್ಥವಲ್ಲ. ಬದಲಿಗೆ, ಅಭ್ಯಾಸಮಾಡಿ, ಪ್ರತ್ಯಕ್ಷ ಅನುಷ್ಠಾನಕ್ಕೆ ತರುವುದಾಗಿದೆ.

ಗುರುಮಹಾರಾಜರು ಪ್ರಚುರಪಡಿಸಿ ಮುಂದಿಟ್ಟಿರುವ ಧ್ಯೇಯ ಆದರ್ಶಗಳನ್ನು ಹೊಸದಾಗಿ ಪರಿಚಯಿಸಲಾದ ಸಹಜಮಾರ್ಗ ಪದ್ಧತಿಯ ಮೂಲಕ ಪ್ರಸಾರಮಾಡುವುದು, ಮತ್ತು ದೈವೀಪ್ರಜ್ಞೆ ಕುರಿತು ನಿದ್ರಿಸುತ್ತಿರುವ ಜನತೆಯನ್ನು ಎಚ್ಚರಗೊಳಿಸಿ ಪ್ರಗತಿಪಥದಲ್ಲಿ ಸರಿಯಾಗಿ ನಡೆಯುವಂತೆ ಮಾಡುವುದು ಮಿಷನ್ನಿನ ಉದ್ದೇಶಗಳು. ಈ ಉದ್ದೇಶ ಸಾಧನೆಗೋಸ್ಕರ, ಇಂದಿನ ಜೀವನಕ್ರಮಕ್ಕೆ ಅತ್ಯಂತ ಅಸಂಗತವೆನಿಸುವಂಥ ಬಲಾತ್ಕಾರದ ದೇಹದಂಡನೆ, ತಪಸ್ಸುಗಳನ್ನು ಒಳಗೊಂಡ ಹಳೆಯ ಯಾಂತ್ರಿಕ ವಿಧಾನಗಳನ್ನು ಬದಿಗಿರಿಸಿ, ಅವುಗಳ ಬದಲಿಗೆ ಸರಳವೂ ಸ್ವಾಭಾವಿಕವೂ ಆದ ಸಾಧನೋಪಾಯಗಳನ್ನು ಅಂಗೀಕರಿಸುವುದು ಆವಶ್ಯಕ.

ಸಂಪೂರ್ಣ ಸ್ವಾತಂತ್ರ್ಯ ಅಥವಾ ಮುಕ್ತಿಯ ವಿಷಯದಲ್ಲಿ ಬಹುತೇಕ ಎಲ್ಲ ಪ್ರಾಚೀನ ಮತ್ತು ಅರ್ವಾಚೀನ ಋಷಿಗಳೆಲ್ಲರೂ ಒಮ್ಮತಗೊಂಡ ಮಾತೆಂದರೆ, ಮಾನವನು ತಲುಪಬಹುದಾದ ಅಂತಿಮ ಮೇರೆಗೆ ಯಶಸ್ವಿಯಾಗಿ ಕೊಂಡೊಯ್ಯುವ ಏಕೈಕ ಮಾರ್ಗ ರಾಜಯೋಗವೊಂದೇ ಎಂಬುದು. ಸಂಪೂರ್ಣ ಸ್ವಾತಂತ್ರ್ಯ ಅರ್ಥಾತ್ ಸಾಕ್ಷಾತ್ಕಾರ ಪಡೆಯಬೇಕೆಂದಿದ್ದ ಪ್ರತಿಯೋರ್ವನೂ ಒಂದಿಲ್ಲೊಂದು ದಿನ ಆ ದಾರಿಗೆ ಬರಲೇಬೇಕು. ಸಹಜಮಾರ್ಗವು ಬಹುಮಟ್ಟಿಗೆ 'ರಾಜಯೋಗ'ದ ಗುಂಟ ನಿಕಟವಾಗಿ ಮುಂದುವರಿಯುತ್ತದೆ. ಆದರೆ ಆ ಪದ್ಧತಿಯ ಬಾಹ್ಯಾಚರಣೆಯ ಅತಿರೇಕಗಳನ್ನು ತೆಗೆದುಹಾಕಿ ಕೆಲವೊಂದು ಬದಲಾವಣೆಗಳನ್ನು ಮತ್ತು ತಿದ್ದುಪಡಿಗಳನ್ನು ಮಾಡಲಾಗಿದೆ.

ಗುರುಗಳ ಸಹಾಯ ಸಹಜಮಾರ್ಗ ಸಾಧನಾ ಪದ್ಧತಿಯ ಒಂದು ವಿಶೇಷ ಲಕ್ಷಣ. ಹಾಗಿರುವುದರಿಂದ, 'ಪ್ರಾಣಾಹುತಿ'ಯೆಂಬ ಯೌಗಿಕ ಪ್ರಕ್ರಿಯೆಯ ಮೂಲಕ ಯೋಗ ಶಕ್ತಿಯನ್ನು ಸಂವಹನಗೊಳಿಸಿ ತನ್ನನ್ನು ಮುಂದಕ್ಕೆ ಕೊಂಡೊಯ್ಯಲು ಸಮರ್ಥನಾದ ಗುರುವನ್ನು ಆರಿಸಿಕೊಳ್ಳಬೇಕಾದದ್ದು ಅಗತ್ಯವಾಗುತ್ತದೆ. ಗುರುವು ತನ್ನ ಅಂತಃಶಕ್ತಿಯನ್ನು ಪ್ರಯೋಗಿಸಿ ಅಭ್ಯಾಸಿಯಲ್ಲಿ ಸುಪ್ತವಾಗಿರುವ ಶಕ್ತಿಗಳನ್ನು ಜಾಗ್ರತಗೊಳಿಸಿ, ತೀವ್ರ ಕ್ರಿಯಾಶೀಲಗೊಳಿಸಿ, ಅವನ ಹೃದಯದ ಕಡೆಗೆ ದೈವೀಶಕ್ತಿಯ ಪ್ರವಾಹವನ್ನು ಪ್ರಾಣಾಹುತಿಯ ದ್ವಾರಾ ಹರಿಯುವಂತೆ ಮಾಡುತ್ತಾನೆ. ಅದರ

ಪರಿಣಾಮವಾಗಿ ಅಭ್ಯಾಸಿಯು ಹೆಚ್ಚು ಹೆಚ್ಚು ಆನಂದಾನುಭವ ಹೊಂದುತ್ತ ಆಧ್ಯಾತ್ಮಿಕ ಪ್ರಗತಿ ಹೊಂದಲಾರಂಭಿಸುತ್ತಾನೆ. ಅಭ್ಯಾಸಿ ಅದನ್ನು ಸ್ವೀಕರಿಸಲು ಸಿದ್ಧನಾಗಬೇಕು ಅಷ್ಟೆ. ಅಂದರೆ, ಅದನ್ನು ಸ್ವೀಕರಿಸಲು ಸಮರ್ಥನೂ ಅರ್ಹನೂ ಆಗಬೇಕು. ಈ ರೀತಿಯಲ್ಲಿ, ಈ ಹಿಂದೆ ಯಾವುದಕ್ಕೆ ಸಂತತ ಪರಿಶ್ರಮ ಮತ್ತು ಕಷ್ಟಗಳನ್ನು ಎದುರಿಸುವುದು ಆವಶ್ಯಕವಾಗಿತ್ತೋ, ಅದನ್ನು ಅತ್ಯಂತ ಕಡಿಮೆ ಪರಿಶ್ರಮದಿಂದ, ತೀರ ಅಲ್ಪಕಾಲದಲ್ಲಿಯೇ ಸಾಧಿಸಬಹುದು. ಆದರೆ ಅದೆಲ್ಲ ಪ್ರಯೋಗಾತ್ಮಕವಾದುದು, ಮಾತಿನಲ್ಲಿ ವಿವರಿಸಲಾಗುವುದಿಲ್ಲ. ಪ್ರಾಯೋಗಿಕ ಅನುಭವ ಮಾತ್ರವೇ ಅದರ ಲಾಭಗಳನ್ನು ಪ್ರಕಾಶಪಡಿಸಬಲ್ಲದು.

ಅನೇಕರು 'ಶಾಂತಿ'ಯ ಸ್ಥಿತಿಯ ಸ್ವಾದವನ್ನು ಅನುಭವಿಸಿರಲಿಕ್ಕೆ ಸಾಕು. ವಾಸ್ತವವಾಗಿ, ನಿಜವಾದ ಶಾಂತಿಯೆಂದರೇನೆಂಬುದು ವಾಸ್ತವಿಕ ಸ್ಥಿತಿಯು, ಗ್ರಹಿಕೆಗೆ ಮೀರಿದುದು. ಅಲ್ಲಿ ಯಾವ ವಿರೋಧಕ್ಕೂ ಆಸ್ಪದವಿಲ್ಲ. ಅದು ಶಾಂತಿಯೂ ಅಲ್ಲ, ತಳಮಳವೂ ಅಲ್ಲ; ಅದು ಸಂಯೋಗವೂ ಅಲ್ಲ, ವಿಯೋಗವೂ ಅಲ್ಲ; ಆನಂದವೂ ಅಲ್ಲ, ಅದರ ವಿರುದ್ಧವಾದುದೂ ಅಲ್ಲ. ನಿಜಕ್ಕೂ ನಾವು ಯಾವುದಕ್ಕೋಸ್ಕರ ನೋವನ್ನು ಬೆಳೆಸಿಕೊಂಡಿದ್ದೆವೋ ಅದೇ ಅದು. ನಿಮಗೆಲ್ಲರಿಗೂ ಆ ನೋವಿನ ಸ್ವಾದ ಸಿಗಲಿ. ಅದನ್ನು ಬೆಳೆಸಿಕೊಳ್ಳುವುದೇನೂ ಕಷ್ಟವಲ್ಲ. ದೃಢಸಂಕಲ್ಪ ಮತ್ತು ಅವಿಚ್ಛಿನ್ನ ಲಕ್ಷ್ಯಮಾತ್ರವೇ ಆ ಉದ್ದೇಶಸಾಧನೆಗೆ ಬೇಕಾದುದು. ಆಗ ನೀವು ಅರಸುತ್ತಿರುವುದು ನಿಮ್ಮ ನಿಕಟದಲ್ಲಿಯೇ ನಿಮ್ಮೊಡನೆಯೇ ಇದೆ ಎಂಬುದು ಅರಿವಾಗುವುದು, ಅಷ್ಟೇಕೆ, ನೀವು ಯಾವುದನ್ನು ಅರಸುತ್ತಿರುವಿರೋ ಅದು ನೀವೇ ಆಗಿರಲೂಬಹುದು. ಅದಕ್ಕೆ, ದಾರಿಯಲ್ಲಿರುವ ಎಲ್ಲ ಕಳೆ-ಮೆಳೆಗಳನ್ನು ಸುಟ್ಟುಹಾಕಬಹುದಾದಂಥ ಜ್ವಲಂತ ಸ್ಥಿತಿ ನಿಮ್ಮ ಹೃದಯದಲ್ಲಿ ಇರತಕ್ಕದ್ದು.

ಯಾವ ರೀತಿಯಲ್ಲಿಯೇ ಆಗಲಿ, ಕರ್ಮಠ 'ಗುರುತ್ವ'ದ ಕಲ್ಪನೆಯನ್ನು ಪ್ರತಿಪಾದಿಸುವುದು ನನ್ನ ಉದ್ದೇಶವಲ್ಲ. ನಮ್ಮ ಸಂಸ್ಥೆಯಲ್ಲಿ ಪರಸ್ಪರ ಅಗತ್ಯವಿರುವ ಸಹಾಯವನ್ನೊದಗಿಸುತ್ತ ಸೇವೆ ಮತ್ತು ತ್ಯಾಗದ ಭಾವದಿಂದ ಸಾಮಾನ್ಯ ಭ್ರಾತೃಭಾವವನ್ನು ನಾವು ಇಟ್ಟುಕೊಳ್ಳುತ್ತೇವೆ. ಜಾತಿ, ಪಂಥ, ಲಿಂಗ, ವರ್ಣಗಳ ಭೇದವಿಲ್ಲದೆ, ಪ್ರತಿಯೊಬ್ಬರಿಗೂ ಸಹಜಮಾರ್ಗ ಪದ್ಧತಿಯ ಆಧ್ಯಾತ್ಮಿಕ ಸಾಧನಾನುಸರಣೆ ಹಾಗೂ ಶಿಕ್ಷಣ ಮುಕ್ತವಾಗಿ ಲಭ್ಯವಿದೆ. ಸತ್ಯಾನ್ವೇಷಕರು 'ಅಭ್ಯಾಸ'ಮಾಡಿ ಅನುಭವ ಪಡೆಯಲು ಮುಂದೆ ಬಂದು, ನನ್ನ ಗುರುಮಹಾರಾಜರ ಕೃಪೆಯಿಂದ ಶ್ರೇಷ್ಠತಮ ಲಾಭ ಹೊಂದಬಹುದು. ನನ್ನ ಗುರುಗಳು ಭಾರತೀಯ ದರ್ಶನಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆದಿಟ್ಟಿದ್ದಾರೆ. ಆ ಪರಮ ಗುರುಗಳ ಕೃಪಾದೃಷ್ಟಿಯು ಎಲ್ಲರಿಗೂ ಅಂತಿಮ ಗುರಿಯ ಸಾಕ್ಷಾತ್ಕಾರಕ್ಕೆ ಮಾರ್ಗದರ್ಶನ ನೀಡಿ ಮಾನವನ ಜೀವನದ ಉದ್ದೇಶವು ಸಫಲಗೊಳ್ಳುವಂತೆ ಮಾಡಲಿ.

# ಅಧ್ಯಾಯ - ೨

# ಸತ್ಯ : ಅದರ ಸ್ಥಾಯೀ ಮತ್ತು ಕ್ರಿಯಾತ್ಮಕ ಮುಖಗಳು

## ಪರಮ ಸತ್ಯ

ಪರಮ ಸತ್ಯ ಅಥವಾ ಪರಮಾತ್ಮನ ಅಸ್ತಿತ್ವದ ಪ್ರಶ್ನೆಯನ್ನು ಕುರಿತು ಬಹಳಷ್ಟು ವಿವಾದಗಳಿವೆ. ನಿಜವಾದ ಸಮಸ್ಯೆಯಿರುವುದು, ನನ್ನ ಅಭಿಪ್ರಾಯದಲ್ಲಿ 'ಚಿರಂತನ ಕೇವಲತತ್ತ್ವ'ದ ಅಥವಾ ಪರಬ್ರಹ್ಮದ ಅಸ್ತಿತ್ವವನ್ನು ಸಿದ್ಧಮಾಡುವುದಾಗಲಿ ಅಥವಾ ಅಲ್ಲಗಳೆಯುವುದಾಗಲಿ ಅಲ್ಲ. ಸಮಸ್ಯೆಯಿರುವುದು ಅದನ್ನು ಪರ್ಯಾಪ್ತವೂ ತೃಪ್ತಿಕರವೂ ಆದ ರೀತಿಯಲ್ಲಿ 'ವ್ಯಾಖ್ಯೆ'ಯಲ್ಲಿ ಸ್ಪಷ್ಟಪಡಿಸುವುದು ಹೇಗೆಂಬುದು. ಬೇರೆ ಬೇರೆ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ, ವೈಯಕ್ತಿಕ ದುಃಖ, ಕಷ್ಟಗಳಿಂದ, ಆಶೋತ್ತರಗಳಿಂದ ಹುಟ್ಟಿ, ಬಲವನ್ನು ಪಡೆದ ಉತ್ಸಾಹಿ ಅಂಧಶ್ರದ್ಧೆಯ ಅಂಶವು ಅದಕ್ಕೆ ಮತ್ತಷ್ಟು ಗೊಂದಲಗಳನ್ನು ಸೇರಿಸಿದೆ. ಪರಿಣಾಮವೇನೆಂದರೆ, ತರ್ಕಶೀಲ, ವಿಚಾರವಂತ ಮನುಷ್ಯನು 'ದೇವರು' ಎಂಬ ಶಬ್ದದ ಪ್ರಸ್ತಾಪಮಾತ್ರದಿಂದಲೇ ಅಸಹ್ಯ ಪಡುವುದು ಸರಿಯಾಗಿಯೇ ಇದೆ ಎಂಬಂತಾಗಿದೆ.

ಆತ್ಯಂತಿಕ ಸತ್ಯ ಅಥವಾ ಪರಮಸತ್ಯದ ಬಗ್ಗೆ ವಿವಿಧ ಕಲ್ಪನೆಗಳಿವೆ. ತಮ್ಮ ತಮ್ಮ ತಿಳಿವಳಿಕೆ ಮತ್ತು ಯೋಗ್ಯತಾನುಸಾರ ಜನರು ಅವನನ್ನು ಪರಿಭಾವಿಸುತ್ತಾರೆ. ದೇವರನ್ನು ಕುರಿತ, ಸರ್ವಸಾಮಾನ್ಯವಾಗಿ ಅಂಗೀಕೃತವಾದ ಭಾವನೆಯೆಂದರೆ ಅವನು 'ಚಿರಂತನ ಶಕ್ತಿ' ಎಂಬುದು. ಆದರೆ, ತಾತ್ತ್ವಿಕ ದೃಷ್ಟಿಯು, ಎಲ್ಲ ನಾನಾತ್ವ ಮತ್ತು ಭೇದವನ್ನು ಮೀರಿದ 'ನಿರ್ಗುಣ ಬ್ರಹ್ಮ'ದ ಕಲ್ಪನೆಯನ್ನು ಒಳಗೊಳ್ಳುತ್ತದೆ. ಅದು ಗುಣ, ಕ್ರಿಯೆ, ಮತ್ತು ಚಿತ್ ಶಕ್ತಿಗೆ ಅತೀತವಾದುದು. ಈ ನಿರ್ಗುಣ ಬ್ರಹ್ಮವೇ ಅಸ್ತಿತ್ವದ ಆತ್ಯಂತಿಕ ಕಾರಣವೂ, ಆಧಾರವೂ ಮತ್ತು ಸಂಪೂರ್ಣ ವ್ಯಕ್ತ ಸೃಷ್ಟಿಯ ಕ್ರಿಯಾತೀತ ಕೇಂದ್ರವೂ ಆಗಿರುವುದೆಂದು ಪರಿಗಣಿಸಲಾಗಿದೆ. ಅದನ್ನೇ 'ಪರಬ್ರಹ್ಮ'ವೆಂದೂ ಕರೆಯಲಾಗಿದೆ. ಅನಂತರ ಬರುವುದು 'ಪರಮ ಸತ್ತೆ'ಯೇ ದೇವರು ಎಂಬ ಕಲ್ಪನೆ. ಸಕಲ ವೈವಿಧ್ಯ ವಿಭಿನ್ನತೆಗಳನ್ನು ಒಳಗೊಂಡ ವಿಶ್ವವನ್ನು ವೀಕ್ಷಿಸುವ ನಾವು, ಅದರ ಕರ್ತೃ ಮತ್ತು ನಿಯಾಮಕನೊಬ್ಬನಿರುವನೆಂಬ ನಂಬಿಕೆ

ತಳೆಯುವಂತಾಗುತ್ತದೆ. ಅವನನ್ನು ನಾವು ಈಶ್ವರ ಅಥವಾ 'ಸಗುಣಬ್ರಹ್ಮ' ಎಂದು ಕರೆಯುತ್ತೇವೆ. ಅವನು ಸಕಲ ಉತ್ತಮಗುಣಗಳನ್ನುಳ್ಳ ಸರ್ವ ಶಕ್ತ, ಸರ್ವಜ್ಞ 'ಚಿರಂತನ ಸತ್ತೆ' ಎಂದು ಭಾವಿಸುತ್ತೇವೆ; ಅವನೇ ಜಗತ್ತಿನ ಮೂಲಕಾರಣನೂ, ಸ್ಥಿತಿಕರ್ತನೂ, ಲಯಕರ್ತನೂ ಆಗಿದ್ದಾನೆ.

ನಿಮ್ನ ಮಟ್ಟದ ದೃಷ್ಟಿಕೋನದಿಂದ ನೋಡಿದಾಗ ಮಾತ್ರ (ಮತ ಧರ್ಮಗಳಲ್ಲಿ ಕಲ್ಪಿತನಾದ) 'ದೇವರು' ಪೂಜನೀಯ ವಸ್ತುವಾಗುತ್ತಾನೆ. ಅದೇ ಬಹುತೇಕ ಎಲ್ಲ ಮತ-ಧರ್ಮಗಳ ಅಂತಿಮ ನೆಲೆ, ಗಂತವ್ಯ. ಈ 'ಸಗುಣಬ್ರಹ್ಮ'ವೇ 'ಅಪರಬ್ರಹ್ಮ'ವೆಂದೂ ಕರೆಯಲ್ಪಡುತ್ತದೆ. ಮೇಲೆ ಹೇಳಿದ ಎರಡೂ ಕಲ್ಪನೆಗಳ ಬಗ್ಗೆ ಮತಧರ್ಮಗಳಲ್ಲಿ ಬಹಳೇ ಹೇಳಲ್ಪಟ್ಟಿದೆ. 'ಸಗುಣ ಬ್ರಹ್ಮ'ಕ್ಕಿಂತ 'ನಿರ್ಗುಣ ಬ್ರಹ್ಮ'ದ ಕಲ್ಪನೆ ಹೆಚ್ಚಿನದು ಎಂಬುದು ಕೆಲವರ ಅಭಿಪ್ರಾಯ. ಇನ್ನಿತರರ ದೃಷ್ಟಿ ಅದಕ್ಕೆ ವಿರುದ್ಧವಾದುದಾಗಿದೆ. ನಿಜಕ್ಕೂ ಇಬ್ಬರೂ ತಪ್ಪುತ್ತಿದ್ದಾರೆ. ಅವರು ನಿರ್ಗುಣ ಬ್ರಹ್ಮವನ್ನೂ ಹೊಂದುವುದಿಲ್ಲ, ಸಗುಣ ಈಶ್ವರನನ್ನೂ ಪಡೆಯುವುದಿಲ್ಲ. ಎರಡು ಮಾರ್ಗಗಳುಂಟು ಎಂಬುದೇನೋ ನಿಜವೇ, ಆದರೆ ಗುರಿ ಮಾತ್ರ ಒಂದೇ; ಅದೆಂದರೆ ಪರವಸ್ತುವಿನ ಅರ್ಥಾತ್ ಚಿರಂತನವಾದ 'ಕೇವಲ' ವಸ್ತುವಿನ ಸಾಕ್ಷಾತ್ಕಾರ. ಎರಡೂ ಕಲ್ಪನೆಗಳೂ, ಅವುಗಳನ್ನು ಸಾಮಾನ್ಯವಾಗಿ ತಿಳಿಯಲಾದ ರೀತಿಯಲ್ಲಿ, ದಾರಿತಪ್ಪಿಸುವಂಥವಾಗಿವೆ. ವಾಸ್ತವಿಕವಾಗಿ ದೇವರು ಸಗುಣನೂ ಅಲ್ಲ, ನಿರ್ಗುಣನೂ ಅಲ್ಲ; ಅವೆರಡಕ್ಕೂ ಅತೀತನಾಗಿದ್ದಾನೆ. 'ಅವನು ಎಂತಿರುವನೋ ಅಂತೆಯೇ ಇದ್ದಾನೆ'. 'ನಿರ್ಗುಣ' ಎಂದು ಅವನನ್ನು ಕಲ್ಪಿಸುವವರು ನಾವು; ಮತ್ತು ಅವನನ್ನು 'ಸಗುಣ'ನನ್ನಾಗಿ ಮಾಡುವವರೂ ನಾವೇ. ಈ ವಿವಾದಗಳಿಂದ ಪಾರಾಗಲು ನಾವು ಮಾಡಬೇಕಾದುದೇನೆಂದರೆ, ಅದು ಸಗುಣವೇ ಇರಲಿ, ನಿರ್ಗುಣವೇ ಇರಲಿ, 'ಆದಿ ತತ್ತ್ವ'ದ ಮೇಲೆ ನಮ್ಮ ದೃಷ್ಟಿಯನ್ನು ಸ್ಥಿರಗೊಳಿಸಬೇಕು. ಅದು ಏನೇ ಇರಲಿ, ಅದನ್ನು ನಾವು ಪ್ರೀತಿಸಬೇಕು.

ಮತಧರ್ಮದ ಮೇರೆಗಳೊಳಗೆ ನಾವು ಸೀಮಿತಗೊಂಡು ಇರುವವರೆಗೂ ಮತಧರ್ಮದ ದೇವರೇ ನಮ್ಮ ದೃಷ್ಟಿಯಲ್ಲಿರುತ್ತಾನೆ. ನಾವು ಯಾವುದಾದರೊಂದು ದೃಷ್ಟಿಕೋನದಲ್ಲಿ ಸಿಕ್ಕಿಬಿದ್ದಿರುತ್ತೇವೆ. ಮತಧರ್ಮದ ಮೇರೆಗಳನ್ನು ಮೀರಿ ಹೋದಾಗ ಮಾತ್ರ ಅತ್ಯುನ್ನತ ಆಧ್ಯಾತ್ಮಿಕ ಸಿದ್ಧಿಯು ಸಾಧ್ಯವಾಗುವುದು. ನಿಜಕ್ಕೂ, ಮತಧರ್ಮವು ಕೊನೆಗೊಳ್ಳುವಲ್ಲಿ ಆಧ್ಯಾತ್ಮಿಕತೆ ಆರಂಭವಾಗುತ್ತದೆ. ಮತಧರ್ಮವು ಸ್ವಾತಂತ್ರ್ಯದತ್ತ ಸಾಗುವ ಮಾನವನ ಯಾತ್ರೆಗೆ ಅವನನ್ನು ಸಿದ್ಧಗೊಳಿಸುವ ಒಂದು ಪ್ರಾರಂಭಿಕ ಹಂತ ಮಾತ್ರ. ಮತಧರ್ಮದ ಕೊನೆಯೇ ಆಧ್ಯಾತ್ಮಿಕತೆಯ ಆರಂಭ, ಅಧ್ಯಾತ್ಮದ ಕೊನೆಯೇ ಸತ್ಯದ ಆರಂಭ, ಸತ್ಯದ ಕೊನೆಯೇ ನಿಜವಾದ ಆನಂದ. ಅದೂ ಹೊರಟುಹೋದಾಗ ನಾವು ಗುರಿಯನ್ನು ತಲುಪಿರುತ್ತೇವೆ. ಇದು ಅತ್ಯುನ್ನತ ಲಕ್ಷ್ಯ, ಅದನ್ನು ಶಬ್ದಗಳಲ್ಲಿ ವ್ಯಕ್ತಪಡಿಸುವುದು ಅಸಾಧ್ಯ.

ಈ ರೀತಿ, ದೇವರನ್ನು ಒಂದು ವಿಶಿಷ್ಟ ಮತಧರ್ಮದ ಚೌಕಟ್ಟಿನಲ್ಲಿ ಕಾಣಲಾರೆವು. ಅವನು ಕೆಲವು ಆಕಾರ (ರೂಪ)ಗಳಿಗಾಗಲಿ, ಆಚಾರದ ವಿಧಿ-ವಿಧಾನಗಳಿಗಾಗಲಿ ಸೀಮಿತನಲ್ಲ; ಅಥವಾ ಧರ್ಮಗ್ರಂಥಗಳಲ್ಲಿಯೂ ಅವನನ್ನು ಹುಡುಕಿ ಕಾಣಲಾರೆವು. ಅವನನ್ನು ನಾವು ಹುಡುಕಬೇಕಾದುದು ನಮ್ಮ ಹೃದಯದ ಅಂತರಾಳದಲ್ಲಿ. ನಿಜವಾಗಿಯೂ ದೇವರು ಅತೀವ ಸರಳನೂ, ನಿರಾಡಂಬರನೂ ಆಗಿದ್ದಾನೆ. ಅವನು ಸ್ಥೂಲ ರೂಪಗಳಲ್ಲಿಲ್ಲ. ಅವನಲ್ಲಿ ಯಾವ ವಿಧದ ಸ್ಥೂಲತೆಯೂ ಇಲ್ಲ. ದೇವರು ಸರಳ ಮತ್ತು ಅತ್ಯಂತ ಸೂಕ್ಷ್ಮನಾಗಿದ್ದಾನೆ. ನಿಜವಾಗಿಯೂ, ಪರತತ್ತ್ವಕ್ಕೆ ಅದರ ಸರಳತೆ ಮತ್ತು ಶುದ್ಧತೆಗಳೇ ಒಂದು ತೆರೆಯಾಗಿದೆ.

'ಪರಮಾತ್ಮ' ಅಥವಾ 'ಪರತತ್ತ್ವ'ದ (ಆತ್ಯಂತಿಕ ಸತ್ಯದ) ಕಲ್ಪನೆಯನ್ನು ಅರಿಯಲು ನಾವು 'ದೇವರು (ಪರಮಾತ್ಮ) ಇಲ್ಲ' ಎಂಬ ನಾಸ್ತಿಕನ ನಿಲುವಿನಿಂದ ಪ್ರಾರಂಭಿಸೋಣ. ಅಂದರೆ, ಗಣಿತಶಾಸ್ತ್ರದ ಪರಿಭಾಷೆಯಲ್ಲಿ ಅದಕ್ಕೆ 'ಧನಾತ್ಮಕ' ಅಥವಾ 'ಋಣಾತ್ಮಕ' ಮೌಲ್ಯವನ್ನು ಕೊಡಲಾಗುವುದಿಲ್ಲ. ಹಾಗೆ ಯಾವುದೇ ಧನಾತ್ಮಕ ಅಥವಾ ಋಣಾತ್ಮಕ ಮೌಲ್ಯವಿಲ್ಲದಿರುವುದಕ್ಕೆ ಗಣಿತಶಾಸ್ತ್ರವು ಸೂಚಿಸುವ ಗುರುತು 'ಶೂನ್ಯ' ಅಥವಾ 'ಸೊನ್ನೆ'.

ಈಗ 'ಅಸ್ತಿತ್ವದಲ್ಲಿ ಇರುವುದು ಏನು?' ಎಂಬ ಪ್ರಶ್ನೆ ನಾಸ್ತಿಕನಿಗೆ ಎದುರಾಯಿತೆನ್ನೋಣ. ಒಬ್ಬ ನಿಷ್ಠಾವಂತ ನಾಸ್ತಿಕನು ಯಾವುದೊಂದು ವಸ್ತುವಿನ ಅಸ್ತಿತ್ವವನ್ನಾದರೂ ಶಂಕಿಸಿ ಅಲ್ಲಗಳೆಯಬಹುದು. ಆದರೆ ಹಾಗೆ ಶಂಕಿಸಿ ಅಲ್ಲಗಳೆಯುವವ ತನ್ನನ್ನೇ ಇಲ್ಲವೆನ್ನಲಾರನು. ಮತ್ತೆ ಗಣಿತದ ಪರಿಭಾಷೆಯಲ್ಲಿ ಹೇಳುವುದಾದರೆ, ಅದನ್ನು ಅನುಕೂಲಕ್ಕಾಗಿ 'ಒಂದು' ಎಂದೆನ್ನಬಹುದು.

'ಸೊನ್ನೆ'ಯ ಚಮತ್ಕಾರದ ಕಾರ್ಯವನ್ನು ನೋಡಿ. ಇರವೇ ಇಲ್ಲದ ಸೊನ್ನೆಯನ್ನು ಇರವು ಹೊಂದಿದ 'ಒಂದು' ಎಂಬುದರ ಬಲಕ್ಕೆ ಸೇರಿಸುತ್ತ ಹೋದಾಗ ಅದು ದೊಡ್ಡದಾಗುತ್ತ ಹೋಗುತ್ತದೆ. ಈ ವಿಸ್ತಾರಕ್ಕೆ, ಗ್ರಹಿಸಬಹುದಾದ 'ಮೇರೆ'ಯೇ ಇಲ್ಲವೆನ್ನಬಹುದು. ಈ ವಿಸ್ತೃತ ಅನಂತವನ್ನೇ ಉಪನಿಷತ್ತುಗಳು ದೊಡ್ಡಕ್ಕಿಂತ ದೊಡ್ಡದು (ಮಹತೋ ಮಹೀಯಾನ್) ಎಂದು ಗುರುತಿಸಿರುವುದು ಯೋಗ್ಯವೇ ಇದೆ. ಈಗ 'ಒಂದ'ರ ಎಡಭಾಗಕ್ಕೆ ಅರ್ಥಾತ್ ಅಭಾವಾತ್ಮಕ ಸ್ವರೂಪದ ಕಡೆಗೆ ಋಣಾತ್ಮಕ ಪ್ರಕ್ರಿಯೆಯೊಂದಿಗೆ, ಅಂದರೆ, ದಶಮಾಂಶ ಬಿಂದುವಿನೊಂದಿಗೆ ಸೊನ್ನೆಯನ್ನು ಸೇರಿಸುತ್ತ ಹೋಗಿರಿ. ಹೆಚ್ಚು ಹೆಚ್ಚು ಸೊನ್ನೆಗಳನ್ನು ಸೇರಿಸುತ್ತಹೋದಂತೆಲ್ಲ ಅದು 'ಒಂದ'ರ ಮೌಲ್ಯವನ್ನು ಸೊನ್ನೆಗೆ ಮತ್ತೂ ಹತ್ತಿರ ತರುತ್ತದೆ. ಮತ್ತೆ ಇಲ್ಲಿ ಕೂಡ 'ಸ್ವಾತ್ಮ'ದ ('ಒಂದ'ರ) ಈ ಸಂಕೋಚನಕ್ಕೆ ಮಿತಿಯೇ ಇಲ್ಲವೆನ್ನಬಹುದು. ಇದನ್ನೇ ಉಪನಿಷತ್ತುಗಳು ಚಿಕ್ಕದಕ್ಕಿಂತ ಚಿಕ್ಕದು (ಅಣೋರಣೀಯಾನ್) ಎಂದು ಯೋಗ್ಯವಾಗಿಯೇ ವರ್ಣಿಸಿವೆ.

ದೇವರ ಬಗ್ಗೆ ಇರುವ ವಿವಾದವು ಕೃತಕವಾದುದೆಂದು ನನ್ನ ನಂಬುಗೆ. ವಿವಿಧ ಸಾಂಸ್ಕೃತಿಕ ಕುಲಗಳ ಇತಿಹಾಸದ ಪ್ರವಾಹಗತಿಯಲ್ಲಿ 'ದೇವರ' ಮೇಲೆ ಆರೋಪಿಸಲಾದ ಅನೇಕ ತಪ್ಪು ಕಲ್ಪನೆಗಳಿಂದಾಗಿ ಅದು (ವಿವಾದವು) ಉಂಟಾದುದು. ಆ ಕಾರಣ ಈ ಸಮಸ್ಯೆಯನ್ನು ಎದುರಿಸುವಾಗ ಉದ್ವೇಗದ ನಿಲುವನ್ನು ಬಿಡಬೇಕಾದುದು ಅವಶ್ಯ. ಯಾಕೆಂದರೆ ಅದು ಮಾನವನ ದೃಷ್ಟಿಗೆ ಮಂಕು ಕವಿಯುವಂತೆ ಮಾಡಿ, ಗುರಿಯತ್ತ ಸಾಗುವ ಅವನ ಪ್ರಗತಿಗೆ ಬಾಧಕವಾಗುತ್ತದೆ.

ತಿಳಿವಳಿಕೆಯ ಸಲುವಾಗಿ ಅದನ್ನು 'ಶೂನ್ಯ' ಅಥವಾ 'ಕೇಂದ್ರ' ಅಥವಾ 'ಆಧಾರ' ಎಂದು ಕರೆಯಬಹುದು. ಪ್ರಕೃತಿಯಾಗಲಿ, ಪ್ರಪಂಚವಾಗಲಿ, ಆಧಾರವಿಲ್ಲದೆ ನಿಲ್ಲಲಾರದು. 'ಅಸ್ತಿತ್ವ'ಕ್ಕೆ (ಇರವು) ಒಂದು ಆಶ್ರಯವಿರಲೇಬೇಕು. ಆ ಆಶ್ರಯವೇ ದೇವರು. ಬ್ರಹ್ಮ ಅಥವಾ 'ಪರತತ್ತ್ವ' ಅದೇ 'ಭೂಮಾ'; ವಸ್ತುರಹಿತ ವಸ್ತು, ಶಕ್ತಿರಹಿತ ಶಕ್ತಿ.

ಇನ್ನು ಮುಂದೆ ಜನರಿಗೆ ತಿಳಿದಿರದೆನ್ನಬಹುದಾದ ಒಂದು ಗೂಢ ವಿಷಯದ ಮಹತ್ತ್ವವನ್ನು ತೆರೆದಿಡಬಹುದು. ಸಾಧಾರಣವಾಗಿ ಜನರು 'ಸತ್' ಎಂಬುದು ಪರವಸ್ತುವೆಂದು ಭಾವಿಸಿ ದೇವರ ಕುರಿತ ಜ್ಞಾನವನ್ನು ಅಳೆಯುವ ಅಳತೆಗೋಲಾಗಿ ವರ್ಣಿಸುತ್ತಾರೆ. ವಾಸ್ತವದಲ್ಲಿ ಅದು 'ತಮ'ದ, ಕೇವಲ ತಮದ ಮಂಡಲವೇ ಆಗಿದೆ. ನಿಜವಾದ ಯೋಗಿಗೆ ಸಂಪಾದಿಸಲು ಯೋಗ್ಯವಾದ ಏಕೈಕ ವಸ್ತುವೆಂದರೆ ಅದೇ. ಆ ಮಟ್ಟದ ವರೆಗೆ ಪ್ರವೇಶ ಪಡೆಯುವುದು ಅತ್ಯಂತ ಕಠಿಣವೆಂಬುದರಲ್ಲಿ ಸಂದೇಹವಿಲ್ಲ. 'ಸತ್'ನ್ನು ಪಡೆಯುವುದು ಸುಲಭದ ಕೆಲಸ. ಆದರೆ 'ತಮ' ಎಂದು ಕರೆಯಲಾದ ಸ್ಥಿತಿಯು ಸುಲಭಸಾಧ್ಯವಲ್ಲ. ಅದನ್ನು ಮೀರಿದುದಾವುದೂ ಇಲ್ಲ. ಜನರು ಅದನ್ನು ಕುರಿತು ಬಹಳಷ್ಟು ಮಾತನಾಡುತ್ತಾರೇನೋ ಸರಿ, ಆದರೆ ಅದರ ವರೆಗೆ ಪ್ರವೇಶಪಡೆಯಲು ಪ್ರಯತ್ನಪಡುವವರು ಇಲ್ಲವೆಂದರೂ ಸರಿಯೆ. ಅಲ್ಲಿ ಶುದ್ಧತೆ, ಸರಳತೆ, ಶಾಂತಿಗಳು ಕೂಡ ಇಲ್ಲ. (ಲುಪ್ತವಾಗಿಹೋಗುತ್ತವೆ). ನಿಜವಾಗಿ ಅದು ಇವೆಲ್ಲವುಗಳಿಗೂ ಆಚೆಗೆ ಇದೆ. ಜನ್ಮಜನ್ಮಗಳ, ಬಹುವರ್ಷಗಳ ನಿರಂತರ ಪರಿಶ್ರಮದಿಂದ ಸಂಪಾದಿಸಬಹುದಾದ ವಸ್ತು ಇದೇ. ಪ್ರಪಂಚದ ಅತಿದೊಡ್ಡ ಸಂತರೂ ಕೂಡ ಈ ವಿಷಯದಲ್ಲಿ ಆ ಮಟ್ಟಕ್ಕೆ ಏರಲಾಗಿರಲಿಲ್ಲವೆಂದು ನಾನು ಧೈರ್ಯದಿಂದ ಹೇಳಬಲ್ಲೆ. ಸಾಧಕನು ಪಡೆಯಲು ತಪಿಸುವ ಆತ್ಮನಿರಸನದ ಸ್ಥಿತಿ ಅದರಲ್ಲಿದೆ. ಅದೇ ನಿಜವಾದ ಜೀವನ. ಆ ಬಿಂದುವನ್ನು ತಲುಪುವುದಕ್ಕೂ ಮುಂಚಿತವಾಗಿಯೇ ಎಲ್ಲ ಕ್ರಿಯೆಗಳೂ ಕೊನೆಗೊಳ್ಳುತ್ತವೆ. ಅದು ಕೇಂದ್ರೀಯ ಬಿಂದು, 'ಸತ್ತೆ'ಯ ನೈಜ ಸ್ಥಿತಿ ಅದೇ. ಬಹು ಪರಿಶ್ರಮಪಟ್ಟಿದ್ದಾಗಲೂ ಅದು ಅನೇಕ ಸಂದರ್ಭಗಳಲ್ಲಿ (ಜನರಿಗೆ) ಕೈಗೆಟುಕದೆ ಹೋಗಿದೆ.

ಜನರು ಈ 'ತಮ'ದ ಸ್ಥಿತಿಯನ್ನು ತಮ್ಮ ಅತ್ಯಂತ ಘಾತಕ ಶತ್ರುವೆಂದು ಭಾವಿಸುತ್ತಾರೆ. ಯಾರಲ್ಲಿ ಸಂಪೂರ್ಣ ಅಜ್ಞಾನದ ಸ್ಥಿತಿಯು ಸಂಪೂರ್ಣ ತಾನೇ ತಾನಾಗಿ ನೆಲೆಗೊಂಡಿದೆಯೋ ಅಂಥ ವ್ಯಕ್ತಿಯನ್ನು ಪರಿಶೀಲಿಸಿನೋಡಿದರೆ, ಪ್ರಗತಿಯ ಅತ್ಯುನ್ನತ ಶಿಖರಸ್ಥಿತಿಯನ್ನು ಅವನಲ್ಲಿ ಕಾಣಬಹುದು. ಅವನು ಶಿಶುಸದೃಶನಾಗಿರುತ್ತಾನೆ; ಅವನಿಗೆ ತನ್ನದೇ ಸ್ಥಿತಿಯ ಅರಿವು ಕೂಡ ಇರುವುದಿಲ್ಲ. ಆದರೆ ಅದಕ್ಕೆ 'ಸತ್ತಿ'ನ ಅಲ್ಪ ಸ್ಪರ್ಶವಾದರೆ ಸಾಕು, ಆಗ ಆತನಿಗೆ ತನ್ನ 'ತಮ'ದ ಸ್ಥಿತಿಯ ಅರಿವುಂಟಾಗಲು ಆರಂಭವಾಗುತ್ತದೆ. ಯಾಕೆಂದರೆ, ಇವೆರಡರ ಸಂಧಿ ಬಿಂದುವು, ಯಾವ ಸ್ಥಿತಿಯು ಸೃಷ್ಟಿಗೆ ಆಧಾರವಾಗಿತ್ತೋ ಅದಕ್ಕೆ ಸದೃಶವಾದ ಒಂದು ಸ್ಥಿತಿಯನ್ನುಂಟುಮಾಡುವತ್ತ ಕರೆದೊಯ್ಯುತ್ತದೆ.

ಸಾಮಾನ್ಯವಾಗಿ ಹೊಳೆಯುವ ಮತ್ತು ಕೋರೈಸಿ ತೋರುವ ವಸ್ತುವಿನೆಡೆಗೆ ನಮ್ಮ ಕಣ್ಣು ಸೆಳೆಯಲ್ಪಡುತ್ತದೆ. ಅದನ್ನೇ ನಾವು ಸಾಮಾನ್ಯವಾಗಿ 'ಸತ್' ಎಂದು ಭ್ರಮಿಸುತ್ತೇವೆ. ಈ ಹೊಳೆಯುವ ವಸ್ತು ಮಾಯೆಯಲ್ಲದೇ ಬೇರೇನೂ ಅಲ್ಲ. ಅದನ್ನು ಬಹಳಷ್ಟು ಎತ್ತಿ ಹೊಗಳುವವರು ಅಧ್ಯಾತ್ಮದ ವಲಯದಿಂದ ಕೂಡ ಬಹುದೂರವಿದ್ದಾರೆ, ಇನ್ನು 'ಸತ್ಯ'ದ ಮಾತು ಹೇಳುವುದೇ ಬೇಡ. ಆದರೆ ಜನರು ಎಂಥ ಜಡತ್ವದ ಸ್ಥಿತಿಯನ್ನು ಬೆಳೆಸಿಕೊಂಡಿದ್ದಾರೆಂದರೆ, ಅವರು ಈ ವಿಷಯದಲ್ಲಿ ಏನನ್ನೂ ಗ್ರಹಿಸುವ ಅಥವಾ ಕೇಳಿಸಿಕೊಳ್ಳುವ ಒಲವೇ ಇಲ್ಲದವರಾಗಿದ್ದಾರೆ. ಬೆಳಕು, ಕತ್ತಲೆ ಇವೆರಡಕ್ಕೂ ಆಚೆಗೆ ಇರುವ ನೈಜ ಸತ್ಯತೆಯ ದರ್ಶನ ಅವರಿಗೆ ಮರೆಯಾಗಿಬಿಟ್ಟಿದೆ. ಇದನ್ನೇ ಮಿಷನ್ನಿನ ಬೋಧಚಿಹ್ನೆಯಲ್ಲಿ ತೋರಿಸಿರುವುದು. ನಿಜವಾದ ಅರ್ಥದಲ್ಲಿ ಮನುಷ್ಯನ ಪರಿಪೂರ್ಣತೆಯ ಸ್ಥಿತಿಯೆಂದರೆ ಅದೇ. ಆ ಸ್ಥಿತಿಯಿಂದ ಹಿಂದೆ ಸರಿಯುವುದಾಗಲಿ, ಪತನವಾಗುವುದಾಗಲಿ ಸಾಧ್ಯವಿಲ್ಲ. ಇದು ತಾತ್ತ್ವಿಕ ದರ್ಶನದ ಅತಿಸೂಕ್ಷ್ಮ ಸಂಗತಿ. ಈ ಬೆಳಕೂ ಅಲ್ಲದ, ಕತ್ತಲೆಯೂ ಅಲ್ಲದ ಸ್ಥಿತಿಯನ್ನು ಸಂತರು 'ಸತ್ಪದ' ಎಂದು ಕರೆದಿದ್ದಾರೆ. ಆದರೆ ಅದು ಸರಿಯಲ್ಲ, ಯಾಕೆಂದರೆ ಈ ಸ್ಥಿತಿ ಅದಕ್ಕಿಂತ ಬಹಳ ಆಚೆಗಿದೆ. ಇದು ನಿಜವಾಗಿಯೂ ಬಹಳ ಆಚೆಗಿರುವ ಸತ್ಯದ ಪ್ರತಿಫಲನ ಮಾತ್ರ. ಈ ಪುಟಗಳನ್ನು ಓದುವ ಜನರಿಗೆ ಇದು ಆಶ್ಚರ್ಯವೆನಿಸಬಹುದು. ಆದರೆ, ನಾನಿದನ್ನು ಬರೆದಿರುವುದು, ಅಧ್ಯಾತ್ಮ ವಿದ್ಯೆಯಲ್ಲಿ ಪ್ರಗತಿಹೊಂದಿದ, ಈ ವಿಜ್ಞಾನದ ಸಂಪೂರ್ಣ ಜ್ಞಾನವಿರುವವರಿಗೋಸ್ಕರ. ಇದನ್ನು ಪ್ರಾಯೋಗಿಕ ಮಾರ್ಗದಲ್ಲಿ ಮಾತ್ರವೇ ಅನುಭವಿಸಿ ಕಾಣಬಹುದೇ ಹೊರತು, ಮತಧರ್ಮಗಳ ಪರಿಧಿಗಳೊಳಗೆ ಇದನ್ನು ಕಾಣಲಾಗದು. ಇದೊಂದು ಸಂಪೂರ್ಣ ಬೇರೆಯದೇ ಆದ ಮಾರ್ಗ. ತಮ್ಮ ಅಂತರ್ದೃಷ್ಟಿಯಿಂದ ಪ್ರಕೃತಿಯನ್ನು ನೋಡುವ ಸಾಮರ್ಥ್ಯ ಬೆಳೆಸಿಕೊಂಡು ಸಾಕಷ್ಟು ಅರ್ಹತೆ ಪಡೆಯದ ಬೇರೆ ಯಾರಿಗೂ ಇದು ಲಭ್ಯವಿಲ್ಲ. ಇದೇ ಸ್ವತಃ ಒಂದು ವಿಜ್ಞಾನವಾಗಿದೆ.

## ಸಾರೂಪ್ಯತೆ (Identity)

ಸಾರೂಪ್ಯತೆಯನ್ನು ಕುರಿತು ಹೇಳುವುದಾದರೆ ಅದು ಕ್ರಮೇಣ ಒಂದು ಚಿತ್–ತರಂಗವಾಗಿ ರೂಪತಾಳುವ, ಒಂದು ಸೂಕ್ಷ್ಮ ಭಾವರೂಪದ ಏನೋ ಒಂದು ವಸ್ತುವೆಂದು ಊಹಿಸಿಕೊಳ್ಳಬಹುದೆಂದು ನಾನು ಹೇಳಿಯೇನು. ಅದರ ನಿಜವಾದ ಅರ್ಥವನ್ನು ತಿಳಿಯಪಡಿಸುವುದು ಬಹಳ ಕಷ್ಟ. ಮೂಲದ ಪ್ರಜ್ಞೆಯನ್ನು ನಮ್ಮ ಅರಿವಿಗೆ ತರುವಂಥ ವಸ್ತುವೆಂದೋ, ಅಥವಾ ಮೂಲ ಪ್ರಜ್ಞೆಯ ಕಿಂಚಿತ್ ಸ್ಥೂಲ ಸ್ವರೂಪವೆಂದೋ ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಏನೋ ಒಂದು ಸ್ಥೂಲತರ ಆವರಣದಲ್ಲಿ ಪರಿವೃತಗೊಂಡ ಸತ್ಯವೇ ಎಂದೋ ಭಾವಿಸಬಹುದು. ಸ್ಥೂಲತರವಾದ ಸ್ವರೂಪವು ಅದರಾಚೆಗೆ ಇರುವ ಮತ್ತು ಅದರ ಅಸ್ತಿತ್ವಕ್ಕೆ ಕಾರಣವಾದ ಏನೋ ಒಂದು ವಸ್ತುವಿರಬೇಕೆಂಬ ಭಾವನೆಯನ್ನು ನಮ್ಮ ಹೃದಯದಲ್ಲಿ ಮೂಡುವಂತೆ ಮಾಡುವುದು. ಅದೇ ಸರದಿಯಲ್ಲಿ ಅದಕ್ಕೂ ಒಂದು ಕಾರಣವಿರಬೇಕೆಂಬ ತೀರ್ಮಾನಕ್ಕೆ ಯಾರಾದರೂ ಬರಬಹುದಾಗಿದೆ. ಈ ಅನುಕ್ರಮ ಗತಿಯು ನಮ್ಮ ಅರಿವಿನಾಚೆ ಮರೆಯಾಗಿ ಹೋಗುವ ಮಟ್ಟದವರೆಗೂ ಈ ಕಾರಣ ಮತ್ತು ಕಾರ್ಯಗಳ ಕ್ರಮಗತಿ ಮುಂದುವರಿಯುತ್ತದೆ. ಇದಕ್ಕೂ ಒಂದು ಕಾರಣವಿರಲೇ ಬೇಕೆಂದು ಯಾರಾದರೂ ತರ್ಕದ ಮೂಲಕ ಹೇಳಬಹುದು. ಆದರೆ, ಆಗ ಅದು ಮಾನವನ ಗ್ರಹಿಕೆಗೆ ಮೀರಿದುದು; ಅತಿಸೂಕ್ಷ್ಮಸ್ತರದಲ್ಲಿ ಅದನ್ನು ಸಾರೂಪ್ಯತೆ ಎಂದು ಅಂಕಿತಗೊಳಿಸಲಾಗಿದೆ ಎಂದರೆ ಸಾಕು. ದೇಹಧಾರಿಯಾದ ಪ್ರತಿಯೊಂದು ಜೀವಿಗೂ ಒಂದು ಸಾರೂಪ್ಯತೆ ಇರಲೇಬೇಕು. ಉನ್ನತ ಸ್ತರಗಳಿಗೆ ಹೋದಂತೆಲ್ಲ ಅದು ಹೆಚ್ಚು ಹೆಚ್ಚು ನವುರಾಗಿಯೂ, ಸೂಕ್ಷ್ಮವೂ ಆಗಿರುತ್ತದೆ. ಸಾರೂಪ್ಯತೆ ಎಷ್ಟು ಸೂಕ್ಷ್ಮವಾಗುತ್ತದೆಯೋ ಅದೇ ಪ್ರಮಾಣದಲ್ಲಿ ಮನುಷ್ಯನು ಜೀವನದಲ್ಲಿ ಹೆಚ್ಚು ಶಕ್ತಿಯುತನಾಗುತ್ತಾನೆ.

ಮಹಾಪ್ರಳಯದ ಸಮಯದ ವರೆಗೂ ಸಾರೂಪ್ಯತೆ ಉಳಿದಿರುತ್ತದೆ. ಆಗ ಅದು ತನ್ನ ವ್ಯಷ್ಟಿ–ಅನನ್ಯತೆಯನ್ನು ಕಳೆದುಕೊಳ್ಳುತ್ತದೆ ಅರ್ಥಾತ್ ವ್ಯಷ್ಟಿ–ಅನನ್ಯತೆಯು (ಸಾರೂಪ್ಯತೆಯು) ಸಮಷ್ಟಿಯ ಒಂದು (ಏಕೈಕ) ಅನನ್ಯತೆಯಲ್ಲಿ ಲಯಹೊಂದುತ್ತದೆ. ಇದು ಅನಂತರ ಮುಂದಿನ ಸೃಷ್ಟಿಗೆ ಕಾರಣವಾಗುತ್ತದೆ. ಈ ರೀತಿಯಲ್ಲಿ ಕೊನೆಗೊಳ್ಳುವುದು ವ್ಯಕ್ತಿತ್ವವೇ (Indiviality) ಹೊರತು ಸಾರೂಪ್ಯತೆ (Identity) ಅಲ್ಲ. ಹೀಗಿರುವುದಕ್ಕೆ ಕಾರಣವೆಂದರೆ, ಮೂಲದಲ್ಲಿ ಅರ್ಥಾತ್ ಕೇಂದ್ರದಲ್ಲಿರುವ ಸುಪ್ತ ಕ್ರಿಯೆ. ಅಲ್ಲಿ ಇರುವಿಕೆ (ಸತ್) ಮತ್ತು ಇಲ್ಲದಿರುವಿಕೆ (ಅಸತ್)ಗಳ ವ್ಯತ್ಯಾಸ ನಾಮಮಾತ್ರ.

## ವಿಶ್ವೋತ್ಪತ್ತಿ

ಪ್ರಪಂಚವು ಅನಾದಿ ಅಥವಾ ಅನೂಹ್ಯ ಕಾಲದಿಂದಲೂ ಇದೆ. ಕೆಲವರು ಸೃಷ್ಟಿ-ಶಕವನ್ನು ನಿರ್ಧರಿಸಲು ಪ್ರಯತ್ನಮಾಡಿರುವರಾದರೂ ಇದುವರೆಗೆ ಅದರ ಸರಿಯಾದ ದಿನಾಂಕವನ್ನು ಕಂಡುಹಿಡಿಯಲಾಗಿಲ್ಲ. ಸೃಷ್ಟಿಗೆ ಮುಂಚೆ ಇದ್ದ ಏಕೈಕವಾದುದೆಂದರೆ ದೈವತ್ವ, ಅದು ಯಾವ ಘನತ್ವ ಅಥವಾ ಸ್ಥೂಲತೆಯಿಲ್ಲದೆ, ತನ್ನ ಶುದ್ಧ ಮೂಲಸ್ಥಿತಿಯಲ್ಲಿತ್ತು. ಮತ್ತು ಎಲ್ಲ ವಸ್ತುಗಳೂ (ಪ್ರತಿಯೊಂದೂ) ತಮ್ಮ ಸಾರ ರೂಪದಲ್ಲಿ ಅದರಲ್ಲಿ ಲಯಹೊಂದಿದ ಸ್ಥಿತಿಯಲ್ಲಿದ್ದುವು. ಸೃಷ್ಟಿಯು ವ್ಯಕ್ತಗೊಳ್ಳುವ ಮೊದಲು ಕೇಂದ್ರದ ಸುತ್ತಲೂ ಮತ್ತು ಅದಕ್ಕೆ ನಿಕಟ ಸಾಮೀಪ್ಯದಲ್ಲಿ ಕೇವಲ ಅವ್ಯಕ್ತಚಲನೆ ಮಾತ್ರವಿತ್ತು, ಹಾಗೂ ಅದರಲ್ಲಿ ಸೃಷ್ಟಿಸಂಕಲ್ಪಭಾವವು ಇದ್ದಿತು. ಅದನ್ನು ಆದಿ ಮನ, ಅಥವಾ ವಿದ್ಯೆ (ಅವಿದ್ಯೆ) ಎಂದು ಕರೆಯಬಹುದು. ಗ್ರಹಿಕೆಗೋಸ್ಕರ ಅದನ್ನು ಚಲನೆ, ಕ್ಷೋಭ, ಸ್ಪಂದನ, ಶಕ್ತಿ ಅಥವಾ ಇನ್ನಾವುದೋ ಎಂದು ಕೂಡ ಕರೆಯಬಹುದು. ಅದು ಸೃಷ್ಟಿಗೂ, ಅದಕ್ಕೆ ಅಗತ್ಯವಾದ ಎಲ್ಲವುಗಳಿಗೂ ಆತ್ಯಂತಿಕ ಕಾರಣವಾಗಿತ್ತು. ಸೃಷ್ಟ್ಯುದ್ಭವದ ಕಾಲ ಸನ್ನಿಹಿತವಾದಾಗ ಗುಪ್ತ ಅಥವಾ ಸುಪ್ತವಾಗಿದ್ದ ಚಲನೆಯಲ್ಲಿ ಅಂತರ್ಗತವಾಗಿದ್ದ ಕಲ್ಪನೆಯು ಪಕ್ವಗೊಂಡು ಚಲನೆಯಲ್ಲಿ ಮಂಥನವನ್ನುಂಟು ಮಾಡಿತು ಮತ್ತು ಶಕ್ತಿ ಅಥವಾ ಊರ್ಜೆಯನ್ನು ಸೃಷ್ಟಿಸಿತು. ಆ ಶಕ್ತಿ ರಭಸದಿಂದ ಹೊರಹೊಮ್ಮಿತು. ಸೂಕ್ಷ್ಮಾತಿಸೂಕ್ಷ್ಮ ಕಣಗಳು ಶಾಖ ಹೊಂದಿದವು. ಹೀಗೆ ಮೊದಲ ದಿನದಿಂದಲೇ ಆವರಣಗಳುಂಟಾಗಲು ಪ್ರಾರಂಭವಾಯಿತು. ಸತತವಾಗಿ ಕಾವು ಪಡೆದುದರ ಪರಿಣಾಮವಾಗಿ ಕಣಗಳು ಚಲನೆಯನ್ನು ಪಡೆದವು. ಅದರ ತೀವ್ರತೆ ಹೆಚ್ಚುತ್ತ ಹೋಯಿತು ಮತ್ತು ಆವರಣದ ಮೇಲೆ ಆವರಣವನ್ನು ಸೇರಿಸುತ್ತ ಹೋಯಿತು. ತೀವ್ರತೆ ಮತ್ತು ಸ್ಪಂದನಗಳು ವರ್ಧಿಸುತ್ತ ಹೋಗುತ್ತಿರುವುದರ ಪರಿಣಾಮವಾಗಿ ಸ್ಥೂಲತೆ ಬೆಳೆಯಲಾರಂಭಿಸಿತು. ಪ್ರತಿಯೊಂದು ಕಣದ ಕ್ರಿಯೆಯೂ ಪ್ರಾರಂಭವಾಯಿತು ಹಾಗೂ ದ್ವಿಗುಣಗೊಳ್ಳುತ್ತ ಹೋಗಿ, ರೇಷ್ಮೆಹುಳು ತನ್ನ ಗೂಡಿನಲ್ಲಿಯೇ ಮುಚ್ಚಲ್ಪಡುವಂತೆ, ಸತ್ಯವು (ಪರತತ್ತ್ವವು) ಆವೃತಗೊಳ್ಳುವವರೆಗೂ ಅದು ಮುಂದುವರಿಯಿತು.

ಹೀಗೆ ಸೃಷ್ಟಿಯ ಪ್ರಾರಂಭದಲ್ಲಿ ಒಂದು ಕ್ಷೋಭ ಅಥವಾ ಚಲನವಿತ್ತು. ಈ ಚಲನೆ ಸೃಷ್ಟಿಯ ಆಧಾರವಾಯಿತು. ದೇವರ ನಂತರದ ನಿಕಟತಮ 'ಪವಿತ್ರ ವಸ್ತುವು' ಅದು. ಅದೇ ಮಾನವ ಮನಸ್ಸಿನ ರೂಪದಲ್ಲಿ ವ್ಯಕ್ತವಾಯಿತು. ಸೃಷ್ಟ್ಯುದ್ಭವದ ಸಮಯ ಸನ್ನಿಹಿತವಾದಾಗ, ಅದರ ಸಿದ್ಧತೆಗಳು ಮೊದಲಾದುವು, ಧಾರೆಗಳು ಪ್ರವಹಿಸಿದವು, ಸ್ಪಂದನಗಳು ತೀವ್ರಗೊಂಡವು, ಗ್ರಂಥಿಗಳ ರಚನೆ ಪ್ರಾರಂಭವಾಯಿತು, ಚಲನಶಕ್ತಿಯು ಸಂಘಾತಗೊಂಡಿತು. ಮಂಥನ ಪ್ರಕ್ರಿಯೆ ಆರಂಭವಾಯಿತು. ವಸ್ತುಗಳು ಪ್ರತ್ಯೇಕ ಆಕಾರಗಳನ್ನು ಪಡೆಯುವವರೆಗೂ ಕ್ರಿಯೆ-ಪ್ರತಿಕ್ರಿಯೆಗಳು ಮುಂದುವರಿದುವು. ಸೃಷ್ಟ್ಯುದ್ಭವ ಕ್ರಿಯೆಯು ಪೂರ್ಣ ರಭಸ ಪಡೆಯಿತು.

ಚೇತನಾಚೇತನ ವಸ್ತುಗಳು ವ್ಯಕ್ತ ಅಸ್ತಿತ್ವದಲ್ಲಿ ಮೈದೋರತೊಡಗಿದವು. ಕಾಲಕ್ರಮದಲ್ಲಿ ಎಲ್ಲ ವಸ್ತುಗಳೂ ಪ್ರಕಟಗೊಂಡು ವಿಶ್ವವು ರೂಪು ತಳೆಯಿತು. ಕೇಂದ್ರದ ಸುತ್ತಲೂ ನಡೆಯುತ್ತಿರುವ ಪರಿಭ್ರಮಣ ಚಲನೆಯ ಪರಿಣಾಮವಾಗಿ ಪ್ರಕೃತಿಯು ವ್ಯಕ್ತರೂಪ ಪಡೆಯಿತು. ಚಲನೆಯಿಂದ ಶಕ್ತಿಯುಂಟಾಗಿ ಅದು ಅನಂತರ ಸೃಷ್ಟಿಗೆ ಕಾರಣವಾಗಿ ಸಂದಿತು. ವಿಶ್ವ ಪ್ರಕಟೀಕರಣಕ್ಕೆ ಕಾರಣವಾಗಲು ಉದ್ಭವಿಸಿ ಬಂದ ಈ ಆದಿಮ ಚಲನೆ ಅಥವಾ ಕ್ಷೋಭವು ಪರವಸ್ತುವಿನ (ಪರಮಾತ್ಮನ) ಸುಪ್ತ ಸಂಕಲ್ಪದಿಂದ ಕ್ರಿಯಾರೂಪಕ್ಕೆ ತರಲ್ಪಟ್ಟಿತು. ಈ ಕ್ಷೋಭವು ಸುಪ್ತಶಕ್ತಿಗಳಿಗೆ ಮತ್ತು ಸೃಷ್ಟಿಪ್ರಕ್ರಿಯೆಗೆ ಚಾಲನೆ ನೀಡಿತು. ಕ್ಷೋಭ ಅಥವಾ ಪ್ರಚೋದಕದಂತೆ ಕಾಣಿಸಿಕೊಂಡ ಅದೇ ಮೂಲ ಶಕ್ತಿಯು ಪ್ರತಿಯೊಂದು ಜೀವಿಯಲ್ಲಿಯೂ (ಸತ್ತೆಯಲ್ಲಿಯೂ) ಪ್ರಮುಖ ಕ್ರಿಯಾಶಕ್ತಿಯ ರೂಪದಲ್ಲಿ ಅವತರಣಗೊಂಡಿತು. ಮಾನವನಲ್ಲಿ ಅದು 'ಮನಸ್ಸು' ಎಂಬ ಸಂಜ್ಞೆಯನ್ನು ಪಡೆಯಿತು. ಕ್ಷೋಭದಲ್ಲಿ ಇದ್ದಂಥ ಅದೇ ಸುಪ್ತ ಸಂಕಲ್ಪವು ಇದರ (ಮಾನವನ ಮನಸ್ಸಿನ) ಮೂಲದಲ್ಲಿಯೂ ಇದೆ. ಈ ರೀತಿ ಮಾನವನ ಮನಸ್ಸು ಮೂಲಶಕ್ತಿಯೊಂದಿಗೆ ಅರ್ಥಾತ್ ಪ್ರಥಮ ಕ್ಷೋಭದೊಂದಿಗೆ ನಿಕಟ ಸಾರೂಪ್ಯ ಹೊಂದಿದೆ. ಹಾಗಿರುವುದರಿಂದಲೇ ಅವೆರಡರ ಕಾರ್ಯಗಳೂ ನಿಕಟ ಸಾದೃಶ್ಯ (ಸಮರೂಪತೆ) ಹೊಂದಿವೆ.

ಕ್ಷೋಭದ ಕಾರಣದತ್ತ ಗಮನ ಸೆಳೆಯುತ್ತಲೇ ನಾನು ಸೃಷ್ಟ್ಯುದ್ಭವ ಕ್ರಿಯೆಯು ಪ್ರಾರಂಭವಾಗುವುದಕ್ಕೆ ಮುಂಚೆ ಪರಿಪೂರ್ಣ ಶಾಂತತೆ (ಶಾಂತ ಸ್ಥಿತಿ) ನೆಲೆಸಿತ್ತು ಎಂದು ಎತ್ತಿ ಸೂಚಿಸಬಯಸುತ್ತೇನೆ. ಊರ್ಜೆ ಅಥವಾ ಶಕ್ತಿ ಕೂಡ ತನ್ನ ಮೂಲದಲ್ಲಿ ಸ್ತಂಭಿತ ಸ್ಥಿತಿಯಲ್ಲಿತ್ತು. ಆದರೆ ಬದಲಾವಣೆಯ ಕಾಲ ಸನ್ನಿಹಿತವಾಯಿತು. ಚಲನೆಯು ಜಾಗ್ರತಗೊಂಡು ವಸ್ತುಗಳನ್ನು ಕ್ರಿಯೋದ್ಯುಕ್ತಗೊಳಿಸಿತು. ಇದರ ಫಲವಾಗಿ ಪ್ರಕೃತಿಯ ಸಂಕಲ್ಪಾನುಸಾರ ರೂಪ–ಆಕಾರಗಳು ಮೈದಳೆದವು. ಈ ಎಲ್ಲದರ ಬುಡದಲ್ಲಿ ಕ್ರಿಯಾತ್ಮಕ ಶಕ್ತಿಯೆಂದು ಕರೆಯಬಹುದಾದ ಏನೋ ಒಂದು ಇತ್ತು. ಅದಕ್ಕೂ ಒಂದು ಆಧಾರವಿರಲೇಬೇಕು; ಅದಿಲ್ಲದೆ ಅದಕ್ಕೆ ಕ್ರಿಯೆಯೆಂಬುದಿರಲು ಸಾಧ್ಯವಿಲ್ಲ. ಆ ಆಧಾರವೇ (ಪರತತ್ತ್ವ) ಅಥವಾ ಪರಾತ್ಪರ ವಸ್ತು. ಹೀಗೆ ಸೃಷ್ಟಿಯು ಚಲನೆಯ ಪರಿಣಾಮವೆಂದೂ ಮತ್ತು ಚಲನೆಯು ಆ ಆಧಾರದ ಪರಿಣಾಮವೆಂದೂ ನಿಷ್ಕರ್ಷೆಗೆ ತಲುಪುತ್ತೇವೆ. ಆ ಆಧಾರ ಈಗಲೂ 'ಇದೆ' ಮುಂದೆಯೂ 'ಇರುವುದು'.

## ದೇಶ (Space) ಮತ್ತು ಕಾಲ (Time)

ಸೃಷ್ಟಿಪೂರ್ವದಲ್ಲಿ 'ವ್ಯೋಮ' (Space) (ಆಕಾಶ)ವೊಂದೇ ತಾನೇ ತಾನಾಗಿತ್ತು. ದೇವರ (ಈಶ್ವರನ) ಅಭಿವ್ಯಕ್ತಿಯು ಅನಂತರದ ಬೆಳವಣಿಗೆ ಮತ್ತು ಅದರ (ಈಶ್ವರನ) ಪ್ರಕಟೀಕರಣಕ್ಕೆ ಸ್ವಲ್ಪ ಅವಧಿ ಹಿಡಿಯಿತು. ಆಕಾಶ ಅನಂತವೆಂದೂ, ಸನಾತನವೆಂದೂ ನಮಗೆ ತೋರುತ್ತದೆ. ಹಾಗಿರುವುದರಿಂದ

ದೇವರೂ ಕೂಡ ಸನಾತನನೆಂದು ನಾವು ನಿಷ್ಕರ್ಷೆಗೆ ಬರುತ್ತೇವೆ. ದೇವರು ಅಸ್ತಿತ್ವಕ್ಕೆ ಬಂದ ಮೇಲೆ ಕಾಲ ಅನುಸರಿಸಿ ಬಂದಿತು. ಹೀಗೆ ಆಕಾಶವು ದೇವರ ಸೃಷ್ಟಿಗೆ ಜನನಿಯಾಗಿ ಸಂದಿತು ಮತ್ತು 'ಕಾಲ' ಅದರ ಅಭಾವಾತ್ಮಕ (Negative) ಸ್ಥಿತಿಯಾಗಿತ್ತು. ಎಲ್ಲವೂ ಅನಂತತೆಯಲ್ಲಿ ಅಂತ್ಯಗೊಳ್ಳಬೇಕು. ಎಲ್ಲ ವಸ್ತುಗಳಲ್ಲಿಯೂ ಚಲನೆ ಕೂಡ, ಅದೆಷ್ಟೇ ಸೂಕ್ಷ್ಮವೂ, ಅದೃಶ್ಯವೂ ಆಗಿದ್ದರೂ ಸರಿಯೆ, ಇದ್ದೇ ಇತ್ತು. ಹಾಗಿದ್ದರೆ, ಆಕಾಶವನ್ನು ಯಾರು ಸೃಷ್ಟಿಸಿದವರು ಎಂದು ಯಾರಾದರೂ ಪ್ರಶ್ನಿಸಬಹುದು. ದೇವರ ಮತ್ತು ವಿಶ್ವದ ಸೃಷ್ಟಿಯ ಆವಶ್ಯಕತೆಯೇ ಆಕಾಶದ ಅಸ್ತಿತ್ವಕ್ಕೆ ಕಾರಣ ಎಂದು ಹೇಳುವುದೊಂದೇ ಸಂಭಾವ್ಯ ಉತ್ತರವಾಗಬಹುದು. ಅದು ಈಗಲೂ ಇದೆ, ಎಂದೆಂದಿಗೂ ಇರುವುದು; ಆದಕಾರಣ ಅದು ಸನಾತನ. ಹಾಗಾದರೆ ದೇವರನ್ನು ಪೂಜಿಸುವ ಬದಲಾಗಿ ಆಕಾಶವನ್ನೇ ಏಕೆ ಪೂಜಿಸಬಾರದು ? ಋಗ್ವೇದದಲ್ಲಿ ಇದರ ಬಗ್ಗೆ ನಿರ್ದಿಷ್ಟವಾಗಿ ಒಂದು ಸುಳುಹು ಇದೆ. ಆದರೆ ಸರಿಯಾದ ಅರ್ಥವಿವರಣೆಯಿಲ್ಲದೆ ಈ ರಹಸ್ಯ ಪರಿಹಾರ ಕಾಣದೆ ಅಸ್ಪಷ್ಟವಾಗಿ ಉಳಿದಿದೆ. ಯಾರಾದರೂ ತನ್ನಲ್ಲಿ ಆಕಾಶದ ಸ್ಥಿತಿಯನ್ನು ಉಂಟುಮಾಡಿಕೊಂಡರೆ ಆಗ ಅವನು ಅತ್ಯುನ್ನತ ಸ್ಥಿತಿಯನ್ನು ಮುಟ್ಟಿದಂತೆಯೇ ಸರಿ. ಆ ಸ್ಥಿತಿಯು ಪ್ರತಿಯೊಬ್ಬನೂ ಯೋಗ್ಯವಾಗಿ ಅಭೀಪ್ಸೆಪಡಲೇ ಬೇಕಾದ ಆತ್ಮನಿರಸನದ ಅಂತಿಮ ಸ್ಥಿತಿಗೆ ಸದೃಶವಾಗಿರುತ್ತದೆ. ಈ ಪರಿಹಾರ ನಿಜಕ್ಕೂ ಅದ್ಭುತವಾದುದೆಂಬುದು ನಿಃಸಂಶಯ; ಮತ್ತು ಸಂಗಡವೇ, ಸಂಪೂರ್ಣ ವಿಶುದ್ಧವೂ (ದೋಷರಹಿತವೂ) ಆಗಿದೆ. ಆಕಾಶ ಅಥವಾ ಬಯಲೇ 'ಕೈವಲ್ಯ' (Absolute). ಅದು ಪರಮಾಣು (ಕಣ) ಸಂಘಾತದಿಂದ ಉಂಟಾದುದಲ್ಲ; ಅದರಲ್ಲಿ ಯಾವ ಕ್ರಿಯೆಯೂ ಇಲ್ಲ. ಅದು ಪರಿಪೂರ್ಣ ಶುದ್ಧವೂ, ಅಮಿಶ್ರಿತವೂ ಆಗಿದೆ, ಇದನ್ನು ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡುವುದು ನಿಜಕ್ಕೂ ಬಹಳ ಕಷ್ಟವೆಂಬುದೇನೋ ಸರಿ.

ಆಕಾಶವೆಂಬುದು ಬಯಲು, ಅವಕಾಶವೆಂಬುದು ಕಾಲ. ಇವೆರಡೂ ಪರಸ್ಪರ ಬಹಳೇ ಭಿನ್ನವಾಗಿವೆ. ಆಕಾಶದಿಂದ ಸೃಷ್ಟಿಗೊಂಡ 'ಕಾಲ'ವನ್ನು ಆಕಾಶದ ಸ್ಥೂಲರೂಪವೆಂದೆನ್ನಬಹುದು. ವಾಸ್ತವ ಸಂಗತಿಯೆಂದರೆ, ವಿಶ್ವವು ಕಾಲ ಅಥವಾ ಅವಕಾಶದ ಅಭಿವ್ಯಕ್ತಿ ಮತ್ತು ದೇವರು ಆಕಾಶದ ಅಭಿವ್ಯಕ್ತಿ. ಒಳಗಿನ ವೃತ್ತವು ಹೊರಗಿನ ವಿಶ್ವಸೃಷ್ಟಿಗೆ ಕಾರಣವಾಯಿತು. ಮಧ್ಯಾಂತರದ ಭಾಗವೇ 'ಸಮಯಾವಧಿ'. ಮಹಾಪ್ರಳಯದ ಸಮಯದಲ್ಲಿ ಸಂಭವಿಸುವಂತೆ ಹೊರ ಆವರಣವೂ ಮತ್ತು ಮಧ್ಯಾಂತರದ ಭಾಗಗಳೂ ಲೀನಗೊಂಡರೆ ಆಕಾಶವೊಂದೇ ಉಳಿಯುವುದು. ಇದರ ಅರ್ಥವೆಂದರೆ ಸಾರೂಪ್ಯತೆಯು (Identity) ಆಕಾಶವಾಗಿ ಪರಿವರ್ತಿತವಾಗುತ್ತದೆ; ಅಂದರೆ ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಆಕಾಶವೇ ಸಾರೂಪ್ಯತೆಯಾಗುತ್ತದೆ.

'ಕೇವಲ ವಸ್ತು' (ಪರತತ್ತ್ವ) (Absolute) ಒಂದೇ ಇದ್ದು, ಸೃಷ್ಟಿ (ವಿಶ್ವ)ಯೇ ಇರದಿದ್ದಾಗ ಕಾಲದ ಪ್ರಶ್ನೆಯೇ ಉದ್ಭವಿಸುವುದಿಲ್ಲ. 'ಆಧಾರ'ದಲ್ಲಿ ಸೃಷ್ಟಿಸಂಕಲ್ಪ ಜಾಗ್ರತವಾದಾಗ ಅದು ಎಲ್ಲದರಿಂದಲೂ ಸಂಪೂರ್ಣ ಮುಕ್ತವಾಗಿ ಇತ್ತು. ಅದು ಮುಂದುವರಿಯಿತು ಮತ್ತು ಚಲನೆಯ ಪರಿಣಾಮವಾಗಿ ಶಕ್ತಿ (ಊರ್ಜೆ)ಯಾಗಿ ರೂಪಾಂತರವಾಯಿತು. ಅದರ ಒಲವು ಕ್ರಿಯೆಯ ಕಡೆಗೆ ತಿರುಗಿತ್ತು. ಆದರೆ ಕ್ರಿಯೆಗೋಸ್ಕರ ಅದಕ್ಕೆ ಒಂದು ಕ್ಷೇತ್ರ ಅಥವಾ ಆಧಾರ ಬೇಕು. ಮೂಲ ಸಂಕಲ್ಪ (ಯೋಚನೆ) ಮತ್ತು ತದನಂತರದ ಅಸ್ತಿತ್ವವೂ, ಅಂದರೆ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಕಾರಣ ಮತ್ತು ಕಾರ್ಯಗಳ ನಡುವೆ ಒಂದು ಮಧ್ಯಾಂತರದ ಒಂದು ಸಂಕ್ಷಿಪ್ತ ವಿರಾಮ ಅಲ್ಲಿ ಇದ್ದೇ ಇತ್ತು. ಇದನ್ನು 'ಅವಕಾಶ' ಅಥವಾ 'ಕಾಲ' ಎಂದು ಅರ್ಥೈಸುವುದು ಯುಕ್ತವಾಗಬಲ್ಲದು. ಇದು ಅದಕ್ಕೆ ಕಾರ್ಯಕ್ಕೆ ಬೇಕಾದ ಕ್ಷೇತ್ರವಾಗಿ ಸಂದಿತು. ಹೀಗೆ 'ಕಾಲ'ವು ಶಕ್ತಿಯಲ್ಲಿ ಲೀನಗೊಂಡು, ಸೃಷ್ಟ್ಯುನ್ಮುಖವಾದ ಕ್ರಿಯೆಗಳ ಸಲುವಾಗಿ ಶಕ್ತಿಯಾಗಿ ಪರಿವರ್ತಿತವಾಯಿತು.

ಒಂದು ವಿಚಾರವು ಬಹಳ ಆಳವಾದಾಗ ಒಂದು ವಿರಾಮದಂಥ ಪರಿಣಾಮವನ್ನು ತರುತ್ತದೆಯೆಂಬುದು ಒಂದು ಸಾಮಾನ್ಯ ನಿಯಮ. ಅದರಲ್ಲಿ ಅಮೋಘವಾದ ಶಕ್ತಿ ಇರುತ್ತದೆ. ಕೇಂದ್ರದ ವಿಷಯದಲ್ಲಿ ಆಳದ ಪ್ರಶ್ನೆಯೇ ಏಳುವುದಿಲ್ಲ, ಯಾಕೆಂದರೆ, ಅಲ್ಲಿ ಸಂಪೂರ್ಣ ಏಕರೂಪತೆ (ಸಮತೆ) ಇದೆ. ಕೇಂದ್ರ ಅಥವಾ ಪರಬ್ರಹ್ಮವು 'ಕೇವಲ' (ಸ್ವತಂತ್ರ)ವಾಗಿರುವುದಾದರೂ, ಅದಕ್ಕೆ ಮನಸ್ಸು ಎಂಬುದು ಇಲ್ಲವಾದ್ದರಿಂದ ಶಕ್ತಿಯ ಗತಿ ತೀವ್ರತೆ, ಮನಸ್ಸಿನ ಪ್ರತ್ಯಕ್ಷ ಕ್ರಿಯೆ ಕೂಡ ಅದರಲ್ಲಿ ಲುಪ್ತವಾಗಿದೆ.

ಹೀಗೆ ಸಂಕಲ್ಪ ಮತ್ತು ಕ್ರಿಯೆಗಳ ನಡುವೆ ಏನಿತ್ತೋ ಅದನ್ನು ಕಾಲ ಎಂದು ಕರೆಯಲಾಗಿದೆ. ಅದೇ ಶಕ್ತಿಯಲ್ಲಿ ನಾವೂ ನಮ್ಮ ಪಾಲು ಪಡೆದೆವು, ಆದರೆ ನಮ್ಮ ಸೀಮಿತ ಸಾಮರ್ಥ್ಯಕ್ಕೆ ಅನುಸಾರವಾಗಿ ಮಾತ್ರ. ಈಗ ಈ ಶಕ್ತಿಯನ್ನು ನಾವು ಉಪಯೋಗಿಸಬೇಕಾದರೆ ನಾವು ಸರ್ವಾತ್ಮಕವೂ, ಕೇವಲವೂ ಆದ ಕೇಂದ್ರದ ಮಹಾಶಕ್ತಿಯಲ್ಲಿ ಅದನ್ನು ಲಯಗೊಳಿಸಬೇಕು. ಪ್ರಪಂಚದಲ್ಲಿ ಅದಕ್ಕೆ ಸಮನಾದುದು ಏನೂ ಇಲ್ಲ; ಆಧುನಿಕ ವಿಜ್ಞಾನದ ಮೆಗಾಟನ್ ಬಾಂಬು ಕೂಡ ಅಲ್ಲ. ಆಧುನಿಕ ವಿಜ್ಞಾನವು ಅದರ ಪೂರ್ಣ ಮಹತ್ತ್ವ (ಅಂತರ್ಮೌಲ್ಯ)ವನ್ನು ಮನಗಂಡಿರಲಿಕ್ಕಿಲ್ಲ. ಒಂದು ವೇಳೆ ಅದನ್ನು ಮನಗಂಡಿದ್ದರೂ ಅದನ್ನು ವಿನಾಶಾತ್ಮಕ ಉದ್ದೇಶಗಳಿಗಷ್ಟೇ ಉಪಯೋಗಿಸುತ್ತಿತ್ತು.

ಆ ಶಕ್ತಿಯನ್ನು ಬಲವಾದ ಸಂಕಲ್ಪ (ಇಚ್ಛಾ)ಶಕ್ತಿಯನ್ನು ಪ್ರಯೋಗಿಸಿ ಭೂಮಿಗೆ ಇಳಿಸಿ ತರಬಹುದು ಮತ್ತು ಕೆಲಸಗಳಿಗೆ ಉಪಯೋಗಿಸಬಹುದು. ಅತ್ಯುನ್ನತ ಸ್ತರದಲ್ಲಿ ನೆಲೆಸಿದ ಯೋಗಿಯು ಅರಿತೋ, ಅರಿಯದೆಯೋ ಅದರೊಂದಿಗೆ ಜೊತೆಗೊಂಡಿರುತ್ತಾನೆ. ನನ್ನ ದೃಷ್ಟಿಯಲ್ಲಿ ನಿಜವಾಗಿ ಎಲ್ಲ ಶಕ್ತಿಗಳ

ಮೂಲವಾದ ಈ ಮೂಲಶಕ್ತಿಯ ಪೂರ್ಣ ಜ್ಞಾನವಿಲ್ಲದಿದ್ದರೆ ಭೌತವಿಜ್ಞಾನವನ್ನು 'ಪೂರ್ಣ'ವೆಂದು ಗಣಿಸಲಾಗದು.

## ಜೀವ ಮತ್ತು ಬ್ರಹ್ಮ

ಜೀವವು (ಪೃಥಕ್ ಆದ ವ್ಯಷ್ಟ್ಯಾತ್ಮ), ವ್ಯಕ್ತಿವೈಶಿಷ್ಟ್ಯವನ್ನು ತಳೆದಾಗ ಅದಕ್ಕೆ ತನ್ನ ಸತ್ತೆಯ (ಅಸ್ತಿತ್ವದ being) ಅರಿವುಂಟಾಗುತ್ತದೆ. ಅದೇ ಅದರ ಅಸ್ತಿತ್ವದ ಆಧಾರಪೀಠವಾಗುತ್ತದೆ. ಮೂಲದಲ್ಲಿ ಜೀವವೂ ಬ್ರಹ್ಮವೂ ತೀರ ಸಮಾನ ಲಕ್ಷಣವುಳ್ಳವಾಗಿದ್ದುವು. ಜೀವದ ಪೃಥಕ್ ವ್ಯಕ್ತಿತ್ವವೇ ಜೀವ ಮತ್ತು ಬ್ರಹ್ಮರಲ್ಲಿ ವ್ಯತ್ಯಾಸವುಂಟಾಗುವಂತೆ ಮಾಡಿತು. ಈಗ ಜೀವವು ಅಹಂಕಾರ ಅಥವಾ ಪೃಥಕ್ ವ್ಯಕ್ತಿತ್ವದೊಳಗೆ ಬದ್ಧವಾದ ರೂಪದಲ್ಲಿ ಅಸ್ತಿತ್ವದಲ್ಲಿ ಬಂದಿತು. ಅದು ಯಾವ ಮಂಡಲದಲ್ಲಿತ್ತೋ ಆ ಮಂಡಲವು ಅದನ್ನು ಆವರಿಸಿ ನೆಲೆಸುತ್ತ, ಅದಕ್ಕೆ ಹೊಸ ಬಣ್ಣವುಂಟಾಗುವಂತೆ ಮಾಡಿತು. ಒಂದು ರೀತಿಯಲ್ಲಿ ವೈವಿಧ್ಯವು ತಳವೂರಲು ಪ್ರಾರಂಭವಾಯಿತು ಮತ್ತು ಹಂತ ಹಂತವಾಗಿ ಅಹಂಕಾರವು ತನ್ನ ಪರಿಣಾಮವನ್ನು ಅದರ ಮೇಲೆ ಬೀರಲಾರಂಭಿಸಿತು. ವಿವಿಧ ವರ್ಣಗಳು ಒಂದಾದ ಮೇಲೊಂದು ಹೆಚ್ಚು ಸಾಂದ್ರವೂ, ದಪ್ಪವೂ ಆಗಿ ಬೆಳೆಯಲಾರಂಭಿಸಿದವು. ಅನಿಸಿಕೆಗಳು, ಭಾವಾವೇಗಗಳು, ಮತ್ತು ವಾಂಛೆಗಳು (ಇಚ್ಛೆಗಳು) ಅದರ ಸ್ಥೂಲತೆಯ ಹೆಚ್ಚಳಕ್ಕೆ ತಮ್ಮ ಪಾಲನ್ನೂ ನೀಡಿದವು. ಈ ರೀತಿಯಲ್ಲಿ ಜೀವವು ಒಂದು ಸ್ವರ್ಣಪಕ್ಷಿಯಂತೆ, ಶರೀರವೆಂಬ ಕಬ್ಬಿಣದ ಪಂಜರದಲ್ಲಿ ಸಂಪೂರ್ಣ ಬಂದಿಯಾಗಿ ಸಿಕ್ಕಿಬಿದ್ದಿತು. (ಅಹಂಕಾರದ ವಲಯದಲ್ಲಿ) ಆಲೋಚನೆಗಳ, ಭಾವಾವೇಗಗಳ, ಸಂವೇದನೆಗಳ ಮತ್ತು ಇಚ್ಛೆಗಳ ಕ್ರಿಯೆ–ಪ್ರತಿಕ್ರಿಯೆಗಳ ಪರಿಣಾಮವಾಗಿ ಇದೆಲ್ಲ ಸಂಭವಿಸಿತು ಮತ್ತು ಇದರಿಂದ ಅದರ ಮಂದತ್ವ (opacity) ಹೆಚ್ಚುತ್ತ ಹೋಯಿತು. ಒಂದು ಶಬ್ದದಲ್ಲಿ ಹೇಳುವುದಾದರೆ, ಇದು ಜೀವದ ಪೂರ್ಣ ಇತಿಹಾಸ. ಈಗ ಸುದೈವದಿಂದ ತನ್ನ ಮೂಲವನ್ನು ನೆನಪುಮಾಡಿಕೊಡುವ ಒಬ್ಬ ಮಹಾತ್ಮನ ಗತಿಶೀಲ ಸಂಪರ್ಕ ಬಂದರೆ ಅದು ತನ್ನ ಆವರಣಗಳನ್ನು ಒಂದೊಂದಾಗಿ ಕಿತ್ತೆಸೆಯಲು ಪ್ರಾರಂಭಿಸುತ್ತದೆ. ಆದರೆ, ಜೀವವು ಮೂಲದ ಚಲನೆಯನ್ನೂ ಹೊಂದಿರುವುದರಿಂದ, ಸೃಷ್ಟಿಗೆ ಕರ್ತೃವಾದ ಬ್ರಹ್ಮದ ಹೊಳಹು (ಬ್ರಹ್ಮದ ಅಸ್ತಿತ್ವದ ಗ್ರಹಿಕೆ) ಅದಕ್ಕಿದೆ. ಹೀಗೆ 'ಜೀವ' ಶಬ್ದವು 'ಚಲನೆ' ಮತ್ತು ವಿಚಾರ (ಚಿಂತನೆ), ಇವೆರಡರ ಭಾವವನ್ನೂ ತನ್ನಲ್ಲಿ ಹೊಂದಿದೆ. ಜೀವದ ಸತ್ತೆಯಲ್ಲಿ ಇವೆರಡೂ ಸಮಾನಾಂತರವಾಗಿವೆ. ಹೀಗೆ ಜೀವ ಮತ್ತು ಬ್ರಹ್ಮ ಇವರೀರ್ವರ ಕಾರ್ಯವೂ ಹೆಚ್ಚುಕಡಿಮೆ ಒಂದೇ (ರೀತಿಯದು) ಆಗಿದೆ. ಇರುವ ಒಂದೇ ಒಂದು ವ್ಯತ್ಯಾಸವೆಂದರೆ, ಬ್ರಹ್ಮವು ಇಡೀ ವಿಶ್ವವನ್ನು ಆವರಿಸುತ್ತದೆ, ಜೀವವು ಅಹಂಕಾರದ ಇಕ್ಕಟ್ಟಾದ ಮಂಡಲಕ್ಕೆ ಪರಿಮಿತವಾಗಿದೆ. ಈ ದೃಷ್ಟಿಯಲ್ಲಿ ಜೀವಕ್ಕಿರುವಂತೆ ಬ್ರಹ್ಮಕ್ಕೂ ತನ್ನದೇ ಬಂಧನವಿದೆ ಎಂದೆನ್ನಬಹುದು; ವ್ಯತ್ಯಾಸವಿಷ್ಟೆ, ಜೀವಕ್ಕಿರುವ ಬಂಧನವು ಬ್ರಹ್ಮಕ್ಕಿರುವುದಕ್ಕಿಂತ

ಬಹುಶಃ ಹೆಚ್ಚು ಸ್ಥೂಲವೂ, ದಪ್ಪವೂ ಆಗಿರಬಹುದು. ಎರಡಕ್ಕೂ ಪರಿಮಿತಿಗಳುಂಟು. ಇದು, 'ಬ್ರಹ್ಮ'ವನ್ನು ಕುರಿತ, ಹೆಚ್ಚುಕಡಿಮೆ ಸರಿಯಾದ, ಕಲ್ಪನೆ.

## ಪ್ರಕೃತಿಯಲ್ಲಿ ಸಮಾನಾಂತರತೆ

ಸೃಷ್ಟಿಯ ಉತ್ಪತ್ತಿಯಾಗುವುದರ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಏಕೈಕ ವಸ್ತುವೆಂದರೆ ದೈವತ್ವ, ಪ್ರತಿಯೊಂದು ವಸ್ತುವೂ ಅದರಲ್ಲಿ ಸಾರರೂಪದಲ್ಲಿ ಲೀನವಾಗಿತ್ತು. ಸೃಷ್ಟಿ ಪ್ರಕಟೀಕರಣದ ಪ್ರಕ್ರಿಯೆ ಕ್ಷೋಭದೊಂದಿಗೆ ಪ್ರಾರಂಭವಾಯಿತು. ಕ್ಷೋಭವು ಸುಪ್ತ ಸ್ಪಂದನದ ಮಂಡಲದಲ್ಲಿ ಮಂಥನದ ಚಲನೆಯನ್ನು ಪ್ರಚೋದಿಸಿತು. ಕ್ರಿಯೆ ಪುನರಾರಂಭಗೊಂಡಿತು. ಮತ್ತು ಅದರೊಂದಿಗೇ ಶಕ್ತಿಯು ಜಾಗ್ರತಗೊಂಡು (ಸೃಷ್ಟಿಯ) ಪ್ರಕಟೀಕರಣದತ್ತ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಈ ಕ್ರಿಯಾಪಥವು ದೈವತ್ವದೊಂದಿಗೆ ಸಂಪೂರ್ಣ ಸಾಂಗತ್ಯವುಳ್ಳದ್ದಾದರೂ, ತನ್ನ ಹೊರ ಮುಖಗಳಲ್ಲಿ (ಅಂಶಗಳಲ್ಲಿ) ಅಲ್ಪ ಸ್ವಲ್ಪ ಭಿನ್ನವಾಗಿ ಕಾಣಿಸಿಕೊಂಡಿತು. ಯಾಕೆಂದರೆ ಪ್ರಕಟೀಕರಣವನ್ನು ಗುರಿಯನ್ನಾಗಿಟ್ಟುಕೊಂಡು ಅದು ಮತ್ತೊಂದು ದಾರಿಯನ್ನು ಹಿಡಿದಿತ್ತು. ಆ ಕಾರಣ ಅದು ಮಾನವನ ರೂಪುಗೊಳ್ಳುವಿಕೆಯೊಂದಿಗೆ ಸಂಬಂಧಿಸಿದುದಾಗಿರುವುದರಿಂದ ಅದನ್ನು 'ಮಾನವಪಥ' ಎಂದು ಸಂಕೇತಿಸಬಹುದು.

ಈಗ ದೈವತ್ವ ಮತ್ತು ಮಾನವತೆ ಪರಸ್ಪರ ಸಮಾನಾಂತರವಾಗಿ ಪಕ್ಕ-ಪಕ್ಕದಲ್ಲಿಯೇ ನಡೆಯುತ್ತಿದ್ದು, ಅವೆರಡೂ ಕ್ರಿಯೋದ್ಯುಕ್ತವಾಗಿ ಇವೆ. ಆದರೆ ಮೂಲದಲ್ಲಿ ಸೃಷ್ಟಿರಚನೆಯೇ ಪ್ರಥಮೋದ್ದೇಶವಾಗಿತ್ತಾದ್ದರಿಂದ 'ಮಾನವಪಥ'ವು ಪ್ರಾಮುಖ್ಯ ಪಡೆಯಲಾರಂಭಿಸಿತು ಮತ್ತು ಮಾನವನನ್ನೊಳಗೊಂಡು ಸಕಲವಸ್ತುವೂ ಆ ಹಂತದಲ್ಲಿ ಅತಿಸೂಕ್ಷ್ಮವಾಗಿದ್ದರೂ ಮೂರ್ತರೂಪವನ್ನು ಪಡೆಯತೊಡಗಿದವು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅದರ ಕ್ರಿಯೆಯು ಅದಕ್ಕೆ ಸಮಾನಾಂತರದಲ್ಲಿರುವ ದೈವತ್ವದ ಪಥದ ಗುಪ್ತ ಕ್ರಿಯೆಗಳಿಗೆ ಅಧೀನವಾಗಿ ಉಳಿಯಿತು. ಹೀಗೆ ಶಕ್ತಿಯ ಸಮರ್ಪಕ ಕಾರ್ಯವು ಆಕಾರ ಮತ್ತು ರೂಪಗಳನ್ನು ಉಂಟುಮಾಡುತ್ತ ಮುಂದುವರಿಯಿತು. ಒಂದು ವೇಳೆ ದೈವತ್ವದೊಂದಿಗೆ ಮೇಳಯಿಸಿ ಸಾಗಿರದಿದ್ದರೆ, ಮಾನವತೆಯು ನಿಜಕ್ಕೂ ಅಷ್ಟು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ, ಮಾನವತೆಯು ಅದಕ್ಕೆ ಸಮಾನಾಂತರದಲ್ಲಿರುವ ದೈವತ್ವದೊಂದಿಗೆ ತಾನು ಸಾಂಗತ್ಯಹೊಂದಿರುವಂತೆ ತನ್ನನ್ನು ನೇರ್ಪಡಿಸಿಕೊಂಡಿತು.

ಕ್ರಿಯೆಗಳು ಹೆಚ್ಚುತ್ತ ನಡೆದವು ಮತ್ತು ಮಾನವನೂ, ಇತರ ವಸ್ತುಗಳೂ ಹೆಚ್ಚು ಹೆಚ್ಚು ಸ್ಥೂಲತರ ರೂಪವನ್ನು ಹೊಂದಲು ಪ್ರಾರಂಭಿಸಿದವು. ಮಾನವನ ಸಂರಚನೆಯಲ್ಲಿ ಇರುವುದೆಲ್ಲವೂ ಮಾನವತೆಯ ವರ್ಗದಲ್ಲಿಯೇ ಬರುತ್ತವೆ.

ಸಂಗಡವೇ ದೈವತ್ವವು ಸಮಸ್ತ ಪ್ರತಿಯೊಂದು ವಸ್ತುವಿನ ಮೂಲದಲ್ಲಿ ಇದೆ. ದೇವರು ಮಾನವನಲ್ಲಿದ್ದಾನೆಂದು ಹೇಳುವುದು ಈ ಕಾರಣಕ್ಕಾಗಿಯೇ. ಮತ್ತು ಸಾಮಾನ್ಯವಾಗಿ ಎಲ್ಲ ಮತಧರ್ಮಾನುಯಾಯಿಗಳೂ ಇದೇ ದೃಷ್ಟಿಯನ್ನು ಹೊಂದಿದ್ದಾರೆ. ಹೀಗೆ ದೈವತ್ವದೊಂದಿಗೆ ಹೆಜ್ಜೆ ಹಾಕುತ್ತ ಅದನ್ನು ನಮ್ಮ ಮಾನವ ಪಥದೊಂದಿಗೆ ಜೋಡಿಸಿದಾಗ ಮಾತ್ರ ನಮ್ಮ ಅಂತಿಮ ಉದ್ದೇಶವು ನೆರವೇರುವುದು. ಸರ್ವೋತ್ತಮನಾದ ಒಬ್ಬನೇ ಪರಮಾತ್ಮನಿಂದ ಅರ್ಥಾತ್ ಪರವಸ್ತು (ಕೇವಲ ತತ್ತ್ವ)ವಿನಿಂದ ಎರಡೂ ಅವತರಣಗೊಂಡಿರುವುವಾದ್ದರಿಂದ ಮಾನವತೆಯೂ ದೈವತ್ವದಂತೆ ಅತ್ಯಂತ ಪರಿಶುದ್ಧ ಸ್ಥಿತಿಯಲ್ಲಿತ್ತು. ಆ ಸಮಯದಲ್ಲಿ ಅದರಲ್ಲಿ ಕ್ರಿಯೆಯ ಶಕ್ತಿಯು ನಾಮಮಾತ್ರವಿತ್ತು. ಅಥವಾ ಹಾಗೆನ್ನುವುದಾದರೆ, ಸುಪ್ತಸ್ಥಿತಿಯಲ್ಲಿತ್ತು. ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಂದ ಉಂಟಾದ ಆಘಾತಗಳು ಒಂದು ರೀತಿಯ ಎಚ್ಚರವನ್ನು ಬಡಿದೆಬ್ಬಿಸಿದವು ಮತ್ತು ಭೇದಗಳೂ ವಿರೋಧಗಳೂ ಗೋಚರಿಸಿದವು. ಶೀತೋಷ್ಣಗಳು ರೂಪನಿರ್ಮಿತಿಗಳನ್ನು ಬೆಂಬಲಿಸುತ್ತ ವಿವಿಧ ದಾರಿಗಳನ್ನು ಮಾಡಿಕೊಂಡವು. ಈ ಎಲ್ಲವುಗಳೂ ಮಾನವನ ಸಂರಚನೆಯಲ್ಲಿ ಸೇರಿಕೊಂಡು, ಮಾನವನು ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳ ಮುದ್ದೆಯಾದನು. ಅವುಗಳನ್ನು ಅವುಗಳ ಮೂಲ ಸ್ಥಿತಿಗೆ ತರುವುದೇ ನಾವೀಗ ಮಾಡಬೇಕಾದ ಕಾರ್ಯ. ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವು ದೇವತ್ವದೊಡನೆ ಸಂಬಂಧವನ್ನು ಕಾಯ್ದಿಟ್ಟುಕೊಳ್ಳಲು ಅನುವಾಗುವಂತೆ ಸಂತುಲಿತ ಹಾಗೂ ಶಾಂತ ಸ್ಥಿತಿಯನ್ನು ಪುನಃ ಸ್ಥಾಪಿಸುವುದು. ಅದನ್ನು ಸಾಧಿಸುವ ಏಕೈಕ ಮಾರ್ಗವೆಂದರೆ, ಯುಕ್ತ ಮಿತತ್ವವನ್ನು ಅವುಗಳಲ್ಲಿ ತರುವುದೇ ಆಗಿದೆ. ನಾವು ಸಹಜಮಾರ್ಗದಲ್ಲಿ ಮಾಡುವುದು ಅದನ್ನೇ.

ಮಾನವನ ದೈವೀಕರಣದ ನಿಜವಾದ ಅರ್ಥವನ್ನು ಜನರ ಗ್ರಹಿಕೆಗೆ ತರಲೋಸುಗ ನಾನು ಇಲ್ಲಿ ತೆರೆದಿಟ್ಟಿರುವ ಪ್ರಕೃತಿಯ ರಹಸ್ಯವಿದು.

## ಅವತಾರಗಳು

ಖಚಿತವಾಗಿ ಹೇಳುವುದಾದರೆ ಒಂದು ಪುಟ್ಟ ಸೃಷ್ಟಿಯನ್ನು ಅದಕ್ಕೆ ಆಧಾರವಾಗಬಹುದಾದ ದ್ರವ್ಯವನ್ನೊದಗಿಸಿ, ಕಟ್ಟಿ ನಿಲ್ಲಿಸಿದವರು ನಾವೇ. ಕ್ಷೋಭವನ್ನುಂಟುಮಾಡಿದ ದೈವೀ ಸಂಕಲ್ಪದ ಮೂಲಾಘಾತವನ್ನು ಬಿಟ್ಟರೆ, ಇದರಲ್ಲಿ ದೇವರ ಕಾರ್ಯ ನಾಮಮಾತ್ರವೆನ್ನಬಹುದು. ಭೂಮಿಯೊಳಗಿರುವ ಕಬ್ಬಿಣದ ಅದಿರು ಎಲ್ಲ ಯಂತ್ರಗಳಿಗೂ ಮೂಲವಾಗಿರುವ ಹಾಗೆಯೇ, ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳ ಮೂಲವು ಸಾರರೂಪದಲ್ಲಿರುವ ಭೂತ–ದ್ರವ್ಯ (Matter)ವಾಗಿತ್ತು. ಸಂಕಲ್ಪದ ಆಘಾತವು ತೀವ್ರವೇಗವುಳ್ಳದ್ದಾಗಿತ್ತು; ಅದು ಇನ್ನೂ ಹಾಗೆಯೇ ಇದೆ, ಹಾಗೂ ಕೊನೆಯವರೆಗೂ ಮುಂದುವರಿಯುತ್ತದೆ. ಈ ದೃಷ್ಟಿಯಲ್ಲಿ, ಸೃಷ್ಟಿಯ

ಪ್ರಾರಂಭ ಮತ್ತು ಅಂತ್ಯಗಳು ಒಂದೇ ವೇಗಗತಿಯ ಎರಡು ಕೊನೆಗಳಾಗಿವೆ. ನಿಜವಾದ ಶಕ್ತಿಯನ್ನೊಳಗೊಂಡ ಮಧ್ಯದ ಸ್ಥಳವೇ ಇಡೀ ವಿಶ್ವದ ಸಮಗ್ರ ರಚನೆಯನ್ನು ಅಸ್ತಿತ್ವಕ್ಕೆ ತರಲು ಮುಖ್ಯ ಕಾರಣವಾಯಿತು. ಅದರಲ್ಲಿ ಅಗಾಧ ಬಲವಿದೆ ಮತ್ತು ವಿದ್ಯುತ್ ಪ್ರವಾಹದಂತೆ ಆಘಾತಗಳನ್ನು ಮಾಡುತ್ತದೆ. ಮಧ್ಯಭಾಗವು ಕೇಂದ್ರವಾಗಿ ಕೆಲಸಮಾಡುತ್ತದೆ. ಸ್ವಲ್ಪ ಕೆಳಭಾಗದಲ್ಲಿ ಮುಖ್ಯ ಕ್ರಿಯಾಚಾಲಕ ಶಕ್ತಿಯಿದೆ; ಅದು 'ಕಾರಣ'ದಂತೆ ಕೆಲಸಮಾಡುತ್ತದೆ. ಕೇಂದ್ರಬಿಂದುವಿನಿಂದ ಕೆಲವೇ ಮಿಲಿಮೀಟರು ದೂರದಲ್ಲಿರುವಂತೆ ತೋರುವ ಇನ್ನೊಂದು ಬಿಂದು ಇದೆ; ಅಲ್ಲಿ ಚೈತನ್ಯದಾಯಕ ಶಕ್ತಿಯಂತಿರುವ ವಸ್ತುವೊಂದು ಯುಕ್ತ ಮಿತತ್ವದಿಂದ ಇದೆ. ನಾನು ಕೆಲವೇ ಮಿಲಿಮೀಟರು ದೂರವೆಂದು ಕರೆದುದು ಯಾಕೆಂದರೆ, ನಾವು ಬಹುದೂರದಿಂದ ಅದನ್ನು ವೀಕ್ಷಿಸುತ್ತೇವೆ. ಆದರೆ, ದೇಹದ ಪರಿಮಿತಿಗಳನ್ನು ಮೀರಿ ಹೋಗಿ ಹತ್ತಿರದಿಂದ ನೋಡಿದರೆ ಆಗ ಆ ದೂರವು ಅಪರಿಮಿತವಾಗಿ ಕಾಣುತ್ತದೆ. ಕೇಂದ್ರೀಯ ಬಿಂದುವಿನಿಂದ ನಾವು ಮೇಲೆ ಮೇಲೆ ಹೋದಂತೆಲ್ಲ ಶಕ್ತಿಯು ಹೆಚ್ಚು ಹೆಚ್ಚು ಮಂಕಾಗುತ್ತದೆ. ಮತ್ತು ಅದು ಸತ್ಯಕ್ಕೆ ನಮ್ಮ ನಿಕಟ ಸಾಮೀಪ್ಯದ ಸೂಚಕ. ಆ ಮಂಕಾದ ಶಕ್ತಿಯು ಮಾನವನ ಪಾಲಿಗೆ ಸಿಗುವ ಭಾಗ. ಕೇಂದ್ರದಲ್ಲಿರುವ ಬಲವತ್ತರವಾದ ಶಕ್ತಿಯು ಅವತಾರಗಳ ಪಾಲಿಗೆ ಸಿಗುತ್ತದೆ. ಅವತಾರಗಳು ಆ ಬಿಂದುವಿನಲ್ಲಿಯ ಸ್ಥಿತಿ (ಅವಸ್ಥೆ)ಗಳಿಂದ ಪರ್ಯಾಪ್ತವಾಗಿ ಶಕ್ತಿಭರಿತರಾಗಿರುತ್ತಾರೆ. ಕೇಂದ್ರ ಬಿಂದುವಿನ ವಲಯದಿಂದ ಶ್ರೀ ಕೃಷ್ಣನ ಅವತಾರವಾಯಿತು. ಶ್ರೀರಾಮನಾದರೋ, ಮತ್ತೊಂದು ಕೊನೆಯಿಂದ ಅವತರಿಸಿದನು. ಈ ಕಾರಣದಿಂದ ಅವನು ಹೆಚ್ಚು ಮಾನವ ಸಾಮ್ಯತೆ ಹೊಂದಿದ್ದನು. ಮಾನವನಾಗಿ ಪ್ರತಿಯೋರ್ವನೂ ಹೊಂದಲು ಪ್ರಯತ್ನಿಸತಕ್ಕುದಾದ ಜೀವನಾದರ್ಶವನ್ನು ಅವನು ಪ್ರತಿನಿಧಿಸುತ್ತಾನೆ.

ಅವತಾರಗಳಿಗೆ ಸಾರೂಪ್ಯತೆ (Identity) ಇರುವುದಿಲ್ಲವೆಂಬುದು ಕೆಲವರ ಅಭಿಪ್ರಾಯ. ನಾನು ಅದಕ್ಕೆ ಸಹಮತನಲ್ಲ. ಯಾಕೆಂದರೆ, ಅವರಿಗೆ ಸಾರೂಪ್ಯತೆ ಇಲ್ಲದಿರುತ್ತಿದ್ದರೆ, ಅವರಿಗೆ ನಿಯತಗೊಳಿಸಲ್ಪಟ್ಟಿದ್ದ ಉದ್ದೇಶವನ್ನು ನೆರವೇರಿಸಲು ದೇಹಧಾರಿಗಳಾಗಿ ಕೆಲಸಮಾಡಲು ಸಾಧ್ಯವಾಗುತ್ತಿರಲಿಲ್ಲ. ಅವರ ಕೆಲಸದ ಅಗತ್ಯತೆಗೆ ಅವರಿಗೆ, ಬೆಳೆಯುವ ಮತ್ತು ವಿಕಾಸಹೊಂದುವ ಸಾಧ್ಯತೆಯನ್ನುಳ್ಳ ಭೌತಿಕ ಶರೀರದ ಆವಶ್ಯಕತೆಯಿದೆ. ಇತರರಿಗಿರುವಂತೆ, ಅವರಿಗೂ ಸಾರೂಪ್ಯತೆ ಇರಲೇಬೇಕಾದುದು ಅವಶ್ಯ.

ಅವತಾರಗಳು ತಮಗೆ ವಹಿಸಲಾದ ನಿರ್ದಿಷ್ಟ ಕಾರ್ಯವನ್ನು ಸಾಧಿಸಲು ಬೇಕಾದ ಶಕ್ತಿ–ಸಾಮರ್ಥ್ಯಗಳೊಡನೆ, ಒಂದು ನಿರ್ದಿಷ್ಟ ಉದ್ದೇಶದ ಸಲುವಾಗಿ

ಇಳಿದು ಬರುತ್ತದೆ. ಅದೇ ಅವರನ್ನು ಪ್ರಪಂಚಕ್ಕೆ ಕರೆತಂದ ಸಂಸ್ಕಾರಗಳಂತೆ ಸಲ್ಲಬಹುದೆಂದೂ, ಬೇರೆ ಮಾತುಗಳಲ್ಲಿ ಹೇಳಬಹುದು. ಅವರ ಕಾರ್ಯಮುಗಿದಮೇಲೆ ಆ ಶಕ್ತಿ ಅವರನ್ನು ಹಿಂದಕ್ಕೆ ಸೆಳೆದುಕೊಳ್ಳುತ್ತದೆ.

ಒಬ್ಬ ಸಾಧಾರಣ ಮನುಷ್ಯನಿಗೆ ಮತ್ತು ಒಂದು ಅವತಾರಕ್ಕೆ ಇರುವ ವ್ಯತ್ಯಾಸವೆಂದರೆ, ಮನುಷ್ಯನು ಅಸಂಖ್ಯಾತ ಆವರಣಗಳಿಂದ ಆವರಿಸಲ್ಪಟ್ಟಿರುತ್ತಾನೆ. ಮತ್ತು ಅವತಾರಗಳಿಗೆ ಅವುಗಳ ಬಹುಭಾಗ ಇರುವುದಿಲ್ಲ ಎಂಬುದೇ ಆಗಿದೆ. ದೈವತ್ವವು ಅವರಿಗೆ ಜ್ಞಾನಗಮ್ಯವಾಗಿರುತ್ತದೆ, ಆದರೆ ಮಾನವರು ಅದರಿಂದ ವಂಚಿತರಾಗಿರುತ್ತಾರೆ. ಈಗ ಮಾನವ ಮತ್ತು ಅವತಾರಗಳ ಮೂಲವು ಒಂದೇ ಇರುವುದಾದರೂ ಅವತಾರಿಯು ದೈವತ್ವದ ನಿಕಟ ಸಂಪರ್ಕದಲ್ಲಿರುತ್ತಾನೆ. ಅವನಿಗೆ ಬೇಕಾಗಿಬರುವುದೆಲ್ಲವೂ ಅವನಿಗೆ ಶಾಶ್ವತ ಭಂಡಾರದಿಂದ ಒದಗಿಬರುತ್ತದೆ. ಸಾಮಾನ್ಯವಾಗಿ 'ದೇವವಾಣಿ' ಎಂದು ಕರೆಯಲ್ಪಡುವ, ದೈವೀ ಆದೇಶಗಳನ್ನು ಅವನು ತನ್ನ ಕಾರ್ಯದಲ್ಲಿ ಮಾರ್ಗದರ್ಶನ ಮಾಡಲು ಪಡೆಯುತ್ತಿರುತ್ತಾನೆ. ಈಗ ಅವತಾರಗಳಿಗೆ ಕ್ರಿಯಾತ್ಮಕತೆಯಿರುವುದೆಂದ ಮೇಲೆ, ಅವರಿಗೂ ಮನಸ್ಸು ಇರಬೇಕಾದುದು ಅಗತ್ಯ. ಆದರೆ ಅವರ ಮನಸ್ಸು ಹೆಚ್ಚು ಪರಿಶುದ್ಧವೂ, ಸಮತ್ವವುಳ್ಳದ್ದೂ ಆಗಿರುತ್ತದೆ. ಆದುದರಿಂದ ಅವತಾರಿಗಳಿಗೆ ಮನಸ್ಸು ಇರುವುದಿಲ್ಲವೆಂದು ಊಹಿಸುವುದು ತಪ್ಪು.

ವರ್ತಮಾನದಲ್ಲಿ ಕೆಲಸಮಾಡುತ್ತಿರುವ ವಿಭೂತಿಪುರುಷನನ್ನು ಕುರಿತು, ನಾನು ದರ್ಶಿಸಿದಂತೆ ಹೇಳುವುದಾದರೆ, ಆತನು ಕೇಂದ್ರಬಿಂದುವಿನಿಂದ ಅವತರಿಸಿದವನೆಂದು ಹೇಳಬಲ್ಲೆ. ನಮ್ಮ ಬಾಹ್ಯದೃಷ್ಟಿಗೆ ಮಂದಕಾಂತಿಯುಳ್ಳವನಂತೆ ಅಥವಾ ತಗ್ಗಿದವನಂತೆ ತೋರಿಬಂದರೂ, ಅತಿಶಯ ಅಂತಃ ಸಾಮರ್ಥ್ಯವುಳ್ಳವನಾಗಿದ್ದಾನೆ. ಭೂಮಿಯ ಮೇಲೆ ಇದುವರೆಗೆ ಬಂದ ಅವತಾರಿಗಳಲ್ಲಿ ಯಾರಿಗೂ ಮೂಲದ ಶಕ್ತಿಯು ಅನುಗ್ರಹಿಸಲ್ಪಟ್ಟಿರಲಿಲ್ಲ. ಸರ್ವಜ್ಞನಾದ ಭಗವಂತನ ಕೃಪೆಯಿಂದ ನಾನು ಪ್ರಕೃತಿಯನ್ನು ವೀಕ್ಷಿಸಿ ಗ್ರಹಿಸಿದುದರ ಆಧಾರದ ಮೇಲೆ ಇದನ್ನು ಬಹಿರಂಗಪಡಿಸುತ್ತಿದ್ದೇನೆ.

# ಅಧ್ಯಾಯ – ೩

# ಜ್ಞಾನ ಮತ್ತು ಅದರ ಸ್ವರೂಪ

## ಜ್ಞಾನ, ಅಜ್ಞಾನ, ಸಂಪೂರ್ಣ ಅಜ್ಞಾನ

ಸಾಮಾನ್ಯ ಅರ್ಥದಲ್ಲಿ 'ಜ್ಞಾನ' ಎಂದರೆ ತಿಳಿವಳಿಕೆ. ಅದು ದೈಹಿಕ, ಮಾನಸಿಕ (ಬೌದ್ಧಿಕ), ಭೌತಿಕ ಅಥವಾ ಆಧ್ಯಾತ್ಮಿಕ ಎಂದು ವಿವಿಧ ರೀತಿಯದಿರಬಹುದು. 'ಆಧ್ಯಾತ್ಮಿಕ'ವೆಂಬಲ್ಲಿ ಅದು ಅದೆಷ್ಟು ಅಸ್ಪಷ್ಟರೀತಿಯಲ್ಲಿ ಬಳಕೆಯಾಗುತ್ತಿದೆಯೆಂದರೆ ಅದರಿಂದ ಸೂಚಿತವಾಗುವ ನಿಜವಾದ ಅರ್ಥವನ್ನು ಅರಿಯುವುದು ಕಷ್ಟವಾಗುತ್ತದೆ. ಸಾಮಾನ್ಯ ತಿಳಿವಳಿಕೆಯ ನಿಮ್ನ ಸ್ತರದಿಂದ ಹಿಡಿದು ಆಂತರಿಕ ಪ್ರಜ್ಞೆಯ ಉನ್ನತ ಮಟ್ಟದವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಇದು ಬಹಳ ಗೊಂದಲಕ್ಕೂ, ಅಪಾರ್ಥಕ್ಕೂ ಎಡೆಮಾಡಿಕೊಡುತ್ತದೆ. ಕೆಲವೊಂದು ಶಾಸ್ತ್ರಗ್ರಂಥಗಳನ್ನು ಕಲಿತವನೂ, ಇನ್ನೊಬ್ಬ, ಪ್ರತಿಕ್ಷಣವೂ 'ಅಹಂ ಬ್ರಹ್ಮಾಸ್ಮಿ' ಎಂಬಂಥ ರೂಢ ವಾಕ್ಯಗಳನ್ನು ಉಚ್ಚರಿಸುವವನೂ ತಾನು ಜ್ಞಾನಿ ಅಥವಾ ಪ್ರಬುದ್ಧನೆಂದು ಹೇಳಿಕೊಳ್ಳಬಯಸುತ್ತಾನೆ. ಆತನ ಆಂತರಿಕ ಮಟ್ಟವೇನೇ ಇರಲಿ, ಜನರೂ ಆತನನ್ನು ಅಂತೆಯೇ ಒಪ್ಪಿಕೊಳ್ಳುತ್ತಾರೆ. ನಿಜವಾದ ಅರ್ಥದಲ್ಲಿ, ತನ್ನ (ಆಧ್ಯಾತ್ಮಿಕ) ಸಾಧನೆಯ ಯಾತ್ರಾಕಾಲದಲ್ಲಿ ಅಭ್ಯಾಸಿಯು ಬೇರೆ ಬೇರೆ ಗ್ರಂಥಿಗಳಲ್ಲಿಯ ಆಧ್ಯಾತ್ಮಿಕ ಸ್ಥಿತಿಗಳ ಮೂಲಕ ಹಾದು ಹೋಗುವಾಗ ಅಭ್ಯಾಸಿಯಲ್ಲಿ ವಿಕಾಸಗೊಳ್ಳುವ ಆಂತರಿಕ ಮಾನಸಿಕ ಸ್ಥಿತಿಗೆ 'ಜ್ಞಾನ' ಎಂಬ ಶಬ್ದ ಅನ್ವಯಿಸುತ್ತದೆ. ವಾಸ್ತವವಾಗಿ, 'ಜ್ಞಾನ' ಎಂದರೆ, ಪ್ರತಿಯೊಂದು ಗ್ರಂಥಿಯಲ್ಲಿಯೂ ಇರುವ ಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಳ್ಳುವುದಾಗಿದೆ. ಗ್ರಂಥಿಗಳು ಅಸಂಖ್ಯೇಯವಾಗಿರುವುದರಿಂದ, ಅಭ್ಯಾಸಿಯು ಮುಟ್ಟಿದ ಮಟ್ಟಕ್ಕೆ ಅನುಗುಣವಾಗಿ ಅವನು ಪಡೆದುಕೊಂಡ ಜ್ಞಾನವು ಭಿನ್ನವಾಗಿರುತ್ತದೆ. ಹಾಗೆ, ಒಬ್ಬನು ಮುಟ್ಟಿರುವ ಮಟ್ಟವನ್ನು ಅಥವಾ ಕಂಡುಕೊಂಡ ಜ್ಞಾನದ ಪರಿಮಿತಿಯನ್ನು ಖಚಿತವಾಗಿ ಹೇಳದೆ ಯಾರನ್ನಾಗಲಿ ಜ್ಞಾನಿಯೆಂದು ಕರೆಯುವುದು ಅರ್ಥಹೀನವೇ ಸೈ. ಜ್ಞಾನವು ಪ್ರಕಾಶಗೊಂಡ ಸಂಪೂರ್ಣ ಪ್ರಜ್ಞೆಯಲ್ಲಿ ನಾವು ಪ್ರವೇಶ ಹೊಂದಿ, ಅದರ ಪರಿಣಾಮವನ್ನು ಅರಗಿಸಿಕೊಂಡು ಅದರಲ್ಲಿ

ಲಯಹೊಂದಿದಾಗಲೇ ನಿಜವಾದ ಜ್ಞಾನದ ಸ್ಥಿತಿ ಉಂಟಾಗುತ್ತದೆ. ನಾವು ಈ ಸ್ಥಿತಿಯನ್ನು ಬೆಳೆಸಿಕೊಂಡು ಅದರ ಅರಿವಿನಲ್ಲಿ ಲಯಹೊಂದಿದಾಗ ಅದನ್ನು ಕುರಿತು ಎಲ್ಲವೂ ನಮಗೆ ತಿಳಿದುಬರುತ್ತದೆ ಹಾಗೂ ನಾವು ಜ್ಞಾನಿಗಳಾಗುತ್ತೇವೆ. ಅಂದರೆ, ಆ ಹಂತದ ಮಟ್ಟಿಗೆ ನಾವು ಜ್ಞಾನಪ್ರಾಪ್ತರಾಗುತ್ತೇವೆ. ನಮ್ಮ ವಿಚಾರಶಕ್ತಿಯನ್ನು ಪ್ರಯೋಗಿಸಿ ಜ್ಞಾನ ಸಂಪಾದಿಸಲು ಅದು ಕೃತಕವಾಗಿರುತ್ತದೆಯೇ ಹೊರತು, ನೈಜವೂ, ಯಥಾರ್ಥವೂ ಆಗಿರುವುದಿಲ್ಲ. ಒಂದು ಸ್ಥಿತಿಯ ನಿಜವಾದ ಜ್ಞಾನವೆಂದರೆ ನಾವು ಲಯಹೊಂದಿದ ಸ್ಥಿತಿಯಲ್ಲಿ ಸಮಗ್ರ ಏಕರೂಪತೆ. ವಿವಿಧ ಸ್ಥಿತಿಗಳಲ್ಲಿಯ ಜ್ಞಾನವು ನಮಗೆ ನೀಡುವ ಸಹಾಯವೆಂದರೆ, 'ಪರತತ್ತ್ವ'ದ (ಪರಮಾತ್ಮನ) ಅನ್ವೇಷಣೆಗಾಗಿ ಅದು ನಮ್ಮಲ್ಲಿ ಉತ್ಕಟ ಹಂಬಲವನ್ನು ತುಂಬುವುದೇ ಆಗಿದೆ.

ಅಜ್ಞಾನ ಮತ್ತು ಜ್ಞಾನ ಒಂದೇ ವಸ್ತುವಿನ ಎರಡು ತುದಿಗಳು. ಒಂದು ನಿರ್ದಿಷ್ಟ ದೂರದವರೆಗೆ ಅದು ಅಜ್ಞಾನ ಎಂದು ಕರೆಯಲ್ಪಡುತ್ತದೆ. ಅನಂತರ ಅದೇ ಜ್ಞಾನವಾಗಿ ಮಾರ್ಪಡುತ್ತದೆ. ಅವು ಚುಂಬಕದ ಎರಡು ಧ್ರುವಗಳಂತೆ ಇವೆ. ಹೀಗೆ ವಿದ್ಯೆ (ಜ್ಞಾನ) ಇಲ್ಲದೆ ಅವಿದ್ಯೆಗೆ (ಅಜ್ಞಾನಕ್ಕೆ) ಅಸ್ತಿತ್ವವಿಲ್ಲ, ಅಥವಾ ಅವಿದ್ಯೆಯಿಲ್ಲದೆ ವಿದ್ಯೆಗೆ ಅಸ್ತಿತ್ವವಿರುವುದಿಲ್ಲ. ಒಂದು ಇದೆಯೆಂದರೆ ಇನ್ನೊಂದೂ ಇರಲೇಬೇಕು. ಅದರ ಅರ್ಥವೇನೆಂದರೆ, ಅವಿದ್ಯೆಯ ತೆರೆ ಹರಿದುಹೋದ ಮೇಲೆ ವಿದ್ಯೆ–ಅವಿದ್ಯೆಗಳೆರಡೂ ಹೊರಟುಹೋಗುತ್ತವೆ. ವಿದ್ಯೆ–ಅವಿದ್ಯೆಗಳಲ್ಲಿ ಸೇರಿರುವ ಸಮಗ್ರ ಮಂಡಲವು ಅವಿದ್ಯೆಯಲ್ಲಿ ಅಡಕಗೊಂಡಿದೆ. ಇವೆರಡಕ್ಕೂ ಆಚೆ ಇರುವ 'ತಮ' ಎಂಬುದರ ಸ್ಥಿತಿಯೇ ಅದು. ಅದು ಸಾಕ್ಷಾತ್ಕಾರದ ನಿಜವಾದ ಸ್ಥಿತಿ; ಅಲ್ಲಿ ವಿದ್ಯೆಯೂ ಇಲ್ಲ. ಅವಿದ್ಯೆಯೂ ಇಲ್ಲ. ಹಾಗಾದರೆ ಅಲ್ಲಿರುವುದಾದರೂ ಏನು ? ಇವೆರಡಂತೂ ಅಲ್ಲ. ಅಲ್ಲಿರುವುದು ಸಂಪೂರ್ಣ ಅವ್ಯಕ್ತತೆಯ ಸ್ಥಿತಿ; ಅದು ತಿಳಿಯಲಾರದಿರುವಿಕೆಯೂ ಅಲ್ಲ, ಸಂಪೂರ್ಣ ಜ್ಞಾನರಹಿತ ಸ್ಥಿತಿಯೂ ಅಲ್ಲ. ಅಲ್ಲಿರುವುದನ್ನು ಶೈಶವದಲ್ಲಿರುವ ಸ್ಥಿತಿಯಂತೆ ಸ್ಥೂಲವಾಗಿ, ಅಜ್ಞಾನತಾ ಸ್ಥಿತಿಯೆಂದು ಸೂಚಿಸಬಹುದು. ನಿಜಕ್ಕೂ 'ಅಜ್ಞಾನ'ವೇ ಜ್ಞಾನದ ಅತ್ಯುನ್ನತ ಸ್ತರವಾಗಿದೆ. ಇದರಿಂದ ಹೊರಡುವ ಅರ್ಥವೇನೆಂದರೆ, ನಾವು ಅವಿದ್ಯೆಯ ಮಟ್ಟದಿಂದ ಪ್ರಾರಂಭಿಸುತ್ತೇವೆ. ಮತ್ತು ಅಂತಿಮವಾಗಿ ಉನ್ನತಮಟ್ಟದ ಅಜ್ಞಾನದಲ್ಲಿ (ಅಥವಾ) ನಾನು ಕರೆಯುವಂತೆ 'ಸಂಪೂರ್ಣ ಅಜ್ಞಾನ' (Complete Ignorance) ಕೊನೆಗೊಳ್ಳುತ್ತೇವೆ. ವಿದ್ಯೆಯ (ಆ ಶಬ್ದದ ಸಾಮಾನ್ಯ ಅರ್ಥದಲ್ಲಿ) ಮಂಡಲವು ಒಂದು ಮಧ್ಯಾಂತರದ ಸ್ಥಿತಿ ಮಾತ್ರ. ಜ್ಞಾನದ ಮಂಡಲವೆನಿಸಿಕೊಳ್ಳುವುದೆಲ್ಲವೂ ವಾಸ್ತವಿಕವಾಗಿ, ನೈಜ ಅರ್ಥದ ಅಜ್ಞಾನವೇ ಆಗಿದೆ.

ಅಜ್ಞಾನದ ತೆರೆ ಹರಿದಮೇಲೆ ಉದಯವಾಗುವುದನ್ನು 'ಜ್ಞಾನ' ಎಂದು ಎಂದಾದರೂ ಕರೆಯಬಹುದೆ ? ಎರಡು ವಿರುದ್ಧವಸ್ತುಗಳನ್ನು ದೃಷ್ಟಿಯಲ್ಲಿರಿಸಿ, ಬಾಹ್ಯಾರ್ಥದಲ್ಲಿ ಹಾಗೆ ಹೇಳುವುದಾದರೂ, ಅದು ಖಂಡಿತವಾಗಿ ಸರಿಯಲ್ಲ,

ಅದು 'ಜ್ಞಾನ'ದ ಭಾವವನ್ನು ಒಳಗೊಳ್ಳುವುದೋ ? ಇಲ್ಲ. 'ಜ್ಞಾನ' ಎಂಬುದು ತನಗಿಂತ ಆಚೆಗೆ ಇರುವುದರ ಅರಿವನ್ನು ಸೂಚಿಸುತ್ತದೆ. ಸಾಕ್ಷಾತ್ಕಾರವೆಂದರೆ ತನ್ನತನವನ್ನು ಪರತತ್ತ್ವದಲ್ಲಿ ಲಯಗೊಳಿಸುವುದಾಗಿದೆ. ಹಾಗಿದ್ದಮೇಲೆ, ಜ್ಞಾನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಂದಮೇಲೆ, ಅದನ್ನು ಏನೆಂದು ಕರೆಯುವುದು ? 'ವಿದ್ಯೆ'ಯ ಅಭಾವ ಸ್ಥಿತಿಯೆಂದೆ ? ತಿಳಿಯದಿರುವಿಕೆಯೆಂದೆ ? ಅಜ್ಞಾನ ಅಥವಾ ಇನ್ನೇನೋ ಎಂದೆ ? ಅದನ್ನು ಶಬ್ದಗಳಲ್ಲಿ ವ್ಯಕ್ತಪಡಿಸುವುದು ಅಸಾಧ್ಯವಾದರೂ, ಅದು ಅಂಥ ಏನೋ ಒಂದು ಎಂದು ಸಂಕ್ಷೇಪವಾಗಿ ಹೇಳಬಹುದು. ನಾನು ಅಭಿವ್ಯಕ್ತಗೊಳಿಸಿದಂತೆ 'ಸಂಪೂರ್ಣ ಅಜ್ಞಾನ' ಎಂಬುದು ಬಹುಶಃ ಸಮರ್ಪಕವೆನಿಸಬಹುದಾದ ಅಭಿವ್ಯಕ್ತಿಗೆ ಅತಿ ಹತ್ತಿರದ್ದಾದೀತು.

ದೈವೀ ಪಥದಲ್ಲಿ ಸಾಗುವವರು ಕತ್ತಲಿನಿಂದ ಬೆಳಕಿನ ಕಡೆಗೆ ಹೋಗುತ್ತಿರುವರೆಂದು ಕಲ್ಪಿಸಲಾಗುತ್ತದೆ. ಕತ್ತಲೆ ಎಂದರೆ (ಅದು ಸಾಮಾನ್ಯವಾಗಿ ಪ್ರತಿನಿಧಿಸುವಂತೆ) 'ಅವಿದ್ಯೆ', 'ಪ್ರಕಾಶ' ಎಂದರೆ 'ವಿದ್ಯೆ' ಎಂದಿಟ್ಟುಕೊಳ್ಳೋಣ. 'ಬೆಳಕ'ನ್ನು ಸಹಜಮಾರ್ಗವು ಗುರಿಯೆಂದಿಟ್ಟುಕೊಂಡಿಲ್ಲ. ಅದು (ಪ್ರಕಾಶವು) ಪರಬ್ರಹ್ಮದತ್ತ ನಮ್ಮ ಪಯಣದಲ್ಲಿ ಒಂದು ಮಧ್ಯಾಂತರದ ಸ್ಥಿತಿ ಮಾತ್ರ, ಅದನ್ನು ದಾಟಿ ಕತ್ತಲೂ ಅಲ್ಲದ, ಪ್ರಕಾಶವೂ ಅಲ್ಲದ ಅದರಾಚೆಗಿರುವ ಪರತತ್ತ್ವದತ್ತ ನಮ್ಮ ಪಯಣ. ಹೀಗೆ ನಾವು 'ಅವಿದ್ಯೆ' (ಅಜ್ಞಾನ)ಯಿಂದ ಪ್ರಾರಂಭಮಾಡಿ ವಿದ್ಯೆಯ (ಜ್ಞಾನದ) ಮೂಲಕ ಹಾಯ್ದು, ಯಾವುದು ವಿದ್ಯೆ ಮತ್ತು ಅವಿದ್ಯೆಗಳ ಆಚೆಗೆ ಇದೆಯೋ ಅದರೆಡೆಗೆ ಸಾಗುತ್ತೇವೆ. ಕತ್ತಲೆಯೂ, ಬೆಳಕೂ ಅಲ್ಲದ, ವಿದ್ಯೆ-ಅವಿದ್ಯೆಗಳೆರಡೂ ಅಲ್ಲದ ಅದರ ನಿಜವಾದ ಭಾವವನ್ನು ಯಾವ ಶಬ್ದ ಸೂಚಿಸಬಲ್ಲುದು ? ವಿಶ್ವದ ಯಾವ ಶಬ್ದಕೋಶದಲ್ಲಿ ಎಲ್ಲಾದರೂ ಅಂಥ ಯಾವುದೇ ಪದವಿದೆಯೇ ? ಖಂಡಿತವಾಗಿಯೂ ಯಾವುದೂ ಇಲ್ಲ. ಹಾಗಿರುವುದರಿಂದ ನಾನು ಹೇಳಿದಂತೆ ಅಪರಿಷ್ಕೃತವಾದ ಪ್ರಾರಂಭಿಕ ಅಜ್ಞಾನಕ್ಕಿಂತ ಭಿನ್ನವಾದ, 'ಸಂಪೂರ್ಣ ಅಜ್ಞಾನ'ವೆಂಬ ಪದವೇ ಸೂಕ್ತ.

## ಜ್ಞಾನ ಸಾಧನಗಳು : ತರ್ಕ, ಶ್ರುತಿ ಮತ್ತು ಅನುಭವ

ಸಾಮಾನ್ಯವಾಗಿ ತತ್ತ್ವಶಾಸ್ತ್ರಜ್ಞರು ವಸ್ತುಗಳ ಅಂತರಾಳದ ತಿರುಳನ್ನು ಮುಟ್ಟಲು ತರ್ಕದ ಮೂಲಕ ಪ್ರಯತ್ನಪಟ್ಟಿದ್ದಾರೆಯೇ ಹೊರತು ಅಂತರ್ದೃಷ್ಟಿಯ ಮೂಲಕವಲ್ಲ. ತರ್ಕವು ಅದರ ಸಾಮಾನ್ಯಾರ್ಥದಲ್ಲಿ ತೆಗೆದುಕೊಂಡರೆ, ದೋಷಯುಕ್ತವಾಗಿರಬಹುದು ಮತ್ತು ನಮ್ಮನ್ನು ಕೈಬಿಡಬಹುದು. ಆದರೆ, ಅನಾವಶ್ಯಕವಾದ ತರ್ಕದ ಮಾಧ್ಯಮವಿಲ್ಲದೆ, ಅತಬೋ೯ಧೆಯುಳ್ಳ ಅಂತರ್ದೃಷ್ಟಿಯ ಮೂಲಕ ವಸ್ತುವನ್ನು ವೀಕ್ಷಿಸಿದರೆ, ಅದು ಯಾವ ದೋಷ ಅಥವಾ ತಪ್ಪುಗಳಿಲ್ಲದೆ, ತನ್ನ ಮೂಲರೂಪದಲ್ಲಿ ಗೋಚರವಾಗುವುದು. ಗ್ರಂಥಿಗಳು ತಾವಾಗಿಯೇ

ತೆರೆದುಕೊಳ್ಳಲು ಪ್ರಾರಂಭಿಸಿದಾಗ ನಾವು ವಸ್ತುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಮಾಡಬೇಕು.

ಪುಸ್ತಕಗಳಿಂದ ಹುಡುಕಿ ಪಡೆಯಲ್ಪಡುವ ಮಾರ್ಗದರ್ಶನವು ಅಷ್ಟು ಪ್ರಯೋಜನಕ್ಕೆ ಬರುವುದಿಲ್ಲ. ಯಾಕೆಂದರೆ, ಅವು ಹೆಚ್ಚುಪಕ್ಷ ತಪ್ಪುದಾರಿಗೆಳೆಯುವಂಥವೂ, ಕೆಲವೊಮ್ಮೆ ಅಪಾಯಕಾರಿಯೂ ಆಗಿರುತ್ತವೆ. ಪುಸ್ತಕಗಳಲ್ಲಿ ಸೂಚಿಸಲಾದ ವಿಧಾನಗಳು, ಬಾಹ್ಯ ಮುಖಗಳನ್ನಷ್ಟೇ ಸ್ಪರ್ಶಿಸುವುದರಿಂದ, ಸಾಮಾನ್ಯವಾಗಿ ಗೊಂದಲವನ್ನುಂಟುಮಾಡುತ್ತವೆ. ಔಷಧಗಳ ಹೆಸರು, ಗುಣಸ್ವಭಾವಗಳನ್ನು ಸುಮ್ಮನೆ ಓದುವುದರಿಂದ ಯಾರೂ ವೈದ್ಯನಾಗಲಾರರು. ಮಾವಿನ ಹಣ್ಣಿನ ರುಚಿಯ ವರ್ಣನೆಯನ್ನು ಪುಸ್ತಕದಲ್ಲಿ ಓದುವುದರಿಂದ ಆ ರುಚಿಯನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. 'ಕಡುಬಿನ (ರುಚಿಯ) ಪುರಾವೆ ಅದನ್ನು ತಿನ್ನುವುದರಲ್ಲಿದೆ' ಎಂಬುದು ಪ್ರಸಿದ್ಧವಾದ ಒಂದು ಹೇಳಿಕೆ. ಮೇಲುನೋಟಕ್ಕೆ ವೇದದಲ್ಲಿಯೂ ವಿರೋಧಾಭಾಸಗಳು ಕಂಡುಬರುತ್ತವೆ. ಅದರ ಪರಿಣಾಮವಾಗಿ ಆರು ದರ್ಶನಗಳು ಹುಟ್ಟಿವೆ. ತನ್ನ ನಿಲುಕಿಗೆ ಅನುಸಾರ ಪ್ರತಿಯೋರ್ವನೂ ಏನನ್ನಾದರೂ ಹೇಳುತ್ತಾನೆ. ಯಾವುದರಿಂದ ಅವ್ಯಯವಾದುದನ್ನು ಸಾಕ್ಷಾತ್ಕರಿಸಿಕೊಳ್ಳುವೆವೋ ಅದೇ ನಿಜವಾದ ಸ್ವಾಧ್ಯಾಯ. ಆದರೆ ಅದನ್ನು ಪ್ರಜ್ಞಾನದ ದೃಷ್ಟಿಯಿಂದ ಗ್ರಹಿಸಬೇಕಲ್ಲದೆ, ಓದುವುದರ, ನಂಬುವುದರ ಅಥವಾ ತರ್ಕದ ಮೂಲಕ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ. ನಾನು ಯಾವ ಗ್ರಂಥಗಳನ್ನು ವ್ಯಾಸಂಗಮಾಡಿಲ್ಲವೆಂದು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತೇನೆ. ಅವು ಪ್ರಯೋಜನಕಾರಿಯೆಂದು ನನಗೆ ಅನ್ನಿಸಲಿಲ್ಲ. ನಾನು 'ಸತ್ಯ'ವೊಂದನ್ನೇ ಲಕ್ಷ್ಯವಾಗಿರಿಸಿಕೊಂಡೆ, ಮತ್ತು ಪಡೆಯಲು ಯೋಗ್ಯವಾದ ವಸ್ತುವೆಂದರೆ ಅದೊಂದೇ ಎಂದು ತಿಳಿದೆ; ಹಾಗೂ ಪುಸ್ತಕವ್ಯಾಸಂಗವನ್ನು ವಿದ್ವಾಂಸರ, ಪಂಡಿತರ ಪಾಲಿಗೆ ಬಿಟ್ಟುಕೊಟ್ಟೆ. ಶಂಕರ, ರಾಮಾನುಜ ಅಥವಾ ಇತರರು ತಮ್ಮ ತಮ್ಮ ಅನುಭವ ಕುರಿತು ಅದೇನೇ ಹೇಳಿರಲಿ, ನಾನು ಹೇಳುವುದು, ಬರೆಯುವುದು ಎಲ್ಲವೂ, ಸಾಕ್ಷಾತ್ಕಾರದ ಮಾರ್ಗದಲ್ಲಿ ನನ್ನ ಅನುಭವದ ಆಧಾರದ ಮೇಲೆಯೇ ಆಗಿದೆ. ಈಗೀಗ ಕೆಲವೊಮ್ಮೆ ನಾನು ಓದುವುದೂ ಉಂಟು, ಆದರೆ ಅದು ಮನೋವಿಶ್ರಾಂತಿಗಾಗಿ; ಮತ್ತು ನನ್ನ ಅಭಿಪ್ರಾಯಗಳ ಸುಲಭ ಅಭಿವ್ಯಕ್ತಿಗೋಸ್ಕರ, ಸಾಧ್ಯವಿರುವಷ್ಟನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತೇನೆ. ಶಂಕರಾಚಾರ್ಯರ 'ವಿವೇಕ ಚೂಡಾಮಣಿ'ಯಲ್ಲಿ ನಾನು ಓದಿದ ಒಂದು ಮಾತು ನೆನಪಿದೆ. ಅದರ ಅರ್ಥವೇನೆಂದರೆ "ಗ್ರಂಥಗಳು ಸಾಕ್ಷಾತ್ಕಾರಕ್ಕೆ ನಮಗೆ ಸಹಾಯಮಾಡುವುದಿಲ್ಲ ಹಾಗೂ ಸಾಕ್ಷಾತ್ಕಾರವಾದಮೇಲೆ ಗ್ರಂಥಗಳು ನಿಷ್ಪ್ರಯೋಜಕ".

ಪಾಪಿಗಳಿಗೋಸ್ಕರ ನರಕವಿದೆ, ಅಜ್ಞಾನಿಗಳಿಗೆ ಸ್ವರ್ಗವಿದೆ, ಮುಗ್ಧರಿಗೆ ಬ್ರಹ್ಮಲೋಕವಿದೆ ಅದರೆ, ಬುದ್ಧಿವಂತರಿಗೆ, ವಿದ್ವಾಂಸರಿಗೆ ತಾವೇ ನಿರ್ಮಿಸಿಕೊಂಡ ಕೃತಕ ಸ್ವರ್ಗವೂ ಇದೆ, ಮತ್ತು ಬಲಹೀನರಿಗೆ ಈ ಮರ್ತ್ಯಲೋಕವಿದೆ. ಆದರೆ ಬಲಹೀನರು ಯಾರಿರಬಹುದು ? ಆತ್ಮನಿರ್ಭರತೆ, ಆತ್ಮವಿಶ್ವಾಸವಿಲ್ಲದವರೇ ಬಲಹೀನರು. ಶಾಸ್ತ್ರಗಳು ಪರಸ್ಪರ ವಿರೋಧವುಳ್ಳವು, ಆದರೂ ಯೋಚಿಸಿ ಪರಿಹಾರೋಪಾಯನ್ನು ಪಡೆಯುವ ಅವಕಾಶವನ್ನು ನಮಗೆ ಒದಗಿಸಿಕೊಡುವುದರಿಂದ ಅವುಗಳಿಗೂ ಮಹತ್ತ್ವವಿದೆ. ಇದಲ್ಲದೆ ಅವುಗಳಿಗೆ ಇನ್ನೊಂದು ಮೌಲ್ಯವೂ ಉಂಟು. ಏನೆಂದರೆ, ಪ್ರತಿಯೊಂದು ಬೇರೆ ಬೇರೆ ರುಚಿ, ಮನಃಸ್ಥಿತಿ, ಮತ್ತು ಮಾನಸಿಕ ಮಟ್ಟ ಇರುವವರಿಗೆ ಅವು ಆಧ್ಯಾತ್ಮಿಕ ಪ್ರಗತಿಯ ಸಾಧನೋಪಾಯ ಮತ್ತು ವಿಧಾನಗಳನ್ನು ಒದಗಿಸಿಕೊಡುತ್ತವೆ. ನಾನು ಗ್ರಂಥಗಳ ಮೂಲಕ ಸಾಕ್ಷಾತ್ಕಾರದ ಮಾರ್ಗದಲ್ಲಿ ಮುಂದುವರಿದಿದ್ದರೆ, ದೈವತ್ವದ (ಪರತತ್ತ್ವದ) ಮೂಲ ಗುಣವಾದ 'ಅಜ್ಞಾನ'ದ ಮಟ್ಟದವರೆಗೆ ನಾನು ಬರಲು ಶಕ್ತನಾಗುತ್ತಿರಲಿಲ್ಲ. ಪ್ರಾಯೋಗಿಕ ಜೀವನವೊಂದೇ ನಡೆಸಲು ಯೋಗ್ಯವಾದುದು. ಸಾಕ್ಷಾತ್ಕಾರವೆಂದರೇನೆಂದು ನಾವು ತಿಳಿದುಕೊಂಡರಷ್ಟೇ ಸಾಲದು, ಅದನ್ನು ಪಡೆಯಲೂ ಪ್ರಯತ್ನಿಸಬೇಕು.

# ಅಧ್ಯಾಯ - ೪

# ಮಾನವ

## ಬ್ರಹ್ಮಾಂಡದಲ್ಲಿ ಅವನ ಸ್ಥಾನ ಮತ್ತು ಗತಿ

ವಿಶ್ವವು ಹೇಗೆ ಅಸ್ತಿತ್ವದಲ್ಲಿ ಬಂದಿತೆಂದು ಯೋಚಿಸುತ್ತ ಹೋಗುವುದರ ಬದಲಿಗೆ, ಅದನ್ನು ಅಸ್ತಿತ್ವದಲ್ಲಿ ತಂದ 'ಪರತತ್ತ್ವ'ವನ್ನು (ಅಥವಾ ಸತ್ತೆಯನ್ನು) ನಾವು ಸ್ತುತಿಸಬೇಕೆಂದು ನಾನು ಸಲಹೆ ಮಾಡಬಹುದು. ಸ್ಥೂಲತೆ ಮತ್ತು ಜಡತೆಗಳ ಪದರುಗಳ ಆವರಣಗಳನ್ನು ಒಂದಾದಮೇಲೊಂದರಂತೆ ಹೊಂದಿದ ನಮ್ಮದೇ ಪ್ರತ್ಯೇಕ ಭೌತಿಕ ಅಸ್ತಿತ್ವವನ್ನುಳ್ಳ ಪುಟ್ಟ ಸೃಷ್ಟಿಯೊಂದನ್ನು ನಾವು ನಿರ್ಮಿಸಿಕೊಂಡಿದ್ದೇವೆ. ಈಗ ನಾವು ಮಾಡತಕ್ಕದ್ದೇನೆಂದರೆ ಒಂದೊಂದಾಗಿ ಆ ಜಡತೆಯ ಪದರುಗಳನ್ನು ಛಿನ್ನ ವಿಚ್ಛಿನ್ನಗೊಳಿಸುವುದು ಮತ್ತು ಸೃಷ್ಟಿಯ ಆದಿಯಲ್ಲಿದ್ದ ಕೈವಲ್ಯಸ್ಥಿತಿಯನ್ನು ಹೊಂದುವುದು.

ಸದ್ಯದ ನಮ್ಮ ಸ್ಥೂಲತಮ ರೂಪದಲ್ಲಿರುವ ಅಸ್ತಿತ್ವವು ಒಮ್ಮಿಂದೊಮ್ಮೆಲೆ ಅಥವಾ ಆಕಸ್ಮಿಕವೆಂಬಂತೆ ಆದುದಲ್ಲ. ಅದು ನಿಧಾನವಾಗಿ ನಡೆದ ವಿಕಾಸಕ್ರಮದ ಫಲವಾಗಿದೆ. ವಿಶ್ವದ ರಚನೆಗೆ ಕಾರಣವಾದ ಸುಪ್ತ ಚಲನವನ್ನು ಸರ್ವಶಕ್ತನ ಆದಿ ಸಂಕಲ್ಪ (ಆದಿ-ಮನ) ಎಂದು ಕರೆಯಬಹುದು. ನಾವು ಯಾವುದನ್ನು ಆದಿಮನಸ್ಸೆಂದು ಕರೆಯುತ್ತೇವೆಯೋ ಅದೇ ನಮ್ಮ ಅಸ್ತಿತ್ವಕ್ಕೆ ಮೂಲವಾಗಿದೆ. ಆ ಮನಸ್ಸಿನ ಹಿಂದೆ ಕೇಂದ್ರ ಅಥವಾ 'ತಮ' ಎಂಬ ಸ್ಥಿತಿ ಇದೆ. ಜೀವಾತ್ಮದ ಅಸ್ತಿತ್ವದ ಜಾಡುಹಿಡಿದು ಹೊರಟರೆ, ಅದು ಸೃಷ್ಟ್ಯುದ್ಭವದ ಸಮಯದಷ್ಟು ಹಿಂದಕ್ಕೆ ಹೋಗುತ್ತದೆ. ಆಗ ಅದು ತನ್ನ ನಿರಾವೃತರೂಪದಲ್ಲಿ ಒಂದು ಪೃಥಕ್ ವಸ್ತುವಾಗಿ ಅಸ್ತಿತ್ವದಲ್ಲಿತ್ತು. ಅತ್ಯಂತ ಸೂಕ್ಷ್ಮರೂಪದಲ್ಲಿದ್ದ ಜೀವಾತ್ಮದ ಆದಿಮ ಸ್ಥಿತಿಯಿಂದ ನಾವು ಅಸ್ತಿತ್ವದ ಸ್ಥೂಲತರ ರೂಪಗಳತ್ತ ಸಾಗಿದೆವು. ಇವುಗಳನ್ನು ಜೀವಾತ್ಮನ ಸುತ್ತ ಇರುವ ಆವರಣಗಳೆಂದು ಕರೆಯಬಹುದು. ಮೊದಲ ಮೊದಲಿನ ಆವರಣಗಳು ಅತ್ಯಂತ ಸೂಕ್ಷ್ಮ (ನವುರಾದ) ರೂಪದವಾಗಿದ್ದುವು ಮತ್ತು ಅವುಗಳೊಂದಿಗೆ ನಾವು ನಮ್ಮ ತವರು ನೆಲೆಯಾದ ಭಗವದ್ವಲಯದಲ್ಲಿ ಇದ್ದೆವು.

ಅಹಂಕಾರದ ಆವರಣಗಳು ಹೆಚ್ಚು ಹೆಚ್ಚು ಸೇರಿಕೊಳ್ಳುವುದು ಮುಂದುವರಿಯಿತು ಮತ್ತು ರೂಪದಲ್ಲಿರುವ ಅನಂತರ ಮನಸ್ಸು (Psyche), ಚಿತ್ತ (ಚೇತನ, ಪ್ರಜ್ಞೆ), ಬುದ್ಧಿ (Intellect) ಮತ್ತು ಅಹಂಕಾರಗಳು ನಮ್ಮ ಸ್ಥೂಲತೆಯು ಬೆಳೆಯುವುದಕ್ಕೆ ಕಾರಣವಾದುವು. ಕಾಲಕ್ರಮದಲ್ಲಿ ಸಂಸ್ಕಾರಗಳುಂಟಾಗುವುದು ಪ್ರಾರಂಭವಾಯಿತು. ಅವುಗಳ ಪರಿಣಾಮಸ್ವರೂಪದ ಫಲಗಳೂ ಬಂದುವು. ಸದ್ಗುಣ–ದುರ್ಗುಣಗಳು ಮೈದೋರಿದವು. ಸಾವಕಾಶವಾಗಿ ನಮ್ಮ ಅಸ್ತಿತ್ವವು ಅತೀವ ಸಾಂದ್ರತಮ ರೂಪವನ್ನು ತಳೆಯಿತು. ಸುಖ, ದುಃಖ, ಸಂತೋಷ–ವ್ಯಸನಗಳ ಸಂವೇದನೆಗಳು ಪ್ರಾರಂಭವಾಗುವುದು ಸಂಸ್ಕಾರಗಳ ಪರಿಣಾಮರೂಪವಾಗಿಯೇ. ಸುಖ–ಸಂತೋಷಗಳಲ್ಲಿ ಅನುರಕ್ತಿ ಮತ್ತು ದುಃಖ, ಅಸಂತೋಷಗಳನ್ನು ಕುರಿತ ಅಸಹ್ಯ ಭಾವನೆಗಳು ಹೆಚ್ಚು ಹೆಚ್ಚು ತೊಡಕುಗಳನ್ನು ಉಂಟುಮಾಡಿದುವು. ಇದರ ಪರಿಣಾಮವಾಗಿ ನಾವು ಕಷ್ಟ, ನೋವುಗಳಿಂದ ಸುತ್ತುವರಿಯಲ್ಪಟ್ಟಿರುವುದು ಅನುಭವಕ್ಕೆ ಬರುತ್ತದೆ. ಮತ್ತು ಅವುಗಳಿಂದ ಬಿಡುಗಡೆ ಹೊಂದುವುದೇ ನಮ್ಮ ಮುಖ್ಯ ಧ್ಯೇಯವೆಂದು ಭಾವಿಸುತ್ತೇವೆ.

ಮಾನವನು ಎರಡು ಧ್ರುವಗಳುಳ್ಳ ಒಂದು ಸತ್ತ್ವ (ಜೀವಿ). ಅದರ ಬೇರು ಮೂಲ ಆಧಾರಕ್ಕೆ ಅತಿ ನಿಕಟವಾಗಿದೆ ಮತ್ತು ಇನ್ನೊಂದು ತುದಿ ಪ್ರಪಂಚದ ಕಡೆಗಿದೆ. ಹೇಗಾದರೂ ಮಾಡಿ ವ್ಯಷ್ಟಿಮನಸ್ಸು ಅದರ ವೈಶ್ವಿಕ ಮನಸ್ಸಿಗೆ ಅಭಿಮುಖವಾಗಿ ರೂಪುಗೊಳ್ಳತೊಡಗಿದರೆ ಅದು ತನ್ನ ನೈಜ (ವರ್ಣದಲ್ಲಿ) ರೂಪದಲ್ಲಿ ಕಾಣಲಾರಂಭಿಸುತ್ತದೆ. ವಾಸ್ತವ ಸಂಗತಿಯೇನೆಂದರೆ, ಸೃಷ್ಟಿಯನ್ನು ಅಸ್ತಿತ್ವದಲ್ಲಿ ತರಲು ಪ್ರಕೃತಿಯ ಶಕ್ತಿಯನ್ನು ಚಲನೆಯಲ್ಲಿ ಉದ್ಯುಕ್ತಗೊಳಿಸಿದ ಕ್ಷೋಭದ ಪ್ರತಿಚ್ಛಾಯೆಯೇ ಮಾನವನ ಮನಸ್ಸು. ಹೀಗೆ ವ್ಯಷ್ಟಿ ಮನಸ್ಸು ದೈವೀಮನಸ್ಸಿನ (ಕ್ಷೋಭದ) ಒಂದು ಅಂಶ. ನಾವು ಹೇಗಾದರೂ ಮಾಡಿ ಅದರ ಅಧೋಮುಖಿ ಪ್ರವೃತ್ತಿಯನ್ನು ಮೂಲದ ಕಡೆಗೆ ತಿರುಗಿಸಿದರೆ ಅದು ಸ್ತಬ್ಧವಾಗಿ, ಮೌನವಾಗಿ, ಶಾಂತವಾಗಿ ಇರುತ್ತದೆ. ನನ್ನ ವೈಯಕ್ತಿಕ ಅನುಭವದ ಪ್ರಕಾರ ಒಬ್ಬ ಸಮರ್ಥ ಮಹಾತ್ಮನ ಸಹಾಯವು ಮಾತ್ರ ಅದನ್ನು ಮೂಲದಕಡೆಗೆ ತಿರುಗಿಸಬಲ್ಲದು. ಅಂಥ ಮಹಾತ್ಮನ ಶಕ್ತಿ ಮತ್ತು ಸಂಕಲ್ಪಗಳು ಮಾತ್ರ ಈ ವಿಷಯದಲ್ಲಿ ಗಣನಾರ್ಹವಾಗಬಲ್ಲವು. ಓದು–ಬರೆಹಗಳು ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಶ್ರದ್ಧೆ, ಭಕ್ತಿ ಮತ್ತು ಆತ್ಮವಿಶ್ವಾಸವುಳ್ಳ ಮನುಷ್ಯನು ಯಶಸ್ವಿಯಾಗುತ್ತಾನೆ.

ಮಾನವನು ಪ್ರಕೃತಿಯ ಒಂದು ಉಪಕರಣ. ಅವನಲ್ಲಿ ಅಗಾಧ ಶಕ್ತಿ ಹುದುಗಿದೆ, ಆ ಶಕ್ತಿಯನ್ನು ಉಪಯೋಗಿಸಲು ಬೇಕಾಗುವ ಸಲಕರಣೆಗಳೂ ಅವನಲ್ಲಿವೆ. ಆ ಅದ್ಭುತ ಸಲಕರಣವೆಂದರೆ ಅವನ ಮನಸ್ಸೇ. ಅದು ಸಂಪೂರ್ಣವಾಗಿ ಮಾನವನ ಆಸ್ತಿಯಾಗಿದೆ ಕೂಡ. ಪೂಜಾರ್ಹನೆಂದು ತಿಳಿಯಲಾದ ದೇವರಿಗೆ ಕೂಡ ಮನಸ್ಸು ಇಲ್ಲ. ಪ್ರಾಣಿಗಳಿಗೆ ಮನಸ್ಸು ಇದೆಯೆಂದೆನ್ನುವುದೇನೋ ಸರಿ; ಆದರೆ ಅದು ಬೇರೆ ಗುಣಸ್ವಭಾವವುಳ್ಳದ್ದು.

ಹಾಗೆನ್ನುವುದಾದರೆ ಚೈತನ್ಯ ಮತ್ತು ಕ್ರಿಯಾಶೀಲತೆಯುಳ್ಳ ಮಾನವನ ಮನಸ್ಸಿಗೆ ಹೋಲಿಸಿದರೆ ಅದು ಜಡಸ್ಥಿತಿಯಲ್ಲಿದೆ ಎನ್ನಬಹುದು. ಸೃಷ್ಟ್ಯುದ್ಭವಕ್ಕೆ ಕಾರಣವಾದ ಭಗವದಿಚ್ಛೆಯಿಂದ ಪರಿಣಮಿಸಿದ ಪ್ರಥಮ ಕ್ಷೋಭವೇ ಮನಸ್ಸಿನ ಉಗಮಸ್ಥಾನ. ಮಾನವನ ಮನಸ್ಸಿನ ಸ್ವರೂಪವು ಇಂತಿರುವಾಗ ಮನಸ್ಸು ಮಾನವನ ಅತ್ಯಂತ ಕೆಟ್ಟ ಶತ್ರುವೆಂದು ಹೀನಶಬ್ದಗಳಿಂದ ಮಹಾತ್ಮರೆಂದು ಹೇಳಿಕೊಳ್ಳುವವರು ತೆಗಳುವುದು ತೀರ ತಪ್ಪು. ಅದರ ನಿಜವಾದ ಮೌಲ್ಯವನ್ನೂ, ಗುಣವನ್ನೂ ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ನಿಜಕ್ಕೂ, ಸಂಗತಿಗಳನ್ನು (ವಸ್ತುಗಳನ್ನು) ಕ್ರಿಯಾರೂಪಕ್ಕೆ ತರುವ ಏಕೈಕ ಸಾಧನ ಅದೇ ಆಗಿದೆ. ಮಾನವನ ಪುಟ್ಟ ಸೃಷ್ಟಿಯನ್ನು ಅಸ್ತಿತ್ವಕ್ಕೆ ತಂದ ಅದು ಮೂಲ ವೈಶ್ವಿಕ ಶಕ್ತಿಯ ಸಂಕ್ಷಿಪ್ತ ರೂಪವಾಗಿದೆ. ಪ್ರತಿಯೊಂದು ವಸ್ತುವಿನ ಮೂಲದಲ್ಲಿರುವ ಕ್ರಿಯಾಶೀಲ ಶಕ್ತಿಯೇ ಅದು. ಅದು ಯಾರ ಶಕ್ತಿ ? ಅದು ಖಂಡಿತವಾಗಿಯೂ ಮಾನವನದೇ. ಯಾಕೆಂದರೆ, ದೇವರು ಮನಸ್ಸನ್ನೇ ಹೊಂದಿರುವುದಿಲ್ಲ. ದೇವರಿಗೆ ಮನಸ್ಸು ಇದ್ದಿದ್ದರೆ ಅವನೂ ಸಂಸ್ಕಾರಗಳ ಪರಿಣಾಮಗಳಿಗೆ ಈಡಾಗುತ್ತಿದ್ದನು. ಹಾಗಿದ್ದಮೇಲೆ ಮೂಲದಲ್ಲಿ ಕೆಲಸ ಮಾಡುವುದು ಮಾನವ ಮನಸ್ಸೇ ಆಗಿರಬೇಕು.

ಮಾನವಶರೀರದ ಪ್ರತಿಯೊಂದು ಕಣದಲ್ಲಿಯೂ ಆಗಾಧ ಶಕ್ತಿ ಇದೆ. ಇಡೀ ವಿಶ್ವವು ಅದರೊಡನೆ ಅತಿ ನಿಕಟವಾಗಿ ಸಂಬಂಧಿತವಾಗಿದೆ. ಬೆನ್ನೆಲುಬಿನ ಪ್ರತಿಯೊಂದು ಬಿಂದುವೂ ಅತ್ಯಂತ ದೊಡ್ಡ ಶಕ್ತಿಯಿಂದ ತುಂಬಿದೆ. ಆದರೆ ಇದುವರೆಗೆ ಯಾರೂ ಅದಕ್ಕೆ ಲಕ್ಷ್ಯಕೊಟ್ಟಿಲ್ಲ. ಜನರು ಕುಂಡಲಿನಿಯನ್ನು ಜಾಗ್ರತಗೊಳಿಸುವ ಹುಚ್ಚಿನಿಂದ ಅದರ ಬೆನ್ನುಹತ್ತಿ, ಅದಕ್ಕಾಗಿಯೇ ಕೂಗುತ್ತಿದ್ದಾರೆ. ಮೆದುಳಿನ ಪ್ರತಿಯೊಂದು ಕೋಶದ ಕೇಂದ್ರದ ರಚನೆಯಲ್ಲಿ ಅದರದೇ ಆದ ಬಲವಾದ ಶಕ್ತಿ ಇದೆ. ಆ ಶಕ್ತಿ ಕುಂಡಲಿನಿಯನ್ನು ಮೀರಿಸುವಂಥದಾಗಿದೆ. ಆದರೆ ಯಾರೂ ಅದನ್ನು ಮಾನವರ ಕಲ್ಯಾಣಕ್ಕಾಗಿ ಉಪಯೋಗಿಸಲು ಪ್ರಯತ್ನಿಸಿಲ್ಲ. ನನ್ನ ಈ ಅಭಿಪ್ರಾಯವು ಅನೇಕ ಜ್ಞಾನಿಗಳಿಗೆ ಅಂಗೀಕಾರಾರ್ಹವೆನಿಸದಿರಬಹುದು. ಮತ್ತು ಒಂದು ವೇಳೆ ಅದನ್ನು ಅವರಿಗೆ ಪ್ರದರ್ಶಿಸಿ ತೋರಿಸಿದರೂ ಕೂಡ ಅದನ್ನು ಮನಗಾಣುವಷ್ಟು ಅವರು ಸೂಕ್ಷ್ಮಗ್ರಾಹಿಗಳಾಗಿರಲಿಕ್ಕಿಲ್ಲ. ಆದರೆ, ಅಂಥ ಒಂದು ಕಾಲ ಬಂದೇ ಬರಲಿಕ್ಕೆ ಇತ್ತೆಂಬಂತೆ, ಜನರು ಅದನ್ನು ಅರಿತು ಮನಗಾಣುವ ಕಾಲ ಸನ್ನಿಹಿತವಾಗಿದೆ.

## ಮಾನವತೆ ಮತ್ತು ದೈವತ್ವಗಳ ನಡುವಣ ಸಮಾನಾಂತರತೆಯ ಅಳಿವು

ದೇವರು ಮಾನವನನ್ನು ತನ್ನದೇ ರೂಪದಲ್ಲಿ ಸೃಷ್ಟಿಸಿದನೆಂಬುದು ಸಾಮಾನ್ಯವಾಗಿ ನಂಬಲಾಗಿರುವುದು. ಪ್ರಪಂಚದ ಎಲ್ಲ ಮತಧರ್ಮಗಳೂ, ತತ್ತ್ವಶಾಸ್ತ್ರಗಳೂ, ವಿಜ್ಞಾನಶಾಸ್ತ್ರಗಳೂ ಈ ಅಂಶದಲ್ಲಿ ಹೆಚ್ಚು ಕಡಿಮೆ ಒಮ್ಮತ ಹೊಂದಿವೆ. ದೇವರ ದೈಹಿಕ ರೂಪವು ಕೈಕಾಲು, ಅವಯವಗಳಿಂದ ಕೂಡಿ,

ಮಾಂಸ, ಮೂಳೆ, ಚರ್ಮಗಳಿಂದ ಆಗಿರುವ ಮನುಷ್ಯರೂಪದಂತೆ ಇದೆಯೆಂದು ಇದರ ಅರ್ಥವಲ್ಲ. ಪ್ರಕೃತಿಯಲ್ಲಿರುವ ಸಕಲ ಶಕ್ತಿ-ಸಾಮರ್ಥ್ಯ ಮತ್ತು ಊರ್ಜೆಗಳನ್ನು ಮಾನವನು ಅದೇ ಕ್ರಮದಲ್ಲಿ ಹೊಂದಿದ್ದಾನೆ ಅಥವಾ ಅಂತೆಯೇ ಮಾನವನ ಸಂರಚನೆ ಅವುಗಳಿಂದಾಗಿದೆ ಎಂಬುದೇ ಇದರ ನಿಜವಾದ ಅರ್ಥ.

ಮಾನವನ ಸಂರಚನೆಯು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ವಿಶ್ವದ ರಚನೆಯಂತೆಯೇ ಇದೆ. ಸ್ಥೂಲವಾದ ಬಾಹ್ಯ ವಿಶ್ವದ ಹಿಂದೆ ಅಸಂಖ್ಯಾತ ಸೂಕ್ಷ್ಮ ಮತ್ತು ಇನ್ನೂ ಸೂಕ್ಷ್ಮತರ ರೂಪಗಳು ಇರುವಂತೆಯೇ ಮಾನವನ ಸ್ಥೂಲ ಭೌತಿಕ ರೂಪದ ಹಿಂದೆ ಸೂಕ್ಷ್ಮ ಮತ್ತು ಸೂಕ್ಷ್ಮತರ ಅಸ್ತಿತ್ವರೂಪಗಳಿವೆ. ಅತ್ಯಂತ ಬಾಹ್ಯರೂಪವೇ ಸ್ಥೂಲಶರೀರ. ಈ ಮೂರು ಹೊರರೂಪಗಳಲ್ಲದೆ, ಜೊತೆಗೆ ಸೂಕ್ಷ್ಮವಾದ ಮತ್ತು ತೆಳುವಾದ ಅಸಂಖ್ಯ ರೂಪಗಳಿವೆ; ಜ್ಞಾನಿಗಳು ಅವುಗಳನ್ನು ಶರೀರಗಳೆಂದು ಕರೆಯದೆ, ಆತ್ಮದ ಸುತ್ತಲೂ ಇರುವ ತೆಳುವಾದ ಆವರಣಗಳೆಂದು ಕರೆಯುತ್ತಾರೆ. ಅಸಂಖ್ಯೇಯವಾದ ಇವುಗಳಿಗೆ ಹೆಸರು ಕೊಡುತ್ತ ಹೋಗುವುದು ನಿಜವಾಗಿ ಬಹಳ ಕಷ್ಟ ಅತಿಸೂಕ್ಷ್ಮದಿಂದ ಹಿಡಿದು ಅತಿಸ್ಥೂಲದವರೆಗೆ ಇರುವ ಅಸಂಖ್ಯಾತ ರೂಪಗಳೊಂದಿಗೆ ಮನುಷ್ಯನು ವಿಶ್ವದ ಯಥಾವತ್ ಪ್ರತಿಕೃತಿಯಂತೆ, ದೇವರು ಮಾಡಿದ ಇದೇ ವಿಶ್ವಾಭಿವ್ಯಕ್ತಿಯ ಪ್ರತಿಕೃತಿಯಂತೆ, ಈ ಭೌತಿಕ ಪ್ರಪಂಚದಲ್ಲಿ ಇದ್ದಾನೆ. ಅತ್ಯಂತ ಹೊರಗಿನ ವೃತ್ತಪರಿಧಿಯಿಂದ ಅತ್ಯಂತ ಒಳಗಿರುವ ಕೇಂದ್ರ ಅಥವಾ 'ಶೂನ್ಯ'ವನ್ನೊಳಗೊಂಡ ಒಂದು ವೃತ್ತದಿಂದ ಪ್ರತಿನಿಧಿಸಲ್ಪಟ್ಟಂತೆ, ಮಾನವನ ಅಸ್ತಿತ್ವವೂ ದೇವರ ಸೃಷ್ಟ್ಯಭಿವ್ಯಕ್ತಿಯೂ ನಿಜಕ್ಕೂ ಒಂದೇ ತೆರನಾಗಿವೆ. ಇದಕ್ಕಾಗಿಯೇ ದೇವರ ಸಾಕ್ಷಾತ್ಕಾರವೆಂದರೆ ಆತ್ಮಸಾಕ್ಷಾತ್ಕಾರ, ಆತ್ಮಸಾಕ್ಷಾತ್ಕಾರವೆಂದರೆ ದೇವರ ಸಾಕ್ಷಾತ್ಕಾರ ಎಂದು ಅರ್ಥ. ಶೂನ್ಯವೆಂಬ ಅದೇ ಬಿಂದುವಿನಿಂದ ಸಮಗ್ರ ವಿಶ್ವವು ವಿಕಾಸಕ್ರಮದಿಂದ ಅಸ್ತಿತ್ವಕ್ಕೆ ಬಂದಿದೆ. ಅದೇ ರೀತಿಯಲ್ಲಿ ಮಾನವನ ಅಸ್ತಿತ್ವವೂ ಅದೇ ಬಿಂದುವಿನಿಂದ ವಿಸ್ತರಣೆಗೊಂಡು ಬಂದಿದೆ.

ಧಾರ್ಮಿಕ ಚೈತನ್ಯವು ಒಂದಿಲ್ಲೊಂದು ರೂಪದಲ್ಲಿ ಸದಾ ಪ್ರವಹಿಸುತ್ತಿರುವ ದೇಶಕ್ಕೆ ಸೇರಿದವರು ನಾವು. ನಾವು ಯಾವ 'ಸತ್ಯ'ದಿಂದ ಉದ್ಭವಿಸಿಬಂದೆವೋ ಅದರೊಂದಿಗೆ ಸಾಯುಜ್ಯಹೊಂದಲೋಸುಗವೇ ನಾವು ಪಾಲಿಸಲ್ಪಟ್ಟಿದ್ದೇವೆ. ಅನಂತದ ಸಾರವನ್ನೇ ನಾವು ನಮ್ಮೊಡನೆ ತಂದಿದ್ದೇವೆ. ದೇವರು ಮನುಷ್ಯನಲ್ಲಿ ಇದ್ದಾನೆಂದು ಹೇಳುತ್ತಾರೆ. ಈ ರೀತಿ ನಾವು ದೇವತ್ವದೊಂದಿಗೆ ಒಟ್ಟಿಗೆ ಸಾಗುತ್ತ ಹೋದಾಗ ಮತ್ತು ಅದನ್ನು ಮಾನವತೆಯ ರೇಖೆ (ಪಥ)ಯೊಂದಿಗೆ ಜೋಡಿಸಿದಾಗ ನಮ್ಮ ಅಂತಿಮ ಉದ್ದೇಶವು ನೆರವೇರಬಲ್ಲದು. ನಾನು ಈ ಮುಂಚೆ ಹೇಳಿರುವಂತೆ ಸೃಷ್ಟಿಯ ಮೂಲದಲ್ಲಿ ಮಾನವತೆಯು ದೇವತ್ವಕ್ಕೆ ಸದೃಶವಾಗಿತ್ತು. ವಿಕಾಸದ ಪಥದಲ್ಲಿ ಕ್ರಿಯೆ-ಪ್ರತಿಕ್ರಿಯೆಗಳಿಂದುಂಟಾದ ಆಘಾತಗಳ ಪರಿಣಾಮವಾಗಿ ಅದು ಸ್ಥೂಲತರ ರೂಪವನ್ನು ತಳೆಯಿತು. ದೈವತ್ವದೊಂದಿಗೆ ನಮ್ಮ ಸಂಬಂಧದ

ಕೊಂಡಿಯನ್ನು ಕಾಯ್ದುಕೊಂಡು ಹೋಗಲು ಮಾನವನ ಅಸ್ತಿತ್ವ ರಚನೆಯ ಎಲ್ಲ ಘಟಕಾಂಶಗಳನ್ನೂ ಅವುಗಳ ಆದಿಯಲ್ಲಿದ್ದ ಸಮತ್ವ ಮತ್ತು ಶಾಂತಿಯ ಸ್ಥಿತಿಗೆ ತರಬೇಕಿದೆ. ಅವುಗಳಲ್ಲಿ ಯೋಗ್ಯ ಮಿತತ್ವವನ್ನು ಉಂಟುಮಾಡುವುದರಿಂದ ಅದು ಸಾಧಿಸಲ್ಪಡುವುದು; ನಾವು ಸಹಜಮಾರ್ಗದಲ್ಲಿ ಮಾಡುವುದು ಇದನ್ನೇ. ನಮ್ಮ ಸಂಕಲ್ಪಶಕ್ತಿಯ ಕ್ರಿಯೆಯ ಮೂಲಕ ಮಿತತ್ವವಿಲ್ಲದಿರುವಿಕೆಯನ್ನು ಹೋಗಲಾಡಿಸಿ, ಸಮತ್ವವನ್ನು ಕಾಯ್ದುಕೊಂಡು ಹೋಗುವುದೇ ನಮ್ಮ ದೈನಂದಿನ ಧ್ಯಾನಾಭ್ಯಾಸದ ಉದ್ದೇಶ. ಈ ರೀತಿಯಲ್ಲಿ ನಮ್ಮಲ್ಲಿರುವ ಮಾನವತೆಯು ದೈವತ್ವದಲ್ಲಿ ರೂಪಾಂತರಗೊಳ್ಳಲು ಪ್ರಾರಂಭಿಸುತ್ತದೆ. 'ಮಾನವನ ದೈವೀಕರಣ'ವೆಂಬ ಪದದ ನಿಜವಾದ ಅರ್ಥವು ಇದೇ ಆಗಿದೆ. ಇದನ್ನು ಸಾಧಿಸಿದಾಗ ನಿಜಕ್ಕೂ ದೈವತ್ವಗಳ ನಡುವಣ ಸಮಾನಾಂತರತೆಯು ಕಣ್ಮರೆಯಾಗಿ ಹೋಗಿ ಅವೆರಡೂ ಹೆಚ್ಚು ಕಡಿಮೆ ಒಂದೇ ಆಗುತ್ತವೆ. ಅದು ಹೇಗೇ ಇರಲಿ, ಶರೀರವಿರುವತನಕವೂ ಮಾನವತೆಯು ಸಂಪೂರ್ಣ ಲುಪ್ತವಾಗಿ ಹೋಗಲಾರದು. ಹೀಗೆ ಸಹಜಮಾರ್ಗ ಪದ್ಧತಿಯಂತೆ ಧ್ಯಾನಮಾಡುವುದರ ಪರಿಣಾಮವಾಗಿ ಮಾನವತೆಯ ರೇಖೆಯಲ್ಲಿ ಕೆಲಸಮಾಡುತ್ತಿರುವ ಶಕ್ತಿಗಳ ತೀವ್ರತೆಯನ್ನು ನಾವು ಕಡಿಮೆ ಮಾಡುತ್ತ ಹೋಗುತ್ತೇವೆ. ಹೀಗೆ ದೈವತ್ವವು ನೆಲೆಯೂರುತ್ತ ಹೋಗಿ ಸಮಾನಾಂತರತೆಯು ಕಡಿಮೆಯಾಗುತ್ತ ಹೋಗುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ದೈವತ್ವದ ಶಕ್ತಿಯಿಂದ ಮಾನವತೆಯು ಚೈತನ್ಯಭರಿತವಾಗುತ್ತ ಹೋಗಿ ಕ್ರಮೇಣ ಅದೇ ಎಲ್ಲೆಲ್ಲೂ ತಾನೇತಾನಾಗಿ ನೆಲೆಗೊಳ್ಳಲಾರಂಭಿಸುತ್ತದೆ. ಈ ಸ್ಥಿತಿಗಳು ಸಂಪೂರ್ಣ ಸ್ಥಿರಗೊಂಡಾಗ ಸಮಾನಾಂತರತೆ ಲುಪ್ತವಾಗುತ್ತದೆ, ಮತ್ತು ಮಾನವತೆಯು ಮತ್ತು ಅದರ ಸೃಷ್ಟಿ–ಶಕ್ತಿಯು ಲುಪ್ತವಾಯಿತೆನ್ನುವಷ್ಟು ಕಡಿಮೆಯಾಗುತ್ತದೆ (ನಗಣ್ಯವಾಗಿ ಬಿಡುತ್ತದೆ). ಈ ರೀತಿಯಲ್ಲಿ ದೇವರು ಅನಂತನಾಗಿರುವಂತೆ, ಅತ್ಯುನ್ನತ ಮಟ್ಟವನ್ನು ತಲುಪಿದ ಮಾನವನೂ ಕೂಡ ಮಾನವತೆಯ ಮಂಡಲದಲ್ಲಿ (ಪರಿಧಿಯೊಳಗೆ) ಅದಕ್ಕೆ ಸದೃಶನಾಗಿ ಇರುತ್ತಾನೆ. ಮಾನವತೆಯ ಪರಿಮಿತಿಗಳು ಹೊರಟುಹೋದಮೇಲೆ ಆತ್ಮದ ವಿಸ್ತಾರವು ಅಪರಿಮಿತವಾಗಿ ಸಮಸ್ತ ವಿಶ್ವವು ಆತ್ಮನಲ್ಲಿ ಅಡಕಗೊಂಡಿರುವಂತೆ ಕಾಣುತ್ತದೆ. ವಿಶ್ವದಲ್ಲಿ ಎಲ್ಲಿಯಾದರೂ ಏನೇ ತುಡಿತವಾದರೆ, ಅವನ ಹೃದಯದಲ್ಲಿ ಅದು ಮಾರ್ದನಿಗೊಳ್ಳುತ್ತದೆ. ಆಗ ಪ್ರಕೃತಿಯಲ್ಲಿ ಇರುವುದೆಲ್ಲವೂ ಅವನ ಗ್ರಹಿಕೆಯ, ಜ್ಞಾನದ ಅಳವಿನೊಳಗಿರುತ್ತದೆ.

## ಸಾಕ್ಷಾತ್ಕಾರ ಮತ್ತು ಅದರ ಸಾಧನೋಪಾಯಗಳು

ಪ್ರಾಚೀನ ಕಾಲದಿಂದಲೂ ವಿಶೇಷವಾಗಿ ಭಾರತ ದೇಶದಲ್ಲಿ ಈಶ್ವರ ಸಾಕ್ಷಾತ್ಕಾರವು ಮಾನವನ ಪ್ರಯತ್ನಗಳ, ಅವನ ಅಸ್ತಿತ್ವದ ಧ್ಯೇಯ (ಪುರುಷಾರ್ಥ) ಎಂದು ಘೋಷಿಸಲ್ಪಟ್ಟಿದೆ. ಆದರೆ ದೇವರು (ಅರ್ಥಾತ್ 'ಪರಮಸತ್ಯ') ಎಂಬ ಕಲ್ಪನೆಯು ಇದ್ದಂತೆ ಈಶ್ವರ ಸಾಕ್ಷಾತ್ಕಾರದ ಕಲ್ಪನೆಯೂ ಗೂಢತೆಯ ಆವರಣಗಳಿಂದ

ಮುಚ್ಚಿಹೋಗಿ, ಓರ್ವ ವಿಚಾರವಂತ, ವೈಜ್ಞಾನಿಕ ಬುದ್ಧಿಯುಳ್ಳ ಪ್ರಾಮಾಣಿಕ ವ್ಯಕ್ತಿಗೆ ಈ ಪದವನ್ನು ಉಚ್ಚರಿಸಿದ ಮಾತ್ರಕ್ಕೆ ಜಿಗುಪ್ಸೆ ಹುಟ್ಟುವಂತಾಗಿದೆ.

ಅನೇಕ ವಿದ್ವಾಂಸ ಸಂತರು ಸಾಕ್ಷಾತ್ಕಾರದ ಸ್ಥಿತಿಯನ್ನು ಅನೇಕ ವಿಲಕ್ಷಣ ರೀತಿಯಲ್ಲಿ ಅರ್ಥನಿಷ್ಕರ್ಷೆ ಮಾಡಿದ್ದಾರೆ; ಆದರೆ ಎಲ್ಲಿಯವರೆಗೆ ಅದನ್ನು ವ್ಯಾಖ್ಯೆಗೆ ಅಳವಡಿಸಲ್ಪಡಬಹುದೋ ಅಲ್ಲಿಯವರೆಗೆ ಅದು ಸಾಕ್ಷಾತ್ಕಾರವಲ್ಲ ಎಂದು ನನಗೆ ತೋರುತ್ತದೆ. ನಿಜವಾಗಿಯೂ ಅದೊಂದು ಅಭಿವ್ಯಕ್ತಿಯನ್ನು ಮೀರಿದ ಮೂಕಸ್ಥಿತಿ. ಅಂತರ್ಬಾಹ್ಯದಲ್ಲಿ ಎಲ್ಲೇ ಆಗಲಿ ಪ್ರಕಾಶವನ್ನು ಕಾಣುವುದು ಅಥವಾ ಅನುಭವ ಹೊಂದುವುದು ಸಾಕ್ಷಾತ್ಕಾರವಲ್ಲವೇ ಅಲ್ಲ. ನನ್ನ ಅಭ್ಯಾಸದ ಪ್ರಾರಂಭಕಾಲದಲ್ಲಿ ನನಗೆ ಅನೇಕ ಸಲ ಪ್ರಕಾಶದ ಅನುಭವ ಮತ್ತು ದರ್ಶನವಾಯಿತು. ಆದರೆ ಅದು ನನ್ನ ಗುರಿಯಾಗಿರಲಿಲ್ಲವಾದ್ದರಿಂದ ನಾನು ನನ್ನ ಗುರುಗಳ ಕಣ್ಗಾವಲಿನ ಸಹಾಯದಿಂದ ಮುಂದುವರಿದೆ. ನಿಜವಾಗಿಯೂ ಅದು (ಸಾಕ್ಷಾತ್ಕಾರ) ರುಚಿರಹಿತವಾದ ಬದಲಾವಣೆಯಿಲ್ಲದ ಸ್ಥಿರ (ನಿರಂತರ) ಸ್ಥಿತಿ. ಅದರಲ್ಲಿ ಯಾವ ಮೋಹಕತೆಯಿಲ್ಲ, ಆಕರ್ಷಣೆಯಿಲ್ಲ; ಸಾಮಾನ್ಯವಾಗಿ ಜನಜನಿತ ಅರ್ಥದ ಆನಂದವೂ ಇಲ್ಲ. ಅದನ್ನು 'ಸಂಗ್–ಎ–ಬೇ–ನಮಕ್' ಅಂದರೆ 'ಉಪ್ಪಿನ ರುಚಿ ಕಳೆದುಕೊಂಡ ಉಪ್ಪಿನ ಹರಳು' ಎಂದು ವರ್ಣಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಓರ್ವನು ಸಾಕ್ಷಾತ್ಕಾರ ಹೊಂದಿದನೆಂದರೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಚ್ಯುತಿಯಿಲ್ಲದಂಥ ಸಂಕಲ್ಪಶಕ್ತಿಯನ್ನು ಅವನು ಬೆಳೆಕೊಂಡಿರುತ್ತಾನೆ.

ಅನುಭವ ಜ್ಞಾನವೇ ಸತ್ಯವಾದುದು. ಸಾಮಾನ್ಯವಾಗಿ ಪಂಡಿತರು ಸಾಕ್ಷಾತ್ಕಾರವನ್ನು ಅಥವಾ ಅದರ ಸ್ಥಿತಿಗಳನ್ನು ಕುರಿತು ತಮ್ಮ ವಿದ್ವತ್ತಿನ ಆಧಾರದಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಾರೆಯೇ ಹೊರತು ತಮ್ಮ ಪ್ರಾಯೋಗಿಕ ಅನುಭವದ ಆಧಾರದ ಮೇಲಲ್ಲ. ಆ ಕಾರಣ ಇಂದಿನ ಕಾಲದಲ್ಲಿ 'ಸಾಕ್ಷಾತ್ಕಾರ'ವೆಂಬುದು ಒಂದು ಚಾತುರ್ಯದ ಮಾತಾಗಿಬಿಟ್ಟಿದೆಯೆಂದು ನಾನು ವಿಷಾದದಿಂದ ಹೇಳುತ್ತೇನೆ. ನಿಜವಾಗಿ ಹೇಳುವುದಾದರೆ 'ಸತ್ಯ'ವು ತನ್ನ ವರ್ಣಗಳನ್ನು ಅವರವರ ಮನಸ್ಸಿನ ರುಚಿ, ಕೌಶಲಗಳಿಗೆ ಬಿಟ್ಟುಕೊಟ್ಟು ತಾನು ಆಳದಲ್ಲಿ ಮುಳುಗಿಕೊಂಡಿದೆ. ಅದರ ಫಲವಾಗಿ ಜನರು ಆ ವರ್ಣಮಯ ಚಿತ್ರಗಳ ಮೇಲೆ ತಮ್ಮ ಗಮನವನ್ನು ನೆಟ್ಟಿರುತ್ತಾರೆ, ಅದರೊಳಗೆ ಸಿಕ್ಕಿಕೊಳ್ಳುತ್ತಾರೆ. ಎಷ್ಟರಮಟ್ಟಿಗೆ ಎಂದರೆ ಅದು ಆಧ್ಯಾತ್ಮಿಕತೆಯೂ ಅಲ್ಲ, ಸತ್ಯವೂ ಅಲ್ಲ. ದೈವೀಜ್ಞಾನವನ್ನು ಜಾಗ್ರತಗೊಳಿಸುವ, ನೈಜ ಅರ್ಥದ ಸಾಕ್ಷಾತ್ಕಾರವನ್ನು ಪಡೆಯದೆ, ಆ ವಿಷಯವನ್ನು ಮುಟ್ಟಲು ಯಾರಿಗೂ ಅಧಿಕಾರವಿರಬಾರದೆಂದು ನಾನು ನಂಬುತ್ತೇನೆ. ಈ ಸಮಸ್ಯೆಯ ಪರಿಹಾರಕ್ಕೆ ಸಾಧನಾಮಯ ಜೀವನವೇ ಬೇಕು.

ಸಾಕ್ಷಾತ್ಕಾರವನ್ನು ಒಂದು ಅವ್ಯಾಕೃತ, (ಅವ್ಯಯ, ಬದಲಾವಣೆಯಿಲ್ಲದ) ಸ್ಥಿತಿಯೆಂದು ವ್ಯಾಖ್ಯೆ ನೀಡುವುದು ಉಚಿತವಾದೀತು. ಸಾವಿರಾರು ವರ್ಷಗಳಲ್ಲಿ

ಯಾವನೋ ಒಬ್ಬನಿಗಾದರೂ ಕ್ವಚಿತ್ತಾಗಿಯೇ ಅನುಗ್ರಹಿಸಲ್ಪಡುವಂಥ ಸ್ಥಿತಿ ಅದು. ಆದರೆ ಯಾವನಿಗಾದರೂ ಅದನ್ನು ಸಂಪೂರ್ಣವಾಗಿ ಪಡೆದ ಗುರುವೊಬ್ಬನು ದೊರೆತರೆ, ಮತ್ತು ಆ ಅಭ್ಯಾಸಿಯು ತೀವ್ರ ಆಸಕ್ತಿ ಹೊಂದಿ, ಅದರ ಬಗ್ಗೆ ಕಾತರತೆಯುಳ್ಳವನಾಗಿದ್ದರೆ, ಅದು ಬಹಳ ಸುಲಭಸಾಧ್ಯವಾಗುತ್ತದೆ. ಆದರೆ, 'ಇದೆ' ಎಂಬ ಭಾವನೆ (ಅಸ್ತಿತ್ವದ ಕಲ್ಪನೆ) ಇರುವವರೆಗೂ, ಅದು ಸಂಪೂರ್ಣ ಸಾಕ್ಷಾತ್ಕಾರವಲ್ಲ. 'ಆನಂದ' ಕೂಡ ಒಂದು ನ್ಯೂನತೆಯಾಗುತ್ತದೆ ಎಂದು ಬೇರೆ ಹೇಳಬೇಕಿಲ್ಲ.

ಸಾಕ್ಷಾತ್ಕಾರವೆಂದರೇನೆಂದು ನಾನು ಜನರಿಗೆ ತಿಳಿಸಬೇಕೆಂದೂ, ಮತ್ತು ಅನಂತರ ಅವರು ಪೂಜೆಯನ್ನು ಪ್ರಾರಂಭಿಸುವರೆಂದೂ ಜನರು ಅನೇಕ ಬಾರಿ ನನ್ನನ್ನು ಕೇಳುತ್ತಾರೆ. ಈ ಮಾತು ಹೇಗಿದೆಯೆಂದರೆ, "ನಾನು ಶೇಕ್ಸಪಿಯರ್, ಮಿಲ್ಟನ್ನರ ವಿಚಾರಗಳನ್ನು ಮೊದಲು ಅರ್ಥ ಮಾಡಿಕೊಳ್ಳುತ್ತೇನೆ, ಮತ್ತು ಅನಂತರ ವರ್ಣಮಾಲೆಯನ್ನು ಕಲಿಯಲು ಪ್ರಾರಂಭಿಸುವೆ" ಎಂದಂತಿದೆ. ಅಭ್ಯಾಸಿಯು 'ನಾನು ಮೊದಲು ದೇವರನ್ನು ಸಾಕ್ಷಾತ್ಕರಿಸಿಕೊಂಡು ಅನಂತರ ಅವನನ್ನು ಪೂಜಿಸಲು ಪ್ರಾರಂಭಿಸುತ್ತೇನೆ' ಎಂದು ಹೇಳುವುದೂ ಹಾಗೆಯೇ ಆಯಿತು. ನೀವು ಅರಸುತ್ತಿರುವ ವಸ್ತುವೇ ಕೈಗೆ ಸಿಕ್ಕ ಮೇಲೆ, ಮತ್ತೆ ಪೂಜೆಯನ್ನೇಕೆ ಮಾಡಬೇಕು? ತಾನು ಕೆಳಮಟ್ಟದಲ್ಲಿದ್ದೇನೆ ಎಂಬ ಅರಿವನ್ನು ತನ್ನಲ್ಲಿ ಉಂಟು ಮಾಡಿಕೊಂಡಿರುವವನೇ ಎತ್ತರಕ್ಕೆ ಏರಬಲ್ಲನು. ಆಧ್ಯಾತ್ಮಿಕ ಅತೃಪ್ತಿಯು ತತ್ತ್ವಾನ್ವೇಷಣೆಯ ಸಾಹಸ ಯತ್ನದ ಆರಂಭದ ಬಿಂದು ಎಂದು ಭಾರತೀಯ ದರ್ಶನ ಸಂಪ್ರದಾಯದಲ್ಲಿ ಮಾನ್ಯ ಮಾಡಿರುವುದು ಯುಕ್ತವೇ ಇದೆ.

ದಿವ್ಯ ಪುರುಷನ ಸಾನ್ನಿಧ್ಯವಿರುವುದರಿಂದ, ಇಂದು ಸಾಕ್ಷಾತ್ಕಾರವು ಅತ್ಯಂತ ಸುಲಭ ಸಾಧ್ಯವಾಗಿದೆ. ಜನರ ಚಿಂತನೆಯು ಸಾಮಾನ್ಯವಾಗಿ ಮುಕ್ತಿಯ ಬಿಂದುವಿಗಿಂತ ಆಚೆಗೆ ಹೋಗುವುದಿಲ್ಲ. ಅದುವೇ ಮಾನವನು ತಲುಪಬಹುದಾದ ಆತ್ಯಂತಿಕ ಸೀಮೆ ಎಂದು ಅವರು ಭಾವಿಸಿದ್ದಾರೆ. ಆದರೆ ಅದು ತಪ್ಪು. ವಾಸ್ತವವಾಗಿ, ಮುಕ್ತಿ ದೈವೀ ಪಥದಲ್ಲಿ ಬಹಳ ಕೆಳಮಟ್ಟದ ಸಿದ್ಧಿಗಳಲ್ಲಿ ಒಂದು. ಹಾಗೆ, ಅದು ಮಗುವಿನ ಆಟದ ಆಟಿಕೆಯಂತಿದೆ, ಅಷ್ಟೆ. ಅದರಾಚೆಗೆ ಇನ್ನೂ ಸಾಧಿಸಬಹುದಾದುದು ಬಹಳಷ್ಟು ಇದೆ. ಅನಂತ ಸಾಗರವು ಇನ್ನೂ ಮುಂದೆ ಇದೆ. ಅದೊಂದು ಅಪರಿಮಿತ ವಿಸ್ತಾರ. ನಿಮ್ಮ ದೃಷ್ಟಿಯನ್ನು ಅದರ ಮೇಲೆ, ಕೇವಲ ಅದರ ಮೇಲೆ, ಅವಿಚಲಿತವಾಗಿ ನೆಟ್ಟು, ಮುಂದೆ ಸಾಗುತ್ತ ಹೋಗಿ ಅದನ್ನು ಕಂಡುಕೊಳ್ಳಿರಿ.

ನಿರ್ವಿಕಲ್ಪ ಸಮಾಧಿಯೂ ಒಂದು ಯೌಗಿಕ ಸಿದ್ಧಿ, ಆದರೆ ಅದು ಸಮಸ್ಯೆಯ ಪರಿಹಾರ ನೀಡಲಾರದು. ಪ್ರಾಪಂಚಿಕ ಕೆಲಸ, ಕರ್ತವ್ಯಗಳಲ್ಲಿ ಎಷ್ಟೇ ನಿರತರಾಗಿದ್ದರೂ ಸರಿಯೆ, ನಾವು ಶುದ್ಧವೂ, ಸರಳವೂ ಆದ 'ಪರಮಸತ್ಯ'ದೊಂದಿಗೆ

ಅಂಟಿಕೊಂಡಿರುವುದೇ ಸಮಾಧಿಯ ನೈಜ ಸ್ಥಿತಿ. ಇದಕ್ಕೆ 'ಸಹಜ ಸಮಾಧಿ' ಎಂದು ಕರೆಯಲಾಗಿದೆ. ಇದು ಅತ್ಯುನ್ನತ ಸಿದ್ಧಿಗಳಲ್ಲಿ ಒಂದು, ಮತ್ತು ನಿರ್ವಾಣದ ಆಧಾರವೇ ಇದು. ಅದರ ಶ್ರೇಷ್ಠತೆಯನ್ನು ಶಬ್ದಗಳಲ್ಲಿ ವಿವರಿಸುವುದು ಸಾಧ್ಯವಿಲ್ಲ. ಅದರಲ್ಲಿಯೇ ನೆಲೆಗೊಂಡವನು ಅದನ್ನು ಮನಗಾಣಬಲ್ಲನು. ಅದರ ಹೆಸರು ಸೂಚಿಸುವಷ್ಟು ಸುಲಭದ್ದಲ್ಲ ಅದು. ಅದನ್ನು ಕುರಿತು ಸಂತ ಕಬೀರನು ಬಹಳೇ ಹೊಗಳಿದ್ದಾನೆ. ನಿಜಕ್ಕೂ, ಹೊಂದಲು ಯೋಗ್ಯವಾದ ವಸ್ತು ಅದೇ.

ಸಾಕ್ಷಾತ್ಕಾರಕ್ಕೆ ಅನೇಕ ಸಾಧನಗಳೂ, ಸಾಧನಾಭ್ಯಾಸಗಳೂ ವಿಧಿಸಲ್ಪಟ್ಟಿವೆ. ಅವುಗಳಲ್ಲಿ, ಶೀಘ್ರ ಯಶಸ್ಸಿನ ಭರವಸೆ ಕೊಡುವಂಥದನ್ನು ನಾವು ಆರಿಸಿಕೊಳ್ಳಬೇಕು. ಈಗ, ಅದು ಯಾವುದೆಂಬುದನ್ನು ಪ್ರತಿಯೊಬ್ಬನೂ ತಾನೇ ಸ್ವತಃ ನಿರ್ಣಯಿಸಿಕೊಳ್ಳಲಿ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರ ವಿವೇಚನಾಯುಕ್ತ ಅಭಿಪ್ರಾಯವನ್ನು ನಾನು ಒಂದು ಸುಳುಹು ಎಂದು ಸ್ವೀಕರಿಸುತ್ತೇನೆ– "ಮಾನವನನ್ನು ಅತ್ಯುನ್ನತ ಸ್ಥಿತಿಯವರೆಗೆ ಕೊಂಡೊಯ್ಯಬಲ್ಲುದು ರಾಜಯೋಗ ಮಾತ್ರ. ತನ್ನದೇ ಆಂತರಿಕ ಶಕ್ತಿಯನ್ನು ಪ್ರಾಣಾಹುತಿಯ ಮೂಲಕ ಉಪಯೋಗಿಸುವ ಸಾಮರ್ಥ್ಯವುಳ್ಳವನಲ್ಲದೆ ಮತ್ತಾರೂ ಗುರುವಾಗಲು ಅಥವಾ ಮಾರ್ಗದರ್ಶಕನಾಗಲು ಸಮರ್ಥರಲ್ಲ." ಹಠಯೋಗದ ಮೂಲಕ ಆಜ್ಞಾ ಚಕ್ರದ ಆಚೆಗೆ ಹೋಗಲು ಸಾಧ್ಯವಿಲ್ಲವೆಂದು ನಾನು ನಿಮಗೆ ಖಂಡಿತವಾಗಿ ಸೂಚಿಸಬಲ್ಲೆ. ಅದಲ್ಲದೆ ಅದರಲ್ಲಿ ಮತ್ತೊಂದು ಗಂಭೀರ ದೋಷವಿದೆ. ನಾವು ಹಠಯೋಗದ ಶಾರೀರಿಕ ಅಭ್ಯಾಸಗಳಿಂದ ಪ್ರಾರಂಭಿಸಿದಾಗ, ದೈಹಿಕ ಪ್ರಯತ್ನಗಳ ಮತ್ತು ಅದರೊಟ್ಟಿಗೆ ಅಹಂತೆಯ ಅರಿವು ಉದ್ದಕ್ಕೂ ಅದರ ಹಿನ್ನೆಲೆಯಲ್ಲಿ ಇರುತ್ತದೆ. ಹೀಗೆ ಅಹಂಕಾರವು ಕ್ಷೀಣಗೊಳ್ಳುತ್ತ ಹೋಗುವುದರ ಬದಲಾಗಿ, ಹೆಚ್ಚುತ್ತ ಹೋಗುತ್ತದೆ. ಆದರೆ ರಾಜಯೋಗದಲ್ಲಿ ಹೀಗಲ್ಲ. ಅದರಲ್ಲಿ, ಮನಸ್ಸಿನ ಸತತ–ಕ್ರಿಯಾತ್ಮಕ ಪ್ರವೃತ್ತಿಗಳನ್ನು ಶಮನಗೊಳಿಸಲು ಸೂಕ್ಷ್ಮ ಉಪಾಯಗಳಿಂದ ಮುಂದುವರಿಯುತ್ತಾನೆ. ಜೊತೆಗೆ, ಇದನ್ನು ಅಭ್ಯಾಸ ಮಾಡುವಾಗ ಅತಿ ಸೂಕ್ಷ್ಮ ವಸ್ತುವಿನ ಮೇಲೆ ಲಕ್ಷ್ಯವನ್ನು ನೆಟ್ಟಿರುವುದರಿಂದ, ಯಾವಾಗಲೂ ದೇಹಭಾವದಿಂದ ದೂರವಿರುತ್ತಾನೆ.

ಸೂಕ್ಷ್ಮ ವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಲುವಾಗಿ ಅಷ್ಟೇ ಸೂಕ್ಷ್ಮವಾಗಿಯೂ, ನವುರಾಗಿಯೂ ಇರುವ ಸಾಧನಗಳನ್ನು ಕೈಗೊಳ್ಳಬೇಕು. ಸರಳ ಸಮಸ್ಯೆಯ ಪರಿಹಾರಕ್ಕಾಗಿ ಜಟಿಲ ಕ್ರಮಗಳನ್ನು ಅನುಸರಿಸಿದಾಗಲೇ ತೊಂದರೆಯುಂಟಾಗುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅವರು ಒಂದು ಸೂಜಿಯನ್ನು ಎತ್ತಿಕೊಳ್ಳಲು 'ಕ್ರೇನ್' ಯಂತ್ರವನ್ನು ಉಪಯೋಗಿಸಿದಂತಾಗುತ್ತದೆ. ದೇವರು ಸರಳನು, ಮತ್ತು ಸರಳ ಸಾಧನಗಳ ಮೂಲಕ ಅವನನ್ನು ಪಡೆಯಬಹುದು. ಆದುದರಿಂದ, ಆತನನ್ನು ಸಾಕ್ಷಾತ್ಕರಿಸಿಕೊಳ್ಳಲು, ನಮ್ಮನ್ನು ನಮ್ಮದೇ ಸಂಕಲ್ಪ, ಕ್ರಿಯೆ ಮತ್ತು ಸುತ್ತಲಿನ ಪರಿಸರದಿಂದ ಉಂಟಾದ ವಸ್ತುಗಳಿಂದ ಬಿಡುಗಡೆ

ಮಾಡಬಲ್ಲ ವಿಧಾನಗಳನ್ನು ಅನುಸರಿಸಬೇಕು. ನಮ್ಮ ಆಲೋಚನೆಗಳನ್ನು ವ್ಯವಸ್ಥಿತಗೊಳಿಸಬೇಕು ಮತ್ತು ನಮ್ಮ ವ್ಯಷ್ಟಿ ಮನಸ್ಸು ಅದರ ಮೇಲಿರುವ ಹೊರೆಯಿಂದ ಬಿಡುಗಡೆ ಹೊಂದಬೇಕು. ನಾವು ಹತ್ತಿಯಂತೆ ಹಗುರವಾಗಿ, ಸಮರ್ಥ ಗುರುವಿನ ಒಂದೇ ಒಂದು ತಳ್ಳುವಿಕೆಯಿಂದ ಪರಮಾತ್ಮನ ಕಡೆಗಿನ ನಮ್ಮ ಉಡ್ಡಯನ ಪ್ರಾರಂಭಗೊಳ್ಳುವಂತಾಗಬೇಕು. ನಮ್ಮ ಸಂಸ್ಥೆಯಲ್ಲಿ ಸಂಕಲ್ಪದ ಮೊದಲು ಅಘಾತದಲ್ಲಿಯೇ 'ಸತ್ಯ'ವು ಅಭ್ಯಾಸಿಯೊಳಗೆ ಎರೆಯಲ್ಪಡುತ್ತದೆ, ಅದುವೇ, ಕಾಲಕ್ರಮದಲ್ಲಿ ಬೀಜದಂತೆ ಕೆಲಸ ಮಾಡುತ್ತದೆ. ಆ ಬೀಜವು ಸುಲಭವಾಗಿ ಬೆಳೆಯುವಂತೆ ಮತ್ತು ಉರಿಯುವ ಗಾಳಿಯು ಅದನ್ನು ಸುಟ್ಟು ಹಾಕದಿರುವಂತೆ, ಗುರುವು ಸಾಮಾನ್ಯವಾಗಿ ಕಾರ್ಯ–ವಿಧಾನವನ್ನು (ಪ್ರಕ್ರಿಯೆಯನ್ನು) ಪ್ರಾರಂಭಿಸುತ್ತಾನೆ. ಶಿಷ್ಯನು 'ನಿರಂತರ ಸ್ಮರಣೆ'ಯಿಂದ ಅದಕ್ಕೆ ನೀರೆರೆಯುತ್ತಾನೆ. ಸಾಕ್ಷಾತ್ಕಾರದ ಪಥದಲ್ಲಿ ಅಗತ್ಯವಾದುದು ಅದೊಂದೇ.

ಗೃಹಸ್ಥಾಶ್ರಮವು ಜೀವನದ ನಿಜವಾದ ಧ್ಯೇಯವನ್ನು ಪಡೆಯಲು ಬಾಧಕವಲ್ಲ. ಉನ್ನತ ಮಟ್ಟವು ಸುಲಭ ಸಾಧ್ಯವಾಗಲು ಇದೇ ಅತ್ಯುತ್ತಮ ಆಶ್ರಮವೆಂದು ನನಗೆ ತೋರುತ್ತದೆ. ನಾನು ಒಬ್ಬ ಗೃಹಸ್ಥ, ನನ್ನ ಗುರುಗಳೂ ಗೃಹಸ್ಥರಾಗಿದ್ದರು. ಪರಿಪೂರ್ಣಯೋಗಿಯು ಈ ಆಶ್ರಮದಲ್ಲಿ ಮಾತ್ರವೇ ಕಾಣಸಿಗಬಹುದೆಂದು ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ. ನಾವು ನಮ್ಮ ಕರ್ತವ್ಯಗಳನ್ನು ಪಾಲಿಸುತ್ತೇವೆ ಮತ್ತು 'ಅವನನ್ನು' ಅಂತಿಮ ಸತ್ಯವೆಂದು ಸ್ಮರಿಸುತ್ತೇವೆ.

# ಅಧ್ಯಾಯ - ೫

# ಸಾಕ್ಷಾತ್ಕಾರಕ್ಕೆ ಮಾರ್ಗ (ಅಭ್ಯಾಸಿಯ ಪಾತ್ರ)

## ವೈರಾಗ್ಯ (ವಿರಕ್ತಿ)

ನಾವು ವೈರಾಗ್ಯವನ್ನು ರೂಢಿಸಿಕೊಂಡ ಹೊರತು ಮಾಯೆಯಿಂದ ಎಂದಿಗೂ ಬಿಡುಗಡೆ ಹೊಂದಲು ಸಾಧ್ಯವಿಲ್ಲವೆಂಬುದು ನಿಜ. ಆದರೆ ಮನೆ, ಕುಟುಂಬ ಮತ್ತು ಪ್ರಾಪಂಚಿಕ ಬಾಧ್ಯತೆಗಳನ್ನು ಕಡಿದುಕೊಂಡು ಧಾರ್ಮಿಕ ಸನ್ಯಾಸಿಯಾಗಬೇಕೆಂದು ಅದರ ಅರ್ಥವಲ್ಲ. ಮನೆಯಿಂದ, ಮತ್ತು ಸಂಸಾರದಿಂದ ದೂರವಾಗಿ, ಎಲ್ಲ ಪ್ರಾಪಂಚಿಕ ಸಂಬಂಧಗಳನ್ನು ತ್ಯಜಿಸಿ ಒಂದು ನಿರ್ಜನ ಮೂಲೆಗೆ ಹೋಗಿ ಸೇರಿಕೊಳ್ಳುವುದು ವೈರಾಗ್ಯವನ್ನು ರೂಢಿಸಿಕೊಳ್ಳುವ ಏಕ ಮಾತ್ರ ಉಪಾಯವೆಂಬ ಅಭಿಪ್ರಾಯ ಹೊಂದಿದವರೊಡನೆ ನಾನು ಸಹಮತನಾಗುವುದಿಲ್ಲ. ಅಂಥ ಒತ್ತಾಯದ ಸಾಧನಗಳಿಂದ, ಪರಿಣಾಮದಿಂದ ಬಂದ ವೈರಾಗ್ಯವು ನೈಜವಾಗಿರುವುದು ಇಲ್ಲವೆನ್ನುವಷ್ಟು ಅಪರೂಪವೇ ಸರಿ. ಯಾಕೆಂದರೆ, ಸಂಸಾರದಿಂದ (ಪ್ರಪಂಚದಿಂದ), ಬಲಾತ್ಕಾರ ಪೂರ್ವಕ ಅವರು ಸಂಬಂಧ ಕಡಿದುಕೊಂಡಂತೆ ಕಂಡರೂ, ಆಂತರಿಕವಾಗಿ ಅವರು ಅದಕ್ಕೆ ಇನ್ನೂ ಅಂಟಿಕೊಂಡಿರುವುದು ಸಾಧ್ಯ. ಗೃಹಸ್ಥರಾಗಿ ನಾವು ಅನೇಕ ಸಂಗತಿಗಳ ಕಾಳಜಿ ತೆಗೆದುಕೊಳ್ಳಬೇಕೆಂಬುದರಲ್ಲಿ ಸಂದೇಹವಿಲ್ಲ. ನಾವು ನಮ್ಮ ಸಂಸಾರಕ್ಕೆ ಆಶ್ರಯವೊದಗಿಸಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿ ಕೊಡಬೇಕು; ಅವರ ಆವಶ್ಯಕತೆಗಳನ್ನು, ಬೇಡಿಕೆಗಳನ್ನು ನೋಡಿಕೊಳ್ಳಬೇಕು, ಅವರನ್ನು ಶೀತೋಷ್ಣಗಳಿಂದ ರಕ್ಷಿಸಬೇಕು, ಇತ್ಯಾದಿ. ಈ ಆವಶ್ಯಕತೆಗಳ ಸಲುವಾಗಿ ನಾವು ಹಣ, ಆಸ್ತಿಗಳನ್ನು ಗಳಿಸಿಡುತ್ತೇವೆ. ನಮಗೆ ಸಂಬಂಧಿಸಿದ ವಸ್ತುಗಳ ಜೊತೆಗೆ ಅನುಚಿತ ಆಸಕ್ತಿ ಹೊಂದಿರುವುದು ನಿಜವಾದ ಕೇಡು. ಇದೇ ನಮ್ಮ ದುಃಖಗಳಿಗೆ ಮುಖ್ಯ ಕಾರಣ. ಆದರೆ, ಯಾವುದೇ ಆಕರ್ಷಣೆ-ವಿಕರ್ಷಣೆಗಳ ಭಾವನೆಯಿಲ್ಲದೆ, ಜೀವನದ ಎಲ್ಲ ಕೆಲಸಗಳನ್ನು ಕರ್ತವ್ಯವೆಂದು ಭಾವಿಸಿ ನಾವು ಮಾಡಲು ಶಕ್ತರಾದೆವೆಂದಾದರೆ ನಾವು ಅನೇಕ ವಸ್ತುಗಳನ್ನು ಹೊಂದಿ, ಅವುಗಳನ್ನುಪಯೋಗಿಸುತ್ತಿದ್ದರೂ, ಒಂದು ಅರ್ಥದಲ್ಲಿ, ನಾವು ಪ್ರಾಪಂಚಿಕ ಬಂಧನಗಳಿಂದ ಮುಕ್ತರಾಗಿದ್ದಂತೆಯೇ; ಮತ್ತು ನಿಜವಾದ ಅರ್ಥದಲ್ಲಿ ಪ್ರಪಂಚವನ್ನು

ತ್ಯಜಿಸಿದಂತಾಯಿತು. ಆಗ, ನಮ್ಮಲ್ಲಿರುವುದೆಲ್ಲ ಸರ್ವೇಶನಿಂದ (ಗುರುವಿನಿಂದ) ನಮಗೆ ವಹಿಸಲ್ಪಟ್ಟ ಕರ್ತವ್ಯವನ್ನು ನೆರವೇರಿಸಲು ನಮ್ಮಲ್ಲಿ ಇರಿಸಲ್ಪಟ್ಟ ಪವಿತ್ರ 'ನ್ಯಾಸ' ಎಂಬಂತೆ ತೋರಿ ಬರುತ್ತದೆ. ವೈರಾಗ್ಯದ ನಿಜವಾದ ಅರ್ಥ ಪ್ರಾಪಂಚಿಕ ವಸ್ತುಗಳ ಬಗ್ಗೆ ಮೋಹವಿಲ್ಲದಿರುವುದೇ ಹೊರತು ಅವುಗಳನ್ನು ಹೊಂದದಿರುವುದಲ್ಲ. ಹೀಗೆ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಮತ್ತು ಪ್ರಾಪಂಚಿಕ ಸಂಬಂಧಗಳು ಅನಿವಾರ್ಯವಾಗಿರುವ ಗೃಹಸ್ಥಾಶ್ರಮವು ವೈರಾಗ್ಯಕ್ಕೆ ಮತ್ತು ತನ್ಮೂಲಕ ಸಾಕ್ಷಾತ್ಕಾರಕ್ಕೆ ಬಾಧಕವಾಗುವುದಿಲ್ಲ. ಆದರೆ ನಮಗೆ ಸಂಬಂಧಪಟ್ಟ ವಸ್ತುಗಳಿಗೆ ಅನುಚಿತವಾಗಿ ಅಂಟಿಕೊಂಡಿರಬಾರದು. ಉದ್ದಕ್ಕೂ ಗೃಹಸ್ಥ ಜೀವನ ನಡೆಸುತ್ತ ಅತ್ಯುನ್ನತ ಮಟ್ಟದ ಪರಿಪೂರ್ಣತೆಯನ್ನು ಪಡೆದ ಅನೇಕ ಸಂತರ ಉದಾಹರಣೆಗಳಿವೆ. ನಿಜಕ್ಕೂ ವೈರಾಗ್ಯವೆಂದರೆ, ವಸ್ತುಗಳ ಕ್ಷಣಿಕತೆಯನ್ನು ಮತ್ತು ಪರಿವರ್ತನಶೀಲತೆಯನ್ನು ಮನಗಾಣಿಸಿ, ಅಂಥವುಗಳೊಡನೆ ನಿರ್ಲಿಪ್ತತೆಯ ಭಾವವನ್ನು ಉಂಟು ಮಾಡುವ ಒಂದು ಆಂತರಿಕ ಮನಃಸ್ಥಿತಿ. ಆತನ ದೃಷ್ಟಿಯು, ಅಪರಿವರ್ತನೀಯ, ಶಾಶ್ವತ ಸತ್ಯದ ಮೇಲೆ ಪ್ರತಿಕ್ಷಣವೂ ನೆಟ್ಟಿದ್ದು, ಅವನು ಮೋಹ–ಜಿಗುಪ್ಸೆಗಳ ಭಾವನೆಯಿಂದ ಮುಕ್ತನಿರುತ್ತಾನೆ. ಇದೇ 'ವೈರಾಗ್ಯ' ಎಂಬ ಪದದ ನಿಜವಾದ ಅರ್ಥ. ಈ ಮಾನಸಿಕ ಸ್ಥಿತಿಯನ್ನು ಪಡೆದಾಗ ನಾವು ಇಚ್ಛೆಗಳಿಂದ (ಬಯಕೆಗಳಿಂದ) ಬಿಡುಗಡೆ ಹೊಂದಿರುತ್ತೇವೆ. ನಮಗೆ ಲಭ್ಯವಾದುದಷ್ಟರಲ್ಲಿಯೇ ತೃಪ್ತಿ ಪಡುತ್ತೇವೆ. ಇಚ್ಛಾ ಸಮಾಪ್ತಿಯೇ ಸಂಸ್ಕಾರಗಳುಂಟಾಗುವುದನ್ನು ನಿಲ್ಲಿಸುವುದು. ನಮ್ಮ ಜೀವಿತ ಕಾಲದಲ್ಲಿ ಕ್ಷಯಿಸಿ ಹೋಗಬೇಕಿದ್ದ ನಮ್ಮ ಹಿಂದಿನ ಸಂಸ್ಕಾರಗಳ ಭೋಗವು ಮಾತ್ರ ಉಳಿದಿರುತ್ತದೆ. ನಮ್ಮ ವಿಚಾರ ಮತ್ತು ಕ್ರಿಯೆಗಳಿಂದುಂಟಾದ ಸಂಸ್ಕಾರಗಳನ್ನು ನಮ್ಮ ಕಾರಣ ಶರೀರದಿಂದ ತೆಗೆದು ಹಾಕುವ ಸಲುವಾಗಿ ಬೇಕಾದ ಭೋಗಕ್ಕೆ ಕ್ಷೇತ್ರವನ್ನು ನಿರ್ಮಿಸಿ ಕೊಡುವ ಕಾರ್ಯದಲ್ಲಿ ಪ್ರಕೃತಿಯೂ ನಮಗೆ ಸಹಾಯ ಮಾಡುತ್ತದೆ. ಆ ಆವರಣಗಳು ಕರಗಿ ಹೋದ ಮೇಲೆ ನಾವು ಅಸ್ತಿತ್ವದ ಸೂಕ್ಷ್ಮ ರೂಪಗಳನ್ನು ಹೊಂದಲಾರಂಭಿಸುತ್ತೇವೆ.

ಈ ಪ್ರಪಂಚದಲ್ಲಿ ಹುಟ್ಟಿ ಬಂದ ಮನುಷ್ಯನು ದುಃಖಗಳನ್ನು ಅನುಭವಿಸುವುದು ಖಂಡಿತ. ಅದನ್ನು ಯಾರೂ ತಪ್ಪಿಸಿಕೊಳ್ಳಲಾರರು. ಪ್ರಪಂಚವನ್ನು ನೋಡಿದರೆ, ಅದು, ತುಂಬ ಕಷ್ಟಕರವೆಂಬುದು ನನಗೆ ಕಂಡು ಬರುತ್ತದೆ. ಕೆಲವರು ನೋವಿನಿಂದ ನರಳುತ್ತಿದ್ದಾರೆ. ಕೆಲವರು ತಮ್ಮ ಪ್ರಿಯರ ವಿಯೋಗದಿಂದ ದುಃಖ ಪಡುತ್ತಿದ್ದಾರೆ. ಮತ್ತು ಬಹಳಷ್ಟು ಜನರು ಹೆಜ್ಜೆ ಹೆಜ್ಜೆಗೂ ಯಶಸ್ಸು ಗಳಿಸಲು ಕಾತರರಾಗಿದ್ದಾರೆ. ನಾವು ತಪಸ್ಸನ್ನಾಚರಿಸಿ ಇವುಗಳಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತೇವೆ. ಋಷಿಗಳು ಪೂರ್ಣವಾಗಿ ಅದಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಮೋಹದಿಂದ ಹುಟ್ಟಿದುದೆಲ್ಲವೂ ದುಃಖವೇ. ನೋವು ನಲಿವುಗಳೆರಡೂ ದುಃಖಕ್ಕೆ ಕಾರಣಗಳೇ. ಅತ್ಯಂತ ಶುದ್ಧ ರೂಪದ ದೈವೀ ವಿಚಾರಗಳಿಗೆ ನಮ್ಮನ್ನು ಅರ್ಪಿಸಿಕೊಳ್ಳುವುದರ ಹೊರತು ಈ ಕಷ್ಟಗಳಿಂದ ಪಾರಾಗುವ ಬೇರೆ ಉಪಾಯವಿಲ್ಲ.

ನಾವು ಪ್ರಪಂಚವನ್ನು ತ್ಯಜಿಸಿ ಕಾಡಿಗೆ ಹೋಗುವ ಅಗತ್ಯವಿಲ್ಲ. ಭೌತಿಕ ಪ್ರಪಂಚ ಮತ್ತು ಆಧ್ಯಾತ್ಮಿಕ ಪ್ರಪಂಚಗಳು ಜತೆ ಜತೆಯಾಗಿ, ಸರಿ ಸಮಾನವಾಗಿ ಬೆಳಗುತ್ತ ನಡೆಯಲಿ. ತನ್ನ ಗೃಹಸ್ಥ ಕರ್ತವ್ಯಗಳನ್ನು ನೆರವೇರಿಸುತ್ತ, ಪರಮಾತ್ಮನ ಸಾಕ್ಷಾತ್ಕಾರದ ಮಟ್ಟದವರೆಗೂ ಏರಿದರೆ, ಮನುಷ್ಯನು ಯಾವ ರೀತಿಯಿಂದಲೂ ನಷ್ಟ ಹೊಂದಿದಂತಾಗುವುದಿಲ್ಲ. ನಾವು ಯಶಸ್ಸು ಪಡೆಯಬಯಸುವುದಾದರೆ ಎರಡೂ ರೆಕ್ಕೆಗಳಿಂದ ಹಾರಬೇಕು. ದೇವರನ್ನು ಅರಣ್ಯದಲ್ಲಿ ಹುಡುಕಬೇಕೆಂಬುದು ಜನರಲ್ಲಿ ಸಾಮಾನ್ಯವಾಗಿ ಇರುವ ಅಸ್ಪಷ್ಟ ಭಾವನೆ. ಹೃದಯದಲ್ಲಿ ಅವನನ್ನು ಹುಡುಕಬೇಕೆಂಬುದು ನನ್ನ ಅಭಿಪ್ರಾಯ. ಗೃಹಸ್ಥ ಕರ್ತವ್ಯಗಳನ್ನು ನೆರವೇರಿಸುತ್ತಲೇ, ಅದೇ ಸಮಯದಲ್ಲಿ ಮನುಷ್ಯನು ದೈವಭಕ್ತಿ ನಿರತನಾಗಿರುತ್ತಾನೆ. ಇವೆರಡೂ ಒಂದಕ್ಕೊಂದು ಹೊಂದಿಕೆಯಿಲ್ಲದವೆಂದೂ, ಪರಸ್ಪರ ವಿರುದ್ಧವಾದವುಗಳೆಂದೂ ನೀವು ಹೇಳಬಹುದು, ಆದರೆ ಅದು ಹಾಗಿಲ್ಲ. ಕಾಲ ಕಳೆದಂತೆಲ್ಲ, ದೈವೀ ಪ್ರಜ್ಞೆಯು ಕೆಲಸ ಮಾಡಲಾರಂಭಿಸಿ, ಮನುಷ್ಯನು ಮನಸ್ಸಿಗೆ ಅತೀತನಾಗಿ ನಿಂತು, ಕರ್ತವ್ಯಗಳನ್ನು ಮಾಡುತ್ತಾನೆ.

ಹೀಗೆ ಮಾನವನು ಸಂಪೂರ್ಣವಾಗಿ ದೇವರ ಕಡೆಗೆ ತಿರುಗಿದಾಗ ಮಾತ್ರ ವೈರಾಗ್ಯ ಸಿದ್ಧಿಸಲು ಸಾಧ್ಯ. ಹಾಗೆ ಆದಾಗ, ಮನುಷ್ಯನು ಸ್ವಾಭಾವಿಕವಾಗಿ ತನ್ನ ಸ್ವಂತದಲ್ಲಿಯೂ, ಅದಕ್ಕೆ ಸಂಬಂಧಿಸಿದ ಎಲ್ಲವುಗಳಲ್ಲಿಯೂ ವಿರಕ್ತನಾಗುತ್ತಾನೆ. ಹೀಗೆ, ಆತನು ದೇಹಪ್ರಜ್ಞೆಯನ್ನು ಮಾತ್ರವಲ್ಲದೆ, ಅನಂತರ, ತನ್ನ ಆತ್ಮಪ್ರಜ್ಞೆಯನ್ನೂ ಕಳೆದುಕೊಳ್ಳುತ್ತಾನೆ. ಆಗ ಉಳಿಯುವುದು 'ನಿಷ್ಕ್ರಿಯಾವಸ್ಥೆ' ಅಥವಾ 'ಸಜೀವ ನಿಷ್ಕ್ರಿಯಾವಸ್ಥೆ'ಯಲ್ಲದೆ ಬೇರೇನೂ ಅಲ್ಲ.

## ಧ್ಯಾನ

ಸಹಜಮಾರ್ಗ ಶಿಕ್ಷಣ ಪದ್ಧತಿಯಲ್ಲಿ ಪಾತಂಜಲ ಯೋಗದ ಏಳನೆಯ ಮೆಟ್ಟಲಾದ ಧ್ಯಾನದಿಂದ ಪ್ರಾರಂಭಿಸುತ್ತೇವೆ. ಧ್ಯಾನದ ಅಭ್ಯಾಸದ ಸಲುವಾಗಿ ಒಂದು ಬಿಂದುವಿನ ಮೇಲೆ ಮನಸ್ಸನ್ನು ಸ್ಥಿರಗೊಳಿಸುತ್ತೇವೆ. ಹಿಂದಿನ ಮೆಟ್ಟಲುಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವುದಿಲ್ಲ, ಆದರೆ ನಾವು ಧ್ಯಾನದಲ್ಲಿ ಮುಂದುವರಿದಂತೆಲ್ಲ ಅವು ಸ್ವಾಭಾವಿಕವಾಗಿಯೇ(ತಾವಾಗಿಯೇ) ಮೈಗೂಡಿ ಬರುತ್ತವೆ. ಹೀಗೆ ನಮ್ಮ ಸಮಯ ಮತ್ತು ಶ್ರಮದ ಬಹುಭಾಗ ಉಳಿತಾಯವಾಗುತ್ತದೆ. ಕೆಲವೊಂದು ಸಂಸ್ಥೆಗಳಲ್ಲಿ ಅಭ್ಯಾಸದ ನಿತ್ಯ ಕ್ರಮವನ್ನು ಗೌಪ್ಯವಾಗಿಡಲಾಗುತ್ತದೆ. ಅವುಗಳನ್ನು ವಿಧಿಪೂರ್ವಕ ಸೇರಲು ತಯಾರಾಗಿರುವವರಿಗೆ ಮಾತ್ರವೇ ಅದನ್ನು ಬಹಿರಂಗಪಡಿಸಲಾಗುತ್ತದೆ. ಇದರಡಿಯಲ್ಲಿರುವ ಉದ್ದೇಶವೇನೆಂಬುದು ಅರ್ಥವಾಗುವುದಿಲ್ಲ. ಪ್ರಕೃತಿಯಲ್ಲಿ ಯಾವ ರಹಸ್ಯಗಳೂ ಇಲ್ಲ; ಮತ್ತು ದೈವೀ ಮಾರ್ಗವನ್ನು ಅನುಸರಿಸುತ್ತೇವೆಂದು ಹೇಳಿಕೊಳ್ಳುವವನಿಗೂ ಅಂಥದೊಂದು ಇರಕೂಡದೆಂಬುದು ನನ್ನ ಅಭಿಪ್ರಾಯ.

ನಮ್ಮ ಮಿಷನ್ನಿನಲ್ಲಿ ಅನುಸರಿಸಲಾಗುವ ಅಭ್ಯಾಸವೆಂದರೆ ಹೃದಯದ ಮೇಲೆ ಧ್ಯಾನ. ಅದೇ ವಿಧಾನವು ಪತಂಜಲಿಯಿಂದಲೂ ನಿರೂಪಿಸಲ್ಪಟ್ಟಿದೆ. ಅದರ ಹಿಂದೆ ಒಂದು ದೊಡ್ಡ ತತ್ವ ಅಡಗಿದೆ. ನಾವು ಸದಾಕಾಲ ಪ್ರಾಪಂಚಿಕ ವಿಷಯಗಳಲ್ಲಿ ನಿರತರಾಗಿರುತ್ತೇವೆ. ನಾವು ಏನನ್ನೂ ಮಾಡದಿರುತ್ತಿದ್ದರೆ, ನಮ್ಮ ವಿಚಾರಗಳಿಗೆ ರೆಕ್ಕೆ ಬಂದಿರುವಂತೆ ತೋರುತ್ತದೆ. ಯಾವಾಗಲೂ ನಾವು ತಳಮಳ ಮತ್ತು ಅವ್ಯವಸ್ಥೆಯಲ್ಲಿ ಇರುತ್ತೇವೆ. ನಮ್ಮ ವ್ಯಷ್ಟಿ ಮನಸ್ಸು ಅಂಥ ಚಟುವಟಿಕೆಗಳಿಗೆ ಒಗ್ಗಿಕೊಂಡು ಬಿಟ್ಟಿದೆ. ಹೀಗೆ ನಾವು ಎಲ್ಲವನ್ನೂ ತಲೆ ಕೆಳಗು ಮಾಡಿದ್ದೇವೆ. ನಾವು ಮಾಡುವ ತಪ್ಪು ಕೆಲಸಗಳಲ್ಲಿ ನಮ್ಮ ಕ್ರಿಯೆಗಳೂ ವಿಚಾರಗಳೂ ಮಹತ್ವದ ಪಾತ್ರ ವಹಿಸುತ್ತವೆ. ನಾವು ವಿಧವಿಧವಾದ ವಿಚಾರ ಮತ್ತು ಕಲ್ಪನೆಗಳ ಸಂಪರ್ಕದಲ್ಲಿ ಇರುವಾಗ ನಮ್ಮ ಭಾವನಾತ್ಮಕ ಸಂವೇದನೆಗಳ (ಅನಿಸಿಕೆಗಳ) ಮತ್ತು ಇಂದ್ರಿಯಗಳ ಮೇಲೆ ಅವು ಸಂಸ್ಕಾರವನ್ನು ಉಂಟು ಮಾಡುತ್ತವೆ. ನಮ್ಮ ಇಂದ್ರಿಯಗಳು ಕೆಟ್ಟು ಹೋಗಿ, ತಪ್ಪು ದಾರಿ ಹಿಡಿಯುತ್ತವೆ. ಹೀಗೆ ನಾವು ನಮ್ಮ ಇಂದ್ರಿಯಗಳ ಮೇಲೆ ಮಾಡುವ ಗುರುತುಗಳು, ಅವುಗಳನ್ನು ಬೋಧ ಅಥವಾ ವಿವೇಕವೇ ಇಲ್ಲದ ಬಂಡೆಯಂತೆ ಜಡಗೊಳಿಸಿ ಬಿಡುತ್ತವೆ. ಆತ್ಮದ ಮೇಲೆ ಯಾವ ಕ್ರಿಯೆಯೂ ವರ್ತಿಸುವುದಿಲ್ಲ (ಪ್ರಭಾವಿಸುವುದಿಲ್ಲ) ಎಂಬುದು ನಿಃಸಂದೇಹ. ಆದರೆ, ನಾವು ಎಂಥ ಅಡೆತಡೆಗಳನ್ನು ಮತ್ತು ಆವರಣಗಳನ್ನು ನಿರ್ಮಿಸುತ್ತೇವೆಂದರೆ, ಅವು ಆತ್ಮದ ಸುತ್ತಲೂ ರೇಷ್ಮೆಗೂಡಿನಂತೆ ಸುತ್ತುಗಟ್ಟಿ ಮುಚ್ಚಿ ಹಾಕಿಬಿಡುತ್ತವೆ. ಸಾಕ್ಷಾತ್ಕರಿಸಿಕೊಳ್ಳುವುದು ಹಾಗಿರಲಿ, ಆತ್ಮವನ್ನು ನಾವು ಇಣುಕಿ ನೋಡುವುದೂ ಸಾಧ್ಯವಿಲ್ಲ. ವಿಷಪೂರಿತ ವಿಚಾರಗಳಿಂದ ಮತ್ತು ಕ್ರಿಯೆಗಳ ಪರಿಣಾಮವಾಗಿ ನಾವು ನಮ್ಮ ವಿವೇಕ ಶಕ್ತಿಯನ್ನೂ, ಯಥಾರ್ಥ ಗ್ರಹಣ ಶಕ್ತಿಯನ್ನೂ ಕೆಡಿಸಿಕೊಳ್ಳುತ್ತೇವೆ. ಇಷ್ಟು ಸ್ಥೂಲದೆಶೆಗೆ ಮುಟ್ಟಿದವರು ರಾಜಯೋಗ ಶಿಕ್ಷಣ ಕ್ರಮದ ಅಡಿಯಲ್ಲಿ ಬರಲು ಒಪ್ಪುವುದಿಲ್ಲ. ನಾವು ಹೇಳುವುದರ ಕಡೆಗೆ ಜನರು ಕಿವುಡಾಗಿರುವುದು (ಗಮನ ಕೊಡದಿರಲು) ಇದೇ ಕಾರಣ. ಹಠಯೋಗದ ರೀತ್ಯಾ ಅದೆಷ್ಟೇ ಅಭ್ಯಾಸ(ಸಾಧನೆ) ಮಾಡಿದರೂ, ಅದು ನಿಜವಾದ ಸಾಕ್ಷಾತ್ಕಾರ ಸ್ಥಿತಿಯನ್ನು ತರಲಾರದು; ಯಾಕೆಂದರೆ ಆಜ್ಞಾ ಚಕ್ರದ ನಂತರ ಅದು ವಿಫಲವಾಗುತ್ತದೆ. ಅದರ ನಂತರ ಹಾದು ಹೋಗಬೇಕಾದ ಅನೇಕ ಸ್ಥಿತಿಗಳು ಇನ್ನೂ ಉಳಿದು ಬಿಡುತ್ತವೆ. ಆದುದರಿಂದ, ಕೊನೆಯವರೆಗೂ ನಮ್ಮನ್ನು ಕೊಂಡೊಯ್ಯಬಲ್ಲುದಾದದ್ದು ರಾಜಯೋಗವೊಂದೇ. ಕೇಂದ್ರವನ್ನು ತಲುಪಲು ಬೇರೆ ಉಪಾಯವಿಲ್ಲ. ನಮ್ಮ ತಪ್ಪು ಕೆಲಸಗಳಿಂದ ವಿರೂಪಗೊಂಡಿದ್ದಾದರೂ, ಅದೇ ಕೇಂದ್ರದ ಶಕ್ತಿ ನಮ್ಮೊಳಗಿದೆ. ನಾವು ಧ್ಯಾನದಲ್ಲಿ ಅದೇ ಶಕ್ತಿಯಿಂದ ಕೆಲಸ ತೆಗೆದುಕೊಳ್ಳುತ್ತೇವೆ. ಹಾಗೆನ್ನುವುದಾದರೆ, ಪ್ರಕೃತಿಯ ಶಕ್ತಿಯಿಂದಲೇ ಸಹಜವಾಗಿ ಮುಂದುವರಿಯುವ ರೀತಿ ಇದೇ. ನಾವು ಧ್ಯಾನ ಮಾಡುವಾಗ ನಮ್ಮಲ್ಲಿರುವ ಕೇಂದ್ರಶಕ್ತಿ ಕಾರ್ಯನಿರತವಾಗಿರುತ್ತದೆ. ಅದರ ಶಕ್ತಿಯಿಂದ ಬಡಿದೆಬ್ಬಿಸಲ್ಪಟ್ಟ,

ತಡೆಯಲಸಾಧ್ಯವಾದ ಮೋಡಗಳನ್ನು ಅದು ಚದುರಿಸಿ ದೂರ ಮಾಡುತ್ತದೆ. ಅದನ್ನು ಮಾತಿನಲ್ಲಿ ಹೇಳುವುದು ಸಾಧ್ಯವಿಲ್ಲ; ಅಭ್ಯಾಸಿ ಮಾತ್ರ ಅದನ್ನು ಅನುಭವಿಸಬಲ್ಲನು. ಇದನ್ನು ಪ್ರಾಯೋಗಿಕವಾಗಿ ಮಾತ್ರ ಅರಿಯಬಹುದು. ಶಾಶ್ವತ ಶಾಂತಿ, ಸಂತೋಷಗಳಲ್ಲಿ ನೀವು ಈಜಾಡುತ್ತಿರುವುದನ್ನು ಕ್ಷಿಪ್ರದಲ್ಲಿಯೇ ಕಂಡುಕೊಳ್ಳುವಿರಿ. ಎಲ್ಲವೂ ಇಲ್ಲಿ ಕೊನೆಗೊಳ್ಳುವುದು. ಪ್ರಪಂಚದೊಡನೆ ಯಾವ ಮೋಹವೂ ಉಳಿಯುವದಿಲ್ಲ. ಮನಸ್ಸು ಸುಶಿಕ್ಷಿತವಾಗಿ, ತನ್ನಿಂದ ತಾನೇ ನಿಯಂತ್ರಣಗೊಳ್ಳುತ್ತದೆ. ಇಂದ್ರಿಯಗಳು ನಿಮ್ಮ ಹತೋಟಿಯಲ್ಲಿ ಬರಲು ಪ್ರಾರಂಭಿಸಿ, ನೀವು ಅವುಗಳ ಮೇಲೆ ಸಂಪೂರ್ಣ ಸ್ವಾಮ್ಯವನ್ನು ಪಡೆಯುವಿರಿ. ನಿಮ್ಮ ಮೇಲೆ ನೀವು ಪ್ರಭುತ್ವ ಹೊಂದುವುದೆಂದರೆ ಪ್ರಕೃತಿಯ ಮೇಲೆ ಪ್ರಭುತ್ವ ಹೊಂದುವುದು. ದಾರಿಯು ಸುಗಮವಾದಾಗ, ನೀವು ಸ್ವತಃ ಕೆಲಸ ಮಾಡುವುದಕ್ಕಿಂತ ಹೆಚ್ಚಾಗಿ ನಿಮ್ಮ ಪರಿಮಿತಿಯ ಸೀಮೆಯಲ್ಲಿ ಪ್ರಕೃತಿಯೇ ಕೆಲಸ ಮಾಡುವುದನ್ನು ಕಂಡುಕೊಳ್ಳುವಿರಿ.

ನಮ್ಮ ಪದ್ಧತಿಯಲ್ಲಿ ದೈವೀ ಪ್ರಕಾಶವು ಹೃದಯದಲ್ಲಿರುವುದೆಂದು ಭಾವಿಸಿ ಧ್ಯಾನ ಮಾಡುವಂತೆ ಅಭ್ಯಾಸಿಗೆ ಸಲಹೆ ನೀಡಲಾಗುತ್ತದೆ. ಆದರೆ, ಪ್ರಕಾಶವನ್ನು ವಿದ್ಯುತ್ ಬಲ್ಬಿನ ಅಥವಾ ಮೇಣಬತ್ತಿಯ ದೀಪದ ಅಥವಾ ಇನ್ನಾವುದೋ ರೂಪ ಅಥವಾ ಆಕಾರದಲ್ಲಿ ಕಲ್ಪಿಸಕೂಡದೆಂದು ನಿರ್ದೇಶಿಸಲಾಗುತ್ತದೆ. ಹಾಗಿದ್ದ ಪಕ್ಷದಲ್ಲಿ, ಅಲ್ಲಿ ತೋರಿ ಬರುವಂತಿರುವ ಪ್ರಕಾಶವು ನಿಜವಾದುದಾಗಿರದೆ, ಅವನ ಸೃಜನಾತ್ಮಕ ಊಹೆಯಿಂದ ಪ್ರಕ್ಷಿಪ್ತವಾದುದಾಗಿರುತ್ತದೆ. ಅಭ್ಯಾಸಿಯು ದೈವಿಕತೆಯ ವಿಚಾರವನ್ನು ಮೂಲವಾಗಿಟ್ಟುಕೊಂಡು, ಪ್ರಕಾಶದ ಭಾವಮಾತ್ರದೊಂದಿಗೆ ಮುಂದುವರಿಯಬೇಕೆಂದು ಸಲಹೆ ಮಾಡಲಾಗುತ್ತದೆ. ಆಗ ಏನಾಗುತ್ತದೆಯೆಂದರೆ, ನಾವು ಪಡೆಯಬೇಕಾಗಿರುವ ಸೂಕ್ಷ್ಮತಮ ವಸ್ತುವಿನ ಮೇಲೆ ನಾವು ಧ್ಯಾನಿಸಿದಂತಾಗುತ್ತದೆ.

ಹೃದಯದ ಮೇಲೆ ಧ್ಯಾನ ಮಾಡುವ ವಿಧಾನವೆಂದರೆ ನಮ್ಮೊಳಗೆ ದೈವೀ (ಈಶ್ವರೀಯ) ಪ್ರಕಾಶವಿರುವುದೆಂದು ಭಾವಿಸುವುದು. ಈ ರೀತಿಯಲ್ಲಿ ನೀವು ಧ್ಯಾನ ಮಾಡಲು ಪ್ರಾರಂಭಿಸಿದಾಗ, ಒಳಗಿನ ದೈವೀ ಪ್ರಕಾಶವು ನಿಮ್ಮನ್ನು ಆಕರ್ಷಿಸುತ್ತಿದೆ(ಸೆಳೆಯುತ್ತಿದೆ) ಎಂದು ಭಾವಿಸಿರಿ. ಧ್ಯಾನ ಸಮಯದಲ್ಲಿ ಬಾಹ್ಯ ವಿಚಾರಗಳು ಬಂದರೆ ಅವುಗಳನ್ನು ಲೆಕ್ಕಿಸಬೇಡಿರಿ. ಅವು ಬಂದರೆ ಬರಲಿ, ನಿಮ್ಮ ಕೆಲಸವನ್ನು ನೀವು ಮುಂದುವರಿಸಿರಿ. ನಿಮ್ಮ ವಿಚಾರಗಳು ಕರೆಯದೆ ಬಂದ ಅತಿಥಿಗಳು ಎಂಬಂತೆ ವರ್ತಿಸಿರಿ. ಆಗಲೂ ಅವು ನಿಮಗೆ ತೊಂದರೆ ಉಂಟು ಮಾಡಿದರೆ ಅವು ನಿಮ್ಮವಲ್ಲ, ನಿಮ್ಮ ಗುರುಗಳವು ಎಂದು ತಿಳಿಯಿರಿ. ಧ್ಯಾನದ ಈ ಕ್ರಮವು ಬಹಳೇ ಪರಿಣಾಮಕಾರಿ ಮತ್ತು ಇಚ್ಛಿತ ಫಲವನ್ನು ಕೊಡುವುದರಲ್ಲಿ ಎಂದಿಗೂ ಚ್ಯುತಿಯಾಗುವುದಿಲ್ಲ. ಬೆಳಿಗ್ಗೆ ಒಂದು ಗಂಟೆ ಕಾಲ, ಸ್ವಾಭಾವಿಕವಾದ ರೀತಿಯಲ್ಲಿ, ಸುಲಭವೆನಿಸಿದ ಆಸನದಲ್ಲಿ (ಭಂಗಿಯಲ್ಲಿ) ಕುಳಿತುಕೊಳ್ಳಿರಿ. ನೀವು

ಕೇವಲ ಧ್ಯಾನವನ್ನು ಮಾತ್ರ ಮಾಡಬೇಕು. ಧ್ಯಾನ ಮಾಡುವ ಸಮಯದಲ್ಲಿ ಸಾಮಾನ್ಯವಾಗಿ ಬರುವ ನಿಮ್ಮ ವಿಚಾರಗಳೊಡನೆ ಹೋರಾಡಬಾರದು. ಧ್ಯಾನದಿಂದ ಏಕಾಗ್ರತೆಯು ತಾನಾಗಿಯೇ ಬರುವುದು. ಧ್ಯಾನದ ಬದಲು ಏಕಾಗ್ರತೆಗೆ ಒತ್ತು ಕೊಟ್ಟು ಅದಕ್ಕೋಸ್ಕರ ಮನಸ್ಸನ್ನು ಬಲಾತ್ಕರಿಸುವವರು ಸಾಮಾನ್ಯವಾಗಿ ವಿಫಲರಾಗುತ್ತಾರೆ.

ಮತ್ತೆ, ಸಾಯಂಕಾಲ ಕನಿಷ್ಠ ಅರ್ಧ ಘಂಟೆ ಕಾಲ ಅದೇ ಭಂಗಿಯಲ್ಲಿ ಕುಳಿತುಕೊಂಡು, ನಿಮ್ಮ ಶರೀರ ಸಂಸ್ಥಾಯದಲ್ಲಿರುವ ಸ್ಥೂಲತೆ ಅಥವಾ ಜಡತೆಯೂ ಜಟಿಲತೆಗಳೂ, ನಿಮ್ಮ ಹಿಂದಿನ ವಿಚಾರಗಳ ಜಾಲವೂ ಕರಗಿ ಹೋಗುತ್ತಿವೆಯೆಂದು, ಹಿಂಭಾಗದಿಂದ ಹೊಗೆಯ ರೂಪದಲ್ಲಿ ಆವಿಯಾಗಿ ಹೋಗುತ್ತವೆ ಎಂದೂ ಯೋಚಿಸಿರಿ. ಅದರಿಂದ ನಿಮ್ಮ ಮನಸ್ಸು ಶುದ್ಧಗೊಂಡು, ನಮ್ಮ ಸಮರ್ಥ ಗುರುವಿನ ಪರಿಣಾಮಕಾರಿ ಪ್ರಭಾವವನ್ನು ಸ್ವೀಕರಿಸಲು ನಿಮ್ಮನ್ನು ಯೋಗ್ಯರನ್ನಾಗಿ ಮಾಡುತ್ತದೆ. ನೀವು ಪರಕೀಯ ವಸ್ತುವಿನಿಂದ ಬಿಡುಗಡೆ ಹೊಂದಿರುವಿರೆಂದು ನನಗೆ ಕಂಡು ಬಂದ ಕೂಡಲೆ, ನಾನು ಅದನ್ನು ಬೇರೆ ವಿಧದಲ್ಲಿ ಬದಲಾಯಿಸುತ್ತೇನೆ, ಅಥವಾ ನೀವು ಅದನ್ನು ನಿಲ್ಲಿಸುವಂತೆ ತಿಳಿಸುತ್ತೇನೆ. ಈ ರೀತಿಯಲ್ಲಿ, ಚಕ್ರಗಳನ್ನೂ ಅವುಗಳ ಉಪ ಬಿಂದುಗಳನ್ನೂ ಶುದ್ಧಗೊಳಿಸಿ ಮತ್ತು ಜಾಗೃತಗೊಳಿಸಿ ಬಹಳ ಮೇಲೇರುತ್ತೇವೆ; ಕುಂಡಲಿನಿಯನ್ನು ಕೊನೆಯಲ್ಲಿ ತೆಗೆದುಕೊಳ್ಳಲಾಗುವುದು; ಅದನ್ನು ಕುರಿತು ಅಭ್ಯಾಸಿಯು ಸ್ವತಃ ಏನನ್ನೂ ಮಾಡುವುದು ಬೇಕಾಗಿಲ್ಲ. ಅದು ಸಂಪೂರ್ಣವಾಗಿ ಗುರುವಿನ ಹೊಣೆ. ಆದರೆ ಈ ಅಭ್ಯಾಸ ಕ್ರಮಗಳನ್ನು ಅನುಸರಿಸುವಾಗ ಮನಸ್ಸನ್ನು (ಅಭ್ಯಾಸಿಯು) ಬಲಾತ್ಕರಿಸಬಾರದು ಮತ್ತು ಸಹಜ ಸಾಮಾನ್ಯ ಸ್ಥಿತಿಯಲ್ಲಿ ಕುಳಿತುಕೊಳ್ಳಬೇಕೆಂಬುದನ್ನು ನೆನಪಿನಲ್ಲಿಡತಕ್ಕದ್ದು. ಬೆಳಿಗ್ಗೆ ಧ್ಯಾನ ಮಾಡುವ ಪೂರ್ವದಲ್ಲಿಯೂ ಐದು ನಿಮಿಷಗಳ ಕಾಲ ಈ ವಿಧಾನವನ್ನು ಪುನರಾವರ್ತಿಸಬೇಕು. ಶುದ್ಧೀಕರಣದ ಬೇರೆ ವಿಧಾನಗಳನ್ನು ಪ್ರತ್ಯೇಕ ಅಭ್ಯಾಸಿಯ ಆವಶ್ಯಕತೆಗೆ ತಕ್ಕಂತೆ ಸಲಹೆ ಮಾಡಬಹುದು. ಅವುಗಳನ್ನು ಇಲ್ಲಿ ವಿವರವಾಗಿ ಹೇಳುವುದು ಬೇಕಿಲ್ಲ. ಈ ಶುದ್ಧೀಕರಣ ಪ್ರಕ್ರಿಯೆಯಲ್ಲಿ, ವ್ಯಷ್ಟಿಗತ ಜೀವಾತ್ಮವನ್ನು, ಸಾರೂಪ್ಯತೆಯ ಅತಿ ಸೂಕ್ಷ್ಮ ಸಾರವನ್ನು ಸಾಕ್ಷಾತ್ಕರಿಸಿಕೊಳ್ಳುವ ಕಡಿದಾದ, ಮತ್ತು ಜಾರಿಕೆಯುಳ್ಳ ದಾರಿಯಲ್ಲಿ ಮೇಲೇರಲು ಶಕ್ತಗೊಳಿಸಲು, ಮಾನವ ಸಂಕಲ್ಪ ರೂಪದಲ್ಲಿರುವ ಆದಿ ಸಂಕಲ್ಪ ಶಕ್ತಿಯನ್ನೇ ಬಳಸಿಕೊಳ್ಳಲಾಗುತ್ತದೆ ಎಂದು ಹೇಳಿದರೆ ಸಾಕು.

ಪ್ರತಿಯೊಬ್ಬ ಸಂತನೂ 'ಪ್ರಕಾಶ' ಎಂಬ ಪದವನ್ನು ಉಪಯೋಗಿಸಿದ್ದಾನೆ. ನಾನೂ ಕೂಡ ಅದನ್ನು ತಪ್ಪಿಸಲಾರೆ. ಯಾಕೆಂದರೆ, ಅದು 'ಸತ್ಯ'ವನ್ನು ಸೂಚಿಸುವ ಅತ್ಯುತ್ತಮ ಅಭಿವ್ಯಕ್ತಿ. ಆದರೆ, ಅದು ಕೆಲವು ತೊಡಕುಗಳನ್ನು ಉಂಟು ಮಾಡುತ್ತದೆ. ಯಾಕೆಂದರೆ, ನಾವು ಪ್ರಕಾಶದ ಬಗ್ಗೆ ಮಾತನಾಡಿದಾಗ ಪ್ರಭೆಯ ಭಾವನೆ ಪ್ರಮುಖವಾಗಿ, ಅದನ್ನು ಹೊಳೆಯುತ್ತಿರುವಂತೆ ಇರುವುದೆಂದು ತಿಳಿಯುತ್ತೇವೆ.

ನಿಜವಾದ 'ಪ್ರಕಾಶ'ದಲ್ಲಿ ಅಂಥ ಯಾವ ಭಾವನೆಯೂ ಒಳಗೊಂಡಿಲ್ಲ. ನಮ್ಮ ಪದ್ಧತಿಯಲ್ಲಿ ಅಭ್ಯಾಸಿಯು ಕೆಲವೊಮ್ಮೆ ಬೆಳಕನ್ನು ಕಾಣುತ್ತಾನೆ ಎಂಬುದೇನೋ ನಿಃಸಂಶಯ. ಆದರೆ ಅದು ಕಾಣುವುದು ಆರಂಭ ಕಾಲದಲ್ಲಿ; ಜಡ ವಸ್ತುವು ಶಕ್ತಿ ಸಂಪರ್ಕದಲ್ಲಿ ಬಂದಾಗ. ಬೇರೆ ಮಾತಿನಲ್ಲಿ ಹೇಳುವುದಾದರೆ ಶಕ್ತಿಯು ತನ್ನ ಕಾರ್ಯಾರಂಭ ಮಾಡಿದೆಯೆಂಬುದರ ಸೂಚನೆ ಅದೆಂದು ಮಾತ್ರ ಹೇಳಬಹುದು. ನಿಜವಾದ ಪ್ರಕಾಶವು ಉಷಃಕಾಲದ ವರ್ಣವುಳ್ಳದ್ದು ಅಥವಾ ವರ್ಣರಾಹಿತ್ಯದ ಒಂದು ಮಸಕು ಪ್ರತಿಬಿಂಬ. ಆ ವಸ್ತುವನ್ನು ಬೆಳಕು ಎಂದೆನ್ನುವುದು ಸರಿಯಾದ ಪದ ಪ್ರಯೋಗವಾಗಲಾರದು. ಯಾಕೆಂದರೆ ಬೆಳಕು ಆ ವಸ್ತುವಿಗಿಂತಲೂ ಹೆಚ್ಚು ಸ್ಥೂಲವಾದುದು. ಗ್ರಹಿಕೆಗೋಸ್ಕರ ಅದನ್ನು ಹಾಗೆ ವ್ಯಕ್ತ ಮಾಡಲಾಗುವುದು, ಅಷ್ಟೆ. ಅಭ್ಯಾಸಿಯು ಹೆಚ್ಚು ಹೆಚ್ಚು ಲಘುತ್ವವನ್ನು (ಹಗುರಾದಂತೆ) ಅನುಭವ ಮಾಡಿದರೆ, ಅವನು ಪ್ರಗತಿ ಹೊಂದುತ್ತಿರುವನೆಂದು ಅರ್ಥ. ಯಾಕೆಂದರೆ, ಹಾಗಾದ ಪಕ್ಷದಲ್ಲಿ ದೇವರು ಯಾವ ಸ್ಥಿತಿಯಲ್ಲಿ ಇರುವನೋ ಆ ಸ್ಥಿತಿಯಲ್ಲಿ ಅವನು ಪ್ರವೇಶಿಸುತ್ತಿದ್ದಾನೆ. 'ಲಘುತ್ವ' ಎಂದರೆ, ಮನುಷ್ಯನು ತನ್ನ ವಿಚಾರಗಳ ಭಾರವನ್ನು ಕಳೆದುಕೊಳ್ಳುವುದು. ಹೀಗೆ, ನಿಜವಾದ ಪ್ರಕಾಶವು ಸತ್ಯ ವಸ್ತುವನ್ನು ಸೂಚಿಸುತ್ತದೆ. ಅಥವಾ, ವಸ್ತುರಹಿತ ವಸ್ತುವನ್ನು ಸೂಚಿಸುತ್ತದೆ ಎಂದರೆ ಹೆಚ್ಚು ಸಮರ್ಪಕವಾಗುವುದು.

ಎಲ್ಲ ರೀತಿಯ ಕೃತಕತೆಯೂ, ಅಭ್ಯಾಸಿಯ ಸ್ವಂತದ ಇಚ್ಛೆ(ವಾಂಛೆ) ಮತ್ತು ಪೂರ್ವಗ್ರಹೀತ ಅಭಿಪ್ರಾಯಗಳಿಂದ ತಪ್ಪಾಗಿ ನಿರ್ದೇಶಿಸಲ್ಪಟ್ಟ ಪ್ರಾಶಸ್ತ್ಯವೂ, ಅಪಾಯಕಾರಿಯಾಗಿರುತ್ತವೆ; ಅನೇಕ ವೇಳೆ ಅದು ಸರಿಪಡಿಸಲಾರದಂತಿರುತ್ತದೆ. ಹಾಗಿರುವುದರಿಂದ, ಪ್ರಕಾಶದ ದರ್ಶನ ಮುಂತಾದವುಗಳನ್ನು ಕೃತಕವಾಗಿ ಸೃಷ್ಟಿಸಿಕೊಳ್ಳಬಾರದು ಅಥವಾ ಅವುಗಳಿಗಾಗಿ ಒತ್ತಾಯಿಸಬಾರದು. ಅವು ಉಂಟಾದುದೇ ಆದರೆ, ಯಾವ ವೈಯಕ್ತಿಕ ಆಸಕ್ತಿಯನ್ನೂ ಅವುಗಳ ಬಗ್ಗೆ ಹೊಂದಿರದೆ, ಕೇವಲ ಗಮನಿಸಿದರೆ ಸಾಕು. ಸಾಕ್ಷಾತ್ಕಾರ ಅಥವಾ ಅಂತಿಮ ಗುರಿಯೊಂದೇ ನಮ್ಮ ವೈಯಕ್ತಿಕ ಆಸಕ್ತಿಯ ವಸ್ತುವಾಗಬೇಕು. ಅದನ್ನು ಉದ್ದಕ್ಕೂ ದೃಷ್ಟಿಯಲ್ಲಿ ಸ್ಥಿರವಾಗಿ ಇಟ್ಟುಕೊಂಡಿರಬೇಕು. ಅಸಂಬದ್ಧವಾದ ಮತ್ತು ಅಡ್ಡ ದಾರಿಗೆಳೆಯುವ ಪ್ರತಿಯೊಂದರ ವಿರುದ್ಧವಾಗಿ ಅತ್ಯಂತ ನಂಬಲರ್ಹ ರಕ್ಷಣೆಯನ್ನು ಒದಗಿಸಿಕೊಳ್ಳುವುದಕ್ಕೆ ಬೇಕಾದುದು ಇದೇ ಆಗಿದೆ. ಅನೇಕ ರಾಜಯೋಗದ ಅಭ್ಯಾಸಿಗಳು, ಪ್ರತಿಯೊಂದು ಸಾರೆ ಧ್ಯಾನಕ್ಕೆ ಕುಳಿತಾಗಲೂ, ಚಿತ್ತೈಕಾಗ್ರತೆಯನ್ನು ಆತುರದಿಂದ ಪ್ರತೀಕ್ಷಿಸುತ್ತ, ಅದಕ್ಕೆ ಒತ್ತಾಯಪಟ್ಟುಕೊಳ್ಳುವುದು, ಆಗಲೇ ಹೇಳಿದಂತೆ, ಅಪಾಯಕರವಾದ, ತಪ್ಪಾಗಿ ನಿರ್ದೇಶಿತವಾದ ಪ್ರಾಶಸ್ತ್ಯದ ಒಂದು ಉದಾಹರಣೆ. ಭಾರತದಲ್ಲಿಯೂ, ಇತರ ಕಡೆಗಳಲ್ಲಿಯೂ, ಯೋಗ ಸಾಧನೆಯ ಇತಿಹಾಸದಲ್ಲಿ ಇದು ಭಾರಿ ಅನಾಹುತವನ್ನುಂಟು ಮಾಡಿದೆ. ಮನಸ್ಸನ್ನು ನಿಯಂತ್ರಣದಲ್ಲಿ ತರಲೋಸುಗ ಸಾಧಾರಣವಾಗಿ ಅನುಸರಿಸಲಾಗುವ ಸನ್ಯಾಸದ ಕಠಿಣ

ನಿಯಮಾಚರಣೆಗಳೂ, ತಪಸ್ಸೂ, ದೇಹ ದಂಡನೆಗಳೂ ತಪ್ಪಾಗಿ ನಿರ್ದೇಶಿತವಾದ ಮನಃಪ್ರವೃತ್ತಿಗಳಿಂದ ಬಿಡುಗಡೆ ಮಾಡಲಾರವು. ಅದರ ಬದಲಾಗಿ, ಅವು ಕೆಡುಕನ್ನು ಒಳಗೆ ಅದುಮಿ ಅಡಗಿಸಲ್ಪಡುವಂತೆ ಮಾಡುತ್ತವೆ; ಮತ್ತು ಒಂದು ವೇಳೆ ಸಂಯಮ ಸಡಿಲವಾದಾಗ ಅವು ಎಂದಾದರೂ ಸಿಡಿದು ಹೊರ ಹೊಮ್ಮಬಹುದು. ನಿಜವಾದ ಪರಿಹಾರವಿರುವುದು, ಕೃತ್ರಿಮವಾಗಿ ಮನಸ್ಸನ್ನು ಅದುಮಿ ತಹ ಬಂದಿಯಲ್ಲಿಡುವುದರಲ್ಲಾಗಲಿ, ನಿರೋಧಿಸುವುದರಲ್ಲಾಗಲಿ ಅಥವಾ ದೇಹ ದಂಡನೆಯಲ್ಲಾಗಲಿ ಅಲ್ಲ. ತಪ್ಪು ದಾರಿಗೆಳೆಯಲ್ಪಟ್ಟ ಪ್ರವೃತ್ತಿಗಳಿಂದ ಮನಸ್ಸನ್ನು ಬಿಡುಗಡೆಗೊಳಿಸಿ ಕ್ರಮಶಃ ರೂಪಿಸುವುದರಲ್ಲಿ ಅದರ ಪರಿಹಾರವಿದೆ. ಒಬ್ಬ ಪ್ರಾಮಾಣಿಕ ವಿದ್ಯಾರ್ಥಿಯ ಮನೋವೃತ್ತಿಯಿಂದ, ಎಲ್ಲವನ್ನೂ ಅರ್ಥಮಾಡಿಕೊಂಡು ಸಹಜ ರೀತಿಯಲ್ಲಿ ಕೆಲಸ ಮಾಡಲೂ ವಿಕಾಸ ಹೊಂದಲೂ ಅನುವು ಮಾಡಿ ಕೊಡುವುದೇ ಈ ವಿಷಯದಲ್ಲಾಗಲಿ, ಇನ್ನಿತರ ವಿಷಯಗಳಲ್ಲಾಗಲೀ, ಶೀಘ್ರ ಪ್ರಗತಿಯನ್ನು ಖಾತ್ರಿಪಡಿಸಬಲ್ಲುದು.

ಸಾಮಾನ್ಯವಾಗಿ ಹೃದಯದ ಮಿಡಿತವು ಅನುಭವಕ್ಕೆ ಬರುವ ಬಿಂದುವಿನ ಮೇಲೆ ಧ್ಯಾನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮೂಗಿನ ತುದಿಯ ಮೇಲೆ, ಹುಬ್ಬುಗಳ ಮಧ್ಯದ ಮೇಲೆ, ಇತ್ಯಾದಿ ಇತರ ಬಿಂದುವಿನ ಮೇಲೆ, ಲಕ್ಷ್ಯವಿಡುವ ಧ್ಯಾನವನ್ನೂ ಮಾಡಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ, ಹೃದಯದ ಮೇಲೆ ಧ್ಯಾನ ಮಾಡುವುದು ಅತ್ಯಂತ ಸುಲಭವೂ ಮತ್ತು ಶ್ರೇಯಸ್ಕರವೂ ಆಗಿದೆ. ಹೃದಯದ ಮೇಲೆ ಧ್ಯಾನ ಮಾಡಬೇಕೆಂಬುದರ ಹಿಂದೆ ಒಂದು ದೊಡ್ಡ ತತ್ತ್ವವೇ ಅಡಗಿದೆ. ಹೃದಯವು ರಕ್ತ ಪರಿಚಲನೆಯ ಕೇಂದ್ರ, ಶರೀರದ ಎಲ್ಲ ಭಾಗಗಳಿಗೂ ಅತಿ ಸಣ್ಣ ಕೋಶಗಳಿಗೂ ಹೃದಯವು ಶುದ್ಧ ರಕ್ತವನ್ನು ಹರಿಸುತ್ತದೆ. ಈಗ ಹೃದಯವನ್ನು ನಾವು ಧ್ಯಾನದ ಕೇಂದ್ರವಾಗಿ ತೆಗೆದುಕೊಂಡೆವು. ಅಂದರೆ, ನಮ್ಮ ಶರೀರದಲ್ಲಿ ಹರಿಯುವ ರಕ್ತದ ಮೇಲೆ ಅದರ ಪರಿಣಾಮ ಉಂಟಾಗುತ್ತದೆ. ನಮ್ಮ ವಿಚಾರ ಮತ್ತು ಕ್ರಿಯೆಗಳಿಂದ ಉಂಟಾದ ಸ್ಥೂಲತೆ ಕರಗಿ ಹೋಗಲಾರಂಭಿಸುತ್ತದೆ. ಹೃದಯದ ಮೇಲೆ ಧ್ಯಾನ ಮಾಡುವ ಈ ಪದ್ಧತಿಯ ಪ್ರಥಮ ದಿನದಿಂದಲೇ ನಾವು ಮೊದಲಿಗೆ ಪಡೆಯುವ ಲಾಭವಿದು. ಇದು ಕೇಂದ್ರ ಬಿಂದು. ಇದು ಯಾವ ಕಡೆಗೆ ಮುಖ ಮಾಡಿದರೂ, ಅಲ್ಲಿ ಸ್ಪಂದನಯುಕ್ತ ಚಲನೆಯನ್ನು ಉಂಟು ಮಾಡುತ್ತದೆ. ಇದೇ ನಮ್ಮ ಮನಸ್ಸಿನ ಕಾರ್ಯ ಕ್ಷೇತ್ರ ಮತ್ತು ಇದೇ ನಮ್ಮ ವಿವೇಕ ಶಕ್ತಿಯನ್ನು ಬೆಳೆಸುವ ಸಾಧನ. ದೈವೀ ಶಕ್ತಿಯ ಅವತರಣಕ್ಕೋಸ್ಕರ ಈ ಸ್ಥಳದಲ್ಲಿ ಸೂಕ್ಷ್ಮ ಶಕ್ತಿಯು ಕೆಲಸ ಮಾಡುತ್ತದೆ. ಹೇಗಾದರೂ ಮಾಡಿ ನಮ್ಮ ವಿಚಾರವು ಅದರೊಂದಿಗೆ ಜೊತೆಗೂಡಿದರೆ, ಅಥವಾ ಸಮರ್ಪಕ ವಸ್ತುವಿನಲ್ಲಿ ಅದು ಸೇರಿ ಪಸರಿಸುವಂತೆ ಅದಕ್ಕೆ ಶಿಕ್ಷಣ (ತರಬೇತು) ಕೊಟ್ಟು ಸತ್ಯದ ಕಡೆಗೆ ತಿರುಗಿಸಿದರೆ, ನಮ್ಮ ಸಮಸ್ಯೆ ಪರಿಹಾರವಾದಂತೆಯೇ. ಧ್ಯಾನದ ಮೂಲಕವೇ ಏಕೆ ಮುಂದುವರಿಯಬೇಕೆಂದು ಜನರು ಕೇಳಬಹುದು. ಉತ್ತರ

ಅತಿ ಸರಳ ಹಾಗೂ ಸ್ಪಷ್ಟವಾಗಿದೆ– ಮನಸ್ಸು ತನಗೆ ರೂಢಿಯಾಗಿರುವ ಅತ್ತಿತ್ತ ಅಲೆದಾಡುವ ಅಭ್ಯಾಸವನ್ನು ಬಿಟ್ಟು ಬಿಡುವಂತೆ, ಧ್ಯಾನದ ಮೂಲಕ ನಾವು ನಮ್ಮನ್ನು ಒಂದು ಬಿಂದುವಿನಲ್ಲಿ ಒಗ್ಗೂಡಿಸಿಕೊಳ್ಳುತ್ತೇವೆ. ಈ ಅಭ್ಯಾಸದಿಂದ, ನಮ್ಮ ಮನಸ್ಸನ್ನು ಸರಿಯಾದ ಮಾರ್ಗದಲ್ಲಿ ಹಚ್ಚುತ್ತೇವೆ; ಯಾಕೆಂದರೆ, ಅದು ತನ್ನ ರೂಢಿಗತ ಚಾಳಿಗಳನ್ನು ರೂಪಾಂತರಿಸಿಕೊಳ್ಳುತ್ತಿದೆ. ಅದು ನೆರವೇರಿತೆಂದರೆ, ಸಹಜವಾಗಿಯೇ, ನಮ್ಮ ವಿಚಾರಗಳು ಅತ್ತಿತ್ತ ದಾರಿ ತಪ್ಪಿ ಹೋಗುವುದಿಲ್ಲ. ಜಡ ಮತ್ತು ಚೇತನಗಳನ್ನು ಜೋಡಿಸುವ ಕೊಂಡಿಯು ಅತ್ಯಂತ ಹೆಚ್ಚು ಸ್ಪಷ್ಟವಾಗಿ ಅನುಭವಕ್ಕೆ ಬರುವ ಸ್ಥಳವೆಂದರೆ ಹೃದಯ ಬಿಂದುವೊಂದೇ. ಈ ಕಾರಣದಿಂದಲೇ ಹೃದಯದ ಮೇಲೆ ಧ್ಯಾನ ಮಾಡುವುದು ಅತ್ಯಂತ ಹೆಚ್ಚು ಪ್ರಯೋಜನಕಾರಿಯೆಂಬುದು. ಇದಲ್ಲದೆ, ಹೃದಯವು ಮನಸ್ಸಿನ ಕಾರ್ಯಕ್ಷೇತ್ರ. ಮನಸ್ಸು ಯಾವಾಗಲೂ ತಾನಿರುವಂತೆಯೇ ಇರುತ್ತದೆ. ಸರಿಪಡಿಸಬೇಕಾದುದೆಂದರೆ, ಮನಸ್ಸಿನ ಕಾರ್ಯಕ್ಷೇತ್ರವಾದ ಹೃದಯವನ್ನು. ಹೀಗಿರುವುದರಿಂದ, ಶಕ್ತಿ ಪ್ರವಾಹವು, ಮೇಲಕ್ಕಾಗಲಿ ಕೆಳಕ್ಕಾಗಲಿ ಯಾವ ಬಿಂದುವಿನಿಂದ ಹರಿಯುತ್ತದೆಯೋ ಆ ಬಿಂದುವೇ ಧ್ಯಾನ ಮಾಡಲು ಯೋಗ್ಯ ಬಿಂದುವಾಗಬಲ್ಲದು. ಅದು ಹೃದಯ ಮಾತ್ರ ಆಗಬಲ್ಲದೇ ಹೊರತು ಬೇರಾವುದೂ ಅಲ್ಲ. ಈ ಉದ್ದೇಶಕ್ಕೆ ತ್ರಿಕುಟಿಯನ್ನು (ಭ್ರೂಮಧ್ಯ) ತೆಗೆದುಕೊಳ್ಳಬಹುದು. ಆದರೆ ಅದಕ್ಕೆ ಅಭ್ಯಾಸಿಯು ಹೆಚ್ಚು ಶ್ರಮ ತೆಗೆದುಕೊಳ್ಳ ಬೇಕಾಗುವುದಾದ್ದರಿಂದ, ಸಾಮಾನ್ಯರಿಗೆ ಸುಲಭದ ಕೆಲಸವಾಗುವುದಿಲ್ಲ, ಮತ್ತು ಅಭ್ಯಾಸಿಯು ಧ್ಯಾನವನ್ನು ಸರಿಯಾಗಿ ಮಾಡದಿದ್ದರೆ, ಕಾಲಕ್ರಮೇಣ ಅನೇಕ ತೊಡಕುಗಳು ಹುಟ್ಟಿಕೊಳ್ಳಬಹುದು. ನಾಭಿಬಿಂದುವಿನ ಮೇಲೆ ಧ್ಯಾನ ಮಾಡುವುದರಿಂದ, ಒಂದು ಬಗೆಯ ಕಚಗುಳಿಯ ಅನುಭವವುಂಟಾಗಿ, ಅಂತಿಮವಾಗಿ ಮನಸ್ಸು ಮತ್ತು ಮನೋವಿಕಾರಗಳು ಹೆಚ್ಚು ಬಲವತ್ತರವಾಗುವುವೇ ಹೊರತು, ಅದರಿಂದ ಯಾವ ಆಧ್ಯಾತ್ಮಿಕ ಪ್ರಯೋಜನವೂ ಇಲ್ಲ.

ಶ್ರದ್ಧೆಯು ಒಂದು ಮಟ್ಟದವರೆಗೆ ಅಭ್ಯಾಸಿಯಲ್ಲಿ ವೃದ್ಧಿಗೊಂಡಾಗ ನಾವು ಸಾಮಾನ್ಯವಾಗಿ ಮಾನವ ಆಕಾರದ ಮೇಲೆ ಧ್ಯಾನ ಮಾಡುವಂತೆ ಒತ್ತಿ ಹೇಳುತ್ತೇವೆ. ಆಧ್ಯಾತ್ಮಿಕ ಪ್ರಗತಿಗೆ ಇದು ಆತ್ಮಾಘಾತಕವೆಂದು ಟೀಕಾಕಾರರು ಭಾವಿಸಬಹುದು. ಅದು ಹಾಗಿಲ್ಲ; ಆದರೆ, ನಾವು ಯಾರ ಮೇಲೆ ಧ್ಯಾನ ಮಾಡುತ್ತೇವೆಯೋ ಆತನು ವಿಶೇಷ ಸಾಮರ್ಥ್ಯವುಳ್ಳವನಾಗಿದ್ದು, ಆಧ್ಯಾತ್ಮಿಕ ಶಿಕ್ಷಣ ನೀಡುವುದಕ್ಕೋಸ್ಕರ ನಿರ್ಗುಣ ಪರತತ್ತ್ವದಿಂದ ಇಳಿದು ಬಂದವನಾಗಿದ್ದರೆ, ಅಥವಾ ಮಹಾ ಪರಿಶ್ರಮದಿಂದ ಆವಶ್ಯಕ ಆಧ್ಯಾತ್ಮಿಕ ವಿಕಾಸದ ಮಟ್ಟವನ್ನು ಸಾಧಿಸಿಕೊಂಡವನಾಗಿದ್ದರೆ ಅಡ್ಡಿ ಇಲ್ಲ.

## ಧ್ಯಾನಕ್ಕೆ ಪೂರ್ವಸಿದ್ಧತೆಗಳು

ಮೂಲಕ್ಕೆ ಹಿಂದಿರುಗಿ ಹೋಗಬೇಕೆಂಬ ವಿಚಾರವು ಮಾನವನಲ್ಲಿ ಉದ್ಬುದ್ಧವಾದಾಗ, ಅವನಿಗೆ ತನ್ನಲ್ಲಿ ಉದ್ಭವಿಸಿದ ಕ್ರಿಯೆಯನ್ನು ಸಾಧ್ಯವಾಗುವಷ್ಟು ಸುಪ್ತಾವಸ್ಥೆಗೆ ತಂದುಕೊಳ್ಳುವುದು ಅಗತ್ಯವಾಯಿತು. ಅವನು ಅದಕ್ಕೆ ಸಾಧನೋಪಾಯವನ್ನು ಅರಸಲು ಆರಂಭಿಸಿದನು. ಸುಪ್ತ ಚಲನೆಯು ತನಗೆ ಸಂಬಂಧ ಹೊಂದಿದ 'ಕೇವಲ' ತತ್ತ್ವಕ್ಕೆ (Absolute ಅಥವಾ ಪರವಸ್ತು) ಹೋಲಿಸಿದಾಗ ಸ್ಥೂಲತರವಾಗಿ ಹೇಗೆ ಕಂಡಿತೋ, ಹಾಗೆಯೇ ಅಪೇಕ್ಷಿತ ಆದರ್ಶವಾದ ಸತ್ಯವನ್ನು ಪಡೆಯಲು ಸ್ಥೂಲತರವಾದ ಯಾವುದೋ ಒಂದು ವಸ್ತುವನ್ನು ತೆಗೆದುಕೊಳ್ಳಬೇಕೆಂಬುದು ಅವನ ಅರಿವಿಗೆ ಬಂದಿತು. ಇದು ಪ್ರಳಯ ಕಾಲದಲ್ಲಿರುವಂಥ ಸಂಕೋಚನ ಅಥವಾ ಸಂಹೃತಿಯ (ಒಳಗೆಳೆದುಕೊಳ್ಳುವ) ಸ್ಥಿತಿಯನ್ನು ತನ್ನಲ್ಲಿ ಉಂಟು ಮಾಡಿಕೊಳ್ಳಬೇಕೆಂಬ ನಿಷ್ಕರ್ಷೆಗೆ ಅವನು ತಲುಪುವಂತೆ ಮಾಡಿತು. ವಿಶ್ವವನ್ನು ಸಮಷ್ಟಿಯ ಅರ್ಥದಲ್ಲಿ ತೆಗೆದುಕೊಂಡರೆ, ಆತ್ಮವು ಅದರ ತುಂಬೆಲ್ಲ ವ್ಯಾಪಿಸಿರುವಂತೆ ಮನುಷ್ಯನಲ್ಲಿಯೂ ವ್ಯಾಪಿಸಿದೆ. ಸಂಕೋಚನವಾಗಲು ಪ್ರಾರಂಭವಾದಾಗ ಪ್ರಳಯದ ಸ್ಥಿತಿಯೂ ಬರುತ್ತದೆ. ಅಂಥ ಸಂಕೋಚನವು ಮನುಷ್ಯನಲ್ಲಿ ಉಂಟಾದಾಗ ಅದು ಅವನನ್ನು ವೈಯಕ್ತಿಕ ಪ್ರಳಯಕ್ಕೆ ಒಯ್ಯುತ್ತದೆ; ಅಂದರೆ, ಅವನ ಸ್ಥೂಲ ಸ್ಥಿತಿಯಿಂದ ನಿಜ ಸ್ಥಿತಿಗೆ ಮುಂದುವರಿಯಲು ಪ್ರಾರಂಭಿಸಿದ್ದಾನೆಂದು ಅರ್ಥ. ಸಂಕೋಚನವು ಯಾವಾಗಲೂ ಕೆಳಗಿನಿಂದ ಆರಂಭಗೊಂಡು ಕ್ರಮವಾಗಿ ಮೇಲಕ್ಕೆ ಸಾಗುತ್ತದೆ; ಅದರ ಊರ್ಧ್ವಮುಖಿ ಪ್ರವೃತ್ತಿಯೇ ಅದಕ್ಕೆ ಕಾರಣ. ಆದುದರಿಂದ, ಮೇಲಕ್ಕೆ ಹೋಗಲು ಅವನು ಕೆಳಗಿನಿಂದ ಪ್ರಾರಂಭಿಸಬೇಕು. ಕಾಲುಗಳನ್ನು ಮತ್ತು ಸಂಬಂಧಿಸಿದ ಅಂಗಗಳನ್ನು ಒಂದು ಭಂಗಿಗೆ ತಂದು, ಸ್ಥಿರವಾಗಿರಿಸುವುದು ಸಂಕೋಚನದ ಒಂದು ರೂಪವಾಗಬಹುದು. ಅದನ್ನು ಯಾವ ರೀತಿಯಲ್ಲಿಯೇ ಮಾಡಲಿ, ಕೊನೆಯದಾಗಿ ಅದರ ಸ್ವರೂಪವು ಆಸನದ್ದೇ ಆಗುತ್ತದೆ. ಅದು ಪರತತ್ತ್ವಕ್ಕೆ ಸಾಗುವ ದಾರಿಯನ್ನು ನಮಗೆ ರೂಪಿಸಿ ಕೊಡುತ್ತದೆಯಾದ್ದರಿಂದ, ಅದು ಅವಶ್ಯ. ಈ ಭಂಗಿ ಯಾವಾಗಲೂ ಒಂದೇ ಆಗಿರಬೇಕು. ಈ ರೀತಿಯಲ್ಲಿ ಆ ಮಹಾಶಕ್ತಿಯೊಂದಿಗೆ ಸಂಬಂಧವನ್ನು ದೊರಕಿಸಿಕೊಳ್ಳುತ್ತಾನೆಂಬುದೇ ಇದಕ್ಕೆ ಕಾರಣ. ತನ್ನ ವಿಶಿಷ್ಟ ಉದ್ದೇಶವನ್ನು ಸಾಧಿಸಲು ಆ ಮಹಾಶಕ್ತಿಯನ್ನು ಆರಂಭದಲ್ಲಿಯೇ ತೆಗೆದುಕೊಂಡಂತಾಗುವುದು. ಹೀಗೆ, ಸತ್ಯದೊಂದಿಗೆ ಸಂಬಂಧಿಸಿದ ರೂಪವು (ಆಸನದ ಸ್ವರೂಪವು) ಅವನ ಪ್ರಾಥಮಿಕ ಉಪಕ್ರಮದಲ್ಲಿ ಬಹಳೇ ಸಹಾಯ ಮಾಡುತ್ತದೆ.

ಧ್ಯಾನ ಕಾಲದಲ್ಲಿ, ಬೆನ್ನುಹುರಿ, ಕುತ್ತಿಗೆ ಮತ್ತು ತಲೆ ಇವು ನೇರವಾದ ಸರಳ ರೇಖೆಯಲ್ಲಿದ್ದರೆ ಹೆಚ್ಚು ಉಪಯುಕ್ತವೆಂದು ಪುರಾತನ ಕಾಲದಿಂದಲೂ ಭಾವಿಸಲಾಗಿದೆ. ಯಾಕೆಂದರೆ, ಆ ಭಂಗಿಯಲ್ಲಿರುವಾಗ ದೈವೀ ಕೃಪೆಯು ನೇರವಾಗಿ ಅಭ್ಯಾಸಿಯ ಮೇಲೆ ಇಳಿದು ಬರುವುದೆಂದು ನಂಬಲಾಗಿದೆ. ನಮ್ಮ ಅಭ್ಯಾಸ

ಪದ್ಧತಿಯಲ್ಲಿ, ಹೇಗೂ, ಅದನ್ನು ಒತ್ತಾಯಪಡಿಸುವುದಿಲ್ಲ. ಸಹಜ, ಸುಲಭ ಭಂಗಿಯಲ್ಲಿ ಕುಳಿತುಕೊಳ್ಳಬೇಕೆಂದು ನಾನು ಅಭ್ಯಾಸಿಗಳಿಗೆ ಸಲಹೆ ಮಾಡುತ್ತೇನೆ. ಅದೂ ಅಲ್ಲದೆ, ದೃಢವಾಗಿ, ನೇರವಾದ ಭಂಗಿಯನ್ನು ಅನುಸರಿಸುವವರೂ, ಆನಂದಮಯ ಲೀನ ಅವಸ್ಥೆಯುಂಟಾದಾಗ ತಮ್ಮಷ್ಟಕ್ಕೆ ತಾವೇ ವಿನಮ್ರ ಭಾವದಿಂದ ತುಸು ಮುಂದೆ ಬಾಗುವುದು ಕಂಡು ಬರುತ್ತದೆ. ಹಾಗಿರುವುದರಿಂದ, ಪ್ರಜ್ಞೆಯ ಉನ್ನತ ಸ್ತರಗಳಿಗೆ ಏರಲು ಅದು ಸಹಜವಾದ ಸ್ಥಿತಿಯೆಂದು ಪರಿಗಣಿಸಬಹುದು. ನಿಜಕ್ಕೂ, ಹೋಲಿಸಿ ನೋಡಿದರೆ ಇದು ಕಡಿಮೆ ಮಹತ್ತ್ವವುಳ್ಳ ವಿಷಯವಾದ್ದರಿಂದ, ಇದರ ಬಗ್ಗೆ ವಿವಾದವು ಅಸಂಬದ್ಧವೆಂದು ಕಾಣುತ್ತದೆ.

ಅರುಣೋದಯದಲ್ಲಿಯೇ ಧ್ಯಾನಕ್ಕೆ ಕುಳಿತುಕೊಳ್ಳುವುದು ಹೆಚ್ಚು ಒಳಿತು. ಅದು ಸಾಧ್ಯವಾಗದಿರುವಾಗ, ಅಭ್ಯಾಸಿಗೆ ಅನುಕೂಲವಾದ ನಿರ್ದಿಷ್ಟ ಸಮಯದಲ್ಲಿ ಕುಳಿತುಕೊಳ್ಳಬೇಕು. ಬಾಹ್ಯ ವಿಷಯಗಳಿಂದ ವಿಚಲಿತರಾಗಬೇಡಿರಿ, ಅವು ನಿಮ್ಮ ಅಭ್ಯಾಸದಲ್ಲಿ ನೀವು ಹೆಚ್ಚು ಮಗ್ನರಾಗುವ ಆವಶ್ಯಕತೆಯನ್ನು ಮನಗಾಣಲು ಸಹಾಯ ಮಾಡುತ್ತವೆಯೆಂದು ತಿಳಿದು ನಿಮ್ಮ ಕೆಲಸದಲ್ಲಿ ನಿರತರಾಗಿರಿ.

## ಪ್ರಾರ್ಥನೆ

ಅಭ್ಯಾಸದಲ್ಲಿ, ಮತ್ತೊಂದು ಮಾತೆಂದರೆ, ಮಲಗುವ ಸಮಯದಲ್ಲಿ, ಅತ್ಯಂತ ವಿನಮ್ರ ಭಾವದಿಂದ, ದೈವೀ ಪ್ರೇಮವು ತುಂಬಿ ತುಳುಕುವ ಹೃದಯದಿಂದ, ದಿನಾಲೂ, ಒಂದು ಪುಟ್ಟ ಪ್ರಾರ್ಥನೆಯನ್ನು (ಓ ನಾಥ.....) ಸಲ್ಲಿಸುವುದು. ಒಂದೆರಡು ಸಲ ಮನಸ್ಸಿನಲ್ಲಿಯೇ ಪ್ರಾರ್ಥನೆಯನ್ನು ಉಚ್ಚರಿಸಿರಿ ಮತ್ತು ಅದರ ಮೇಲೆ ಕೆಲವು ಕ್ಷಣ ಧ್ಯಾನ ಮಾಡಲು ಪ್ರಾರಂಭಿಸಿರಿ. ಅತಿ ದುಃಖಿತನಾದ ಮನುಷ್ಯನೊಬ್ಬನು ಕಡುನೊಂದ ಹೃದಯದಿಂದ ಪರಮ ಪ್ರಭುವಿನ ಮುಂದೆ, ಅವನ ಕರುಣೆ ಮತ್ತು ಕೃಪೆಗಳಿಗಾಗಿ ಯಾಚಿಸುತ್ತ ತನ್ನ ದುಃಖಗಳನ್ನು ತೋಡಿಕೊಳ್ಳುವನೋ ಎಂಬಂತೆ, ಪ್ರಾರ್ಥನೆ ಸಲ್ಲಿಸಬೇಕು. ಆಗ ಮಾತ್ರವೇ ಅವನು ಓರ್ವ ಯೋಗ್ಯ ಭಕ್ತನಾಗಬಲ್ಲ. ದೇವರನ್ನು ಪ್ರೀತಿಸುವ ಅನೇಕ ವಿಧಾನಗಳಿವೆ; ಮತ್ತು ಪಿತೃಭಾವ, ಸಖ್ಯಭಾವ ಮುಂತಾದ ಅನೇಕ ಭಾವಗಳೂ ಇವೆ. ನನ್ನ ಅಭಿಮತದಲ್ಲಿ, ಪ್ರೇಮಿ–ಪ್ರಿಯತಮ ಭಾವಕ್ಕಿಂತ ಉತ್ತಮ ಭಾವ ಬೇರೆ ಇರಲಾರದು. ಅಭ್ಯಾಸಿಯು ತಾನೇ ಪ್ರೇಮಿಯೆಂದೂ, ದೇವರು ಪ್ರಿಯತಮನೆಂದೂ ಭಾವಿಸಿಕೊಂಡು ಮುಂದುವರಿದರೆ, ಕಾಲಕ್ರಮದಲ್ಲಿ ಅದರ ಫಲ ಎಂತಾಗುವುದೆಂದರೆ, ದೇವರೇ ಪ್ರೇಮಿಯಾಗಿ, ಅಭ್ಯಾಸಿಯೇ ಪ್ರಿಯತಮನಾಗಿ ಬಿಡುವನು. ಆದರೆ, ಯಾರೇ ಆಗಲಿ ಈ ಹಂತದಲ್ಲಿ ತನ್ನ ಗುರಿಯನ್ನು ಸಾಕ್ಷಾತ್ಕರಿಸಿಕೊಂಡೆನೆಂದು ಭಾವಿಸಿದರೆ ಅದೊಂದು ಗಂಭೀರ ಪ್ರಮಾದವೇ ಸರಿ. ಮುಂದೆ ಉಳಿದಿರುವುದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಅದು ಅಭ್ಯಾಸಾನುಭವಕ್ಕೆ ಮಾತ್ರವೇ ಸಂಬಂಧಪಟ್ಟಿದ್ದಾಗಿದೆ.

ಪ್ರಾರ್ಥನೆ ಅತೀವ ಮುಖ್ಯವಾದುದು; ಚ್ಯುತಿಗೊಳ್ಳದ ಯಶಸ್ಸಿನ ಉಪಾಯವು ಅದೇ ಆಗಿದೆ. ಅದರ ಮೂಲಕ ಪವಿತ್ರ ದೈವತ್ವ (ಪರತತ್ತ್ವ)ದೊಂದಿಗೆ ನಾವು ಸಂಬಂಧ ಸ್ಥಾಪಿಸಿದ್ದೇವೆ. ಪ್ರಾರ್ಥನೆಯನ್ನು ಪ್ರೇಮ ಮತ್ತು ಭಕ್ತಿ ತುಂಬಿದ ಹೃದಯದಿಂದ ಸಲ್ಲಿಸಬೇಕೆಂಬುದು ಕಾರಣವೇನೆಂದರೆ, ತನ್ನತ್ತ ದೈವೀ ಕೃಪೆಯು ಹರಿದು ಬರುವಂತಾಗಲು ತನ್ನಲ್ಲಿ ಶೂನ್ಯತೆಯನ್ನು ಉಂಟು ಮಾಡಿಕೊಳ್ಳಬೇಕಿದೆ. ವಿಶ್ವವು ಈಗಿನ ರೂಪಕ್ಕೆ ಬರುವಾಗಲೇ ಕೇಂದ್ರ ಬಿಂದುವು ಎಲ್ಲ ಜೀವಿಗಳಲ್ಲಿ ಆಳವಾಗಿ ಬೇರೂರಿತ್ತು. ನಮ್ಮೊಳಗೆ ಬೇರೂರಿದ ಕೇಂದ್ರ ಬಿಂದುವು ಪರತತ್ತ್ವದ ಅಂಶವಾದ್ದರಿಂದ, ಅದು ಮೂಲದತ್ತ ನಮ್ಮ ಗಮನವನ್ನು ತಿರುಗಿಸುತ್ತದೆ. ಪ್ರಾರ್ಥನೆಯಲ್ಲಿ ಅದೇ ಕೇಂದ್ರ ಬಿಂದುವಿನವರೆಗೆ ನಾವು ತಲುಪಲು ಪ್ರಯತ್ನಿಸುತ್ತೇವೆ. ಅಂಥದೇ ಸ್ಥಿತಿಯನ್ನು ನಮ್ಮೊಳಗೆ ಉಂಟು ಮಾಡಿಕೊಂಡಾಗ ಮಾತ್ರವೇ ಅದು ಸಾಧ್ಯ. ಇದಕ್ಕೆ ಅಭ್ಯಾಸ ಬೇಕು. ಅತ್ಯಂತ ಸರಳವೂ, ಶಾಂತವೂ ಆದ ದೈವೇಚ್ಛೆಗೆ ನಮ್ಮನ್ನು ನಾವು ಅಧೀನಪಡಿಸಿಕೊಳ್ಳುವುದರ ಮೂಲಕವಾಗಿ ಮಾತ್ರ ನಾವು ಅದನ್ನು ಸಾಧಿಸಬಹುದು. ಮೇಲುನೋಟಕ್ಕೆ ಇದು ಬಹಳ ಕಠಿಣವೆಂದು ತೋರುತ್ತದೆ, ಆದರೆ ವಾಸ್ತವದಲ್ಲಿ ಹಾಗಿಲ್ಲ. ಆದರೆ ಅದು, ಅದಕ್ಕಾಗಿ ಅಭೀಪ್ಸೆ ಪಡುವವರಿಗಷ್ಟೇ ಎಂಬುದೇನೋ ಸರಿಯೆ. ಪರವಸ್ತುವಿಗಾಗಿ ಬಲವಾದ ಹಂಬಲವನ್ನು ಹುಟ್ಟಿಸಿಕೊಂಡವನು ನಿಜವಾಗಿಯೂ ಪ್ರಾರ್ಥನೆಯ ಸ್ಥಿತಿಯಲ್ಲಿ ಇರುತ್ತಾನೆ. ಅದಕ್ಕಾಗಿ ಹೆಣಗಾಡುವುದು ಪ್ರತಿಯೊಬ್ಬನಿಗೂ ಬಿಟ್ಟದ್ದು. ಒಂದು ಕ್ಷಣ ಮಾತ್ರವೇ ಆದರೂ ಸರಿಯೆ, ಮಾನವನು ಆ ಸ್ಥಿತಿಯಲ್ಲಿ ಪ್ರವೇಶ ಮಾಡಿದರೆ, ಅವನ ಪ್ರಾರ್ಥನೆ ಮನ್ನಿಸಲ್ಪಡುವುದು. ಆದರೆ ಅದನ್ನು ಸಾಧಿಸಲು ನಿರಂತರ ಅಭ್ಯಾಸ ಬೇಕು. ಅಂಥ ರೀತಿಯ ಪ್ರಾರ್ಥನೆ ಸಲ್ಲಿಸುವಂತೆ ಜನರಿಗೆ ಉಪದೇಶಿಸಬೇಕು. ಮನುಷ್ಯನು ಇದನ್ನು ಸಾಧಿಸಿ ಅದರಲ್ಲಿ ನೆಲೆಸಿದನೆಂದರೆ, ಸ್ಮರಣೆಯೊಂದನ್ನುಳಿದು ಅವನು ಮಾಡಬೇಕಾದುದು ಉಳಿಯುವುದಾದರೂ ಏನು? ಅದನ್ನಾದರೂ ಯಾವ ರೀತಿಯಲ್ಲಿ ಮಾಡಬೇಕೆಂದರೆ ಅದೂ ಸಹ ತನ್ನ ಅರಿವಿಗೂ ಬರದ ಹಾಗೆ.

## ನಿರಂತರ ಸ್ಮರಣೆ

ಆಧ್ಯಾತ್ಮಿಕ ವಿದ್ಯೆಯಲ್ಲಿ ದೇವರ ನಿರಂತರ ಸ್ಮರಣೆ ಒಂದು ವಿಶೇಷ ಲಕ್ಷಣ. ನೀವು ಕಛೇರಿಯಲ್ಲಿ ಇರಲಿ, ಮನೆಯಲ್ಲಿರಲಿ, ಬೀದಿಯಲ್ಲಾಗಲಿ, ಪೇಟೆಯಲ್ಲಾಗಲಿ ಇರಲಿ, ನಿಮಗೆ ಬಿಡುವಿದ್ದಾಗ ದೇವರು ಎಲ್ಲೆಲ್ಲೂ ವ್ಯಾಪಿಸಿದ್ದಾನೆಂದು, ದೃಢ ವಿಶ್ವಾಸದಿಂದ ದೇವರನ್ನು ಕುರಿತು ಯೋಚಿಸುವುದು, ನಿರಂತರ ಸ್ಮರಣೆಯನ್ನು ಬೆಳೆಸಿಕೊಳ್ಳುವ ಪದ್ಧತಿ. ಸಾಧ್ಯವಿದ್ದಷ್ಟು ದೀರ್ಘಕಾಲ ಅದೇ ವಿಚಾರದಲ್ಲಿ ಇರಲು ಪ್ರಯತ್ನಿಸಿರಿ.

ಜನರ ಮನಸ್ಸು ಪ್ರತಿ ಕ್ಷಣದಲ್ಲೂ ತಮ್ಮ ಭೌತಿಕ ಜೀವನದ ವಿವಿಧ ಸಮಸ್ಯೆಗಳನ್ನು ಕುರಿತು ಯೋಚಿಸುವುದರಲ್ಲಿ ಮಗ್ನವಾಗಿರುತ್ತದೆ. ಅವರು ಬಹಳ ಸಂಕಟ ಅಥವಾ ದುಃಖದಲ್ಲಿ ಇದ್ದಾಗಿನ ಸಮಯವನ್ನು ಬಿಟ್ಟರೆ, ಅವರ ಗಮನವು ದೇವರ ಕಡೆಗೆ ಹೊರಳುವುದು ಅಪರೂಪ. ಅದಕ್ಕೆ ಕಾರಣವೆಂದರೆ, ಅವರು ತಮ್ಮ ದೃಷ್ಟಿಯಲ್ಲಿ ಸಂತತವೂ ಇರುವ ಪ್ರಾಪಂಚಿಕ ಆಸಕ್ತಿಗಳಿಗೆ ಮಾತ್ರವೇ ಪ್ರಾಮುಖ್ಯವನ್ನು ಕೊಡುತ್ತಾರೆ. ಹೀಗೆ ಅವರು ಯಾವ ಸ್ಥಿತಿಯಲ್ಲಿಯೂ ಹೊರಬರುವ ಯೋಚನೆಯೇ ಇಲ್ಲದಂತೆ ಮಾಯೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ.

ಕಾಲ ಕಾಲಕ್ಕೆ ದೇವರನ್ನು ನೆನೆಸುವುದು ಬಹಳ ಸಹಾಯಕಾರಿಯೇನೋ ಸರಿಯೆ, ಆದರೆ ಸಾಕ್ಷಾತ್ಕಾರದಲ್ಲಿ ಅಂತಿಮ ಯಶಸ್ಸಿಗೆ ಅಷ್ಟೇ ಸಾಲದು. ಯಾವುದೇ ಮುಖ್ಯ ಕೆಲಸವನ್ನು ಯಾವಾಗಲೂ ದೇವರ ಹೆಸರಿನಲ್ಲಿ ಪ್ರಾರಂಭಿಸುತ್ತೇವೆ. ಮತ್ತು, ಹೀಗೆ ಮಾಡುವುದು ಎಲ್ಲ ಧರ್ಮಗಳಲ್ಲಿ ಇರುವ ಪದ್ಧತಿ. ಆದರೆ ಅದು ಕೇವಲ ಔಪಚಾರಿಕವಾಗಿ ಬಿಟ್ಟಿದೆ; ಅದಕ್ಕೆ ಯಾವ ಮಹತ್ತ್ವವೂ ಇಲ್ಲ. ನಾವು, ನಿಜವಾದ ಅರ್ಥದಲ್ಲಿ ಅದನ್ನು ದೇವರಿಗೆ ಎಂದೂ ಸಮರ್ಪಿಸುವುದಿಲ್ಲ, ಹಾಗೂ, ಹೃದಯದಲ್ಲಿ ನಾವು ಪರಮಾತ್ಮನ ಭಾವನೆಯಿಂದ ಸಾಕಷ್ಟು ದೂರವೇ ಉಳಿದಿರುತ್ತೇವೆ. ಆ ಪದ್ಧತಿಯ ನಿಜವಾದ ಅಂತರರ್ಥವೆಂದರೆ, ನಮ್ಮ ಮಾನಸಿಕ ಮತ್ತು ದೈಹಿಕ ಕಾರ್ಯಗಳ ಎಲ್ಲ ಅವಸ್ಥೆಗಳಲ್ಲಿಯೂ ಪರಮಾತ್ಮನ ವಿಚಾರದೊಂದಿಗೆ ಸಂಪರ್ಕದಿಂದಿರಬೇಕೆಂಬುದೇ ಆಗಿದೆ. ನಮ್ಮ ಎಲ್ಲ ಚಟುವಟಿಕೆಗಳುದ್ದಕ್ಕೂ, ಅವಿಚ್ಛಿನ್ನ ವಿಚಾರಸರಣಿಯಿಂದ, ಪ್ರತಿಕ್ಷಣವೂ, ಆ ಪರಾಶಕ್ತಿಯೊಂದಿಗೆ ಸಂಲಗ್ನರಾಗಿರುವೆವೆಂದು ಭಾವಿಸಬೇಕು. ನಮ್ಮ ಎಲ್ಲ ಕೆಲಸ-ಕಾರ್ಯಗಳೂ, ನಾವು ಶಕ್ತಿಮೀರಿ ಸೇವಿಸಬೇಕಿರುವ ಪ್ರಭು, ಸದ್ಗುರುವೇ ನಮಗೆ ವಹಿಸಿದ ದಿವ್ಯ ಕರ್ತವ್ಯವೆಂದು ನಾವು ವ್ಯವಹರಿಸಿದರೆ, ಅದನ್ನು ಸುಲಭವಾಗಿ ಸಾಧಿಸಬಹುದು. ಜೀವನದಲ್ಲಿ ಮನುಷ್ಯನು ಪ್ರಾಪಂಚಿಕ ಸಂಬಂಧ ಮತ್ತು ಹೊಣೆಗಾರಿಕೆಗಳಿಂದ ಉಂಟಾದ ಅನೇಕ ಕಳವಳ ಮತ್ತು ವ್ಯಥೆಗಳಿಂದ ಸುತ್ತುವರಿಯಲ್ಪಟ್ಟಿರುವಾಗ ನಿರಂತರ ಸ್ಮರಣೆಯಾಗಲಿ, ಅಷ್ಟೇಕೆ, ಆಗಾಗ ಬಾರಿ ಬಾರಿ ಸ್ಮರಣೆ ಮಾಡುವುದು ಕೂಡ ಕಾರ್ಯಸಾಧ್ಯವಲ್ಲ ಎಂದು ಕೆಲವರು ತಿಳಿಯುತ್ತಾರೆ. ಆದರೆ, ಅದು ಅತಿ ಸುಲಭದ ಕೆಲಸ ಎಂಬುದನ್ನು, ಅಭ್ಯಾಸ ಮತ್ತು ಅನುಭವಗಳು ಅವರಿಗೆ ಸಿದ್ಧ ಮಾಡಿ ತೋರಿಸುತ್ತವೆ; ಮತ್ತು, ಯಾರಾದರಾಗಲಿ, ಪ್ರತಿಯೊಬ್ಬನೂ, ವ್ಯಥೆಗಳು ಮತ್ತು ನಿಗದಿತ ಕಾರ್ಯಭಾರಗಳು ಇದ್ದಾಗ್ಯೂ, ಅದನ್ನು ಅನುಸರಿಸಬಹುದು. ಹಾಗಾಗುವುದು, ಜನರು ತಮ್ಮ ಗಮನವನ್ನು ದೇವರತ್ತ ತಿರುಗಿಸುವುದನ್ನು ಕಲಿತರೆ ಮಾತ್ರ.

ಗುರುವು ಸಾಕ್ಷಾತ್ಕಾರದ ಅಂತಿಮ ಸ್ಥಿತಿಯಲ್ಲಿ ಲಯ ಹೊಂದಿದವನಾಗಿದ್ದರೆ, ಗುರುವೇ ಪರಮ ಶಕ್ತಿಯೆಂದು ಭಾವಿಸುವುದು ಆಧ್ಯಾತ್ಮಿಕ ಸಾಧನೆಯಲ್ಲಿ ಬಹಳೇ

ಸಹಾಯಕವಾಗುತ್ತದೆ. ಅವನನ್ನು ಪುರುಷೋತ್ತಮನೆಂದು ಭಾವಿಸುತ್ತ, ಅವನ ಮಾರ್ಗರ್ಶನವನ್ನೇ ಅವಲಂಬಿಸುತ್ತೀರಿ.

ಎಲ್ಲವನ್ನೂ ನಿಮ್ಮ ಗುರುವಿಗೆ ಸಮರ್ಪಿಸುತ್ತ, ನಿಮ್ಮ ದೈನಂದಿನ ಕೆಲಸಗಳನ್ನು ಮಾಡುತ್ತ ಹೋದರೆ, ಕಾಲಕ್ರಮದಲ್ಲಿ ಅದೆಷ್ಟು ಒಳಿತನ್ನುಂಟು ಮಾಡೀತು ಎಂಬುದನ್ನು ನೀವೇ ಊಹಿಸಿಕೊಳ್ಳಿರಿ. ಯಾವುದೊಂದು ಕೆಲಸ ಮಾಡುತ್ತಿರುವಾಗ, ಅದನ್ನು ನಿಮಗೋಸ್ಕರ ಮಾಡುತ್ತಿಲ್ಲ, ಬದಲಿಗೆ, ನಿಮ್ಮ ಗುರುವಿಗೋಸ್ಕರ ಮಾಡುತ್ತಿರುವಿರೆಂದು ತಿಳಿಯಿರಿ; ಅಷ್ಟೇಕೆ, ನಿಮ್ಮ ಗುರುವು ತನಗೋಸ್ಕರವೇ ಮಾಡುತ್ತಿರುವನೆಂದು ಭಾವಿಸಿರಿ. ಬೆಳಗಿನ ಉಪಾಹಾರ ಸಮಯದಲ್ಲಿ, ನಿಮ್ಮ ಗುರುವೇ ಉಪಾಹಾರ ತೆಗೆದುಕೊಳ್ಳುವನೆಂದು ತಿಳಿಯಬೇಕು. ನೀವು ನಿಮ್ಮ ಕಛೇರಿಗೆ ಹೋದಾಗ ಗುರುವೇ ಎಲ್ಲ ಕೆಲಸಗಳನ್ನು ಮಾಡುತ್ತಿರುವನೆಂದು ಭಾವಿಸಿರಿ. ಕಛೇರಿಯಿಂದ ನೀವು ಹಿಂದಿರುಗಿ ಬರುವಾಗ ದಾರಿಯಲ್ಲಿ ನೀವು ಒಂದು ಮೋಹಕ ನೃತ್ಯವನ್ನು ನೋಡಿದಿರೆಂದು ಊಹಿಸಿಕೊಳ್ಳಿ; ಆಗ ಆ ನರ್ತಕಿಯ ಮೋಹಕ ರೂಪವು ನಿಮ್ಮ ಕಣ್ಣನ್ನು ಸೆರೆ ಹಿಡಿಯುತ್ತದೆ. ಆಗ ಕೂಡ, ನೀವೆಲ್ಲ, ನಿಮ್ಮ ಗುರುವೇ ನೃತ್ಯವನ್ನು ನೋಡುತ್ತಿರುವನೆಂದು ತಿಳಿಯಿರಿ. ತತ್‌ಕ್ಷಣವೇ, ಅದರ ಬಗೆಗಿನ ನಿಮ್ಮ ಆಸಕ್ತಿ ಕಳೆದು ಹೋಗುತ್ತದೆ, ಯಾಕೆಂದರೆ ಗುರುವಿನ ಶಕ್ತಿ ನಿಮ್ಮಲ್ಲಿ ಪ್ರವಹಿಸಿ, ನಿಮ್ಮನ್ನು ಆ ಆಮಿಷದಿಂದ ಬಿಡುಗಡೆಗೊಳಿಸುತ್ತದೆ. ನೀವು ಕಚೇರಿಯಿಂದ ಮರಳಿ ಬಂದಾಗ, ನಿಮ್ಮ ಮಕ್ಕಳು ಅನೇಕ ಗಂಟೆಗಳಾದ ಮೇಲೆ ನಿಮ್ಮನ್ನು ನೋಡಿ ಕುಣಿದಾಡುತ್ತಾರೆ. ಮಕ್ಕಳ ಕುಣಿದಾಟದಿಂದ ನಿಮಗೂ ಸಂತಸವಾಗುತ್ತದೆ; ಅದು ಸಹಜವೇ ಸರಿ. ಕೆಲಕಾಲ ನಿಮ್ಮ ಗಮನವು ಅವರತ್ತ ಹರಿದು, ಕೆಲ ಹೊತ್ತು ನೀವು ಪವಿತ್ರ ವಿಚಾರದಿಂದ ಸ್ವಲ್ಪ ದೂರ ಸರಿದಂತೆ ಕಾಣುತ್ತದೆ. ಆಗ ನೀವು ಮಾಡಬೇಕಾದುದೆಂದರೆ, ನಿಮ್ಮೊಳಗಿರುವ ಗುರುವೇ ಆ ಸಂತೋಷವನ್ನು ಪಡುತ್ತಿದ್ದಾನೆಂದು ಭಾವಿಸಿಕೊಳ್ಳುವುದು. ಆಗ, ಮತ್ತೆ ನೀವು ಪವಿತ್ರ ವಿಚಾರದ ಸಂಪರ್ಕದಲ್ಲಿ ಬರುವಿರಿ. ನೀವು ನಿಮ್ಮ ಮಿತ್ರನೊಡನೆ ಹರಟುತ್ತಿದ್ದರೆ, ನೀವಲ್ಲ ನಿಮ್ಮ ಗುರು ಮಾತನಾಡುತ್ತಿದ್ದಾನೆಂದು ಯೋಚಿಸಿರಿ. ನಡೆಯುತ್ತಿರುವಾಗಲೂ ಗುರುವೇ ನಡೆಯುತ್ತಿದ್ದಾನೆಂದು ತಿಳಿಯಿರಿ. ಧ್ಯಾನ ಮಾಡುವ ಸಮಯದಲ್ಲಿಯೂ, ನೀವಲ್ಲ, ನಿಮ್ಮ ಗುರುವೇ ತನ್ನ ರೂಪದ ಮೇಲೆ ಧ್ಯಾನ ಮಾಡುತ್ತಿದ್ದಾನೆಂಬ ಭಾವನೆಯಿಂದ ಮಾಡಿದರೆ, ಅದು ಉತ್ಕೃಷ್ಟ ಫಲ ಕೊಡುತ್ತದೆ. ಇದೇ ರೀತಿಯಲ್ಲಿ ನೀವು ನಿಮ್ಮ ದೈನಂದಿನ ಕೆಲಸದಲ್ಲಿ ನಿಮ್ಮನ್ನು ಸರಿಪಡಿಸಿಕೊಳ್ಳಬಹುದು. ನೀವು ಈ ಭಾವನೆಯನ್ನು ರೂಢಿಸಿಕೊಂಡು, ನಿಮ್ಮ ಬದಲಿಗೆ ಗುರುವೇ ಎಲ್ಲವನ್ನೂ ಮಾಡುತ್ತಾನೆಂಬ ಭಾವನೆ ಇಟ್ಟುಕೊಂಡರೆ, ನೀವು ಯಾವಾಗಲೂ ನಿರಂತರ ಸ್ಮರಣೆಯಲ್ಲಿರುವಿರಿ, ಮಾತ್ರವಲ್ಲ, ನಿಮ್ಮ ಕ್ರಿಯೆಗಳು ಯಾವ ಸಂಸ್ಕಾರವನ್ನೂ ಉಂಟು ಮಾಡುವುದಿಲ್ಲವಾದ್ದರಿಂದ, ನಿಮಗೆ ಮುಂದೆ ಸಂಸ್ಕಾರಗಳಾಗುವುದು ನಿಂತು ಹೋಗುತ್ತದೆ.

## ಭಕ್ತಿ

ವಸ್ತುತಃ ನಿರಂತರ ಸ್ಮರಣೆಯು ಧ್ಯಾನಾಭ್ಯಾಸದ ಸಹಜ ವಿಕಾಸ. ಧ್ಯೇಯ ವಸ್ತುವಿಗೆ ಅಥವಾ ನಿರಂತರ ಸ್ಮರಣೆಗೆ ಅಭ್ಯಾಸಿಯು ನಿಷ್ಠೆ (ಭಕ್ತಿ)ಯುಳ್ಳವನಾದಾಗ ಅದಕ್ಕೆ ಹೆಚ್ಚಿನ ಸಾಮರ್ಥ್ಯ ಪ್ರಾಪ್ತವಾಗುತ್ತದೆ. ಆಗ ಅದು ಶುಷ್ಕ ಅಭ್ಯಾಸವಾಗಿರದೆ, ಮಧುರವಾದ ಸಂಪೂರ್ಣ ನಿಮಗ್ನಗೊಳಿಸುವ ಪ್ರವರ್ತನೆಯಾಗುತ್ತದೆ. ಪ್ರೇಮ, ಭಕ್ತಿಗಳ ಬೆಂಕಿ ಮಾತ್ರವೇ ತುಚ್ಛ ಕಸಗಳನ್ನೆಲ್ಲ ಸುಟ್ಟು ಹಾಕಿ, ಬಂಗಾರವನ್ನು ಕಸದಿಂದ ಬೇರ್ಪಡಿಸಿ ದೊರಕಿಸಿ ಕೊಡುತ್ತದೆ. ಪ್ರೇಮಾಗ್ನಿಗೆ ಮೂರು ಹಂತಗಳು ಇರಬಹುದು. ಮೊದಲನೆಯದು ಅದುಮಿ ಇಟ್ಟಂತಿದ್ದು ದಟ್ಟ ಹೊಗೆಯನ್ನು ಹೊರ ಬಿಡುವುದು; ಎರಡನೇ ಹಂತದಲ್ಲಿ ಆಗಾಗ ಕಿಡಿಯಾಗುತ್ತದೆ ಮತ್ತು ಕೊನೆಯದರಲ್ಲಿ ಎಲ್ಲವನ್ನೂ ಕ್ಷಣ ಮಾತ್ರದಲ್ಲಿ ಸುಟ್ಟು ಬೂದಿ ಮಾಡಲು ಶಕ್ತವಾದ ಪ್ರಕಾಶಮಾನವಾದ ಜ್ವಾಲೆಯನ್ನು ಹೊಮ್ಮಿಸುತ್ತದೆ. ಮೊದಲ ಎರಡು ಹಂತಗಳಲ್ಲಿ ಗಾಳಿಯಲ್ಲಿರುವ ದಹ್ಯ ವಸ್ತುವಿನ ಸಂಪರ್ಕವೇರ್ಪಡುವುದು ಅಗತ್ಯ. ಆಂತರಿಕ ಉಷ್ಣತೆಯ ಪರಿಣಾಮವಾಗಿ ದಹನ ಕ್ರಿಯೆಯನ್ನು ತಡೆಯುವ ಸ್ಥೂಲತೆಯು ತೆಗೆದು ಹಾಕಲ್ಪಟ್ಟಾಗ, ಅಂತಿಮ ಕ್ರಿಯೆ ಪೂರ್ಣ ಶಕ್ತಿಯುತವಾಗಿ ಆರಂಭವಾಗುತ್ತದೆ. ಆದರೆ, ವಿದ್ಯುದಗ್ನಿ ಎಂಬುದೂ ಉಂಟು. ಅದು ಮೊದಲ ಎರಡು ಹಂತಗಳನ್ನು ಮೀರಿ ಜಿಗಿಯುತ್ತದೆ. ಅದು ಹೊಗೆ, ಹಬೆಗಳಿಲ್ಲದ ಅಂತಿಮ ಸ್ಥಿತಿಯಲ್ಲಿಯೇ ಕಾಣಿಸಿಕೊಳ್ಳುತ್ತದೆ. ನಿಮ್ಮೊಳಗೆ ನೀವು ಅಂಥ ಅಗ್ನಿಯನ್ನು ಹೊತ್ತಿಸಿಕೊಂಡರೆ ನಿಮ್ಮ ಪ್ರಗತಿಯು ನಾಗಾಲೋಟದಿಂದ ವೇಗವಾಗಿ ಮುಂದುವರಿಯುತ್ತದೆ.

ಭಕ್ತಿ ಮತ್ತು ಪ್ರೇಮಗಳು ಸರಳವಾಗಿವೆ ಎಂದೆನಿಸುವುದೇನೋ ಸರಿ, ಆದರೆ, ಅದೇ ಹೊತ್ತಿನಲ್ಲಿ, ಅವುಗಳನ್ನು ಸಾಧಿಸುವುದು ಬಹಳ ಕಠಿಣವಾಗಿರುವುದೂ ಹೌದು. ನಿಜವಾದ ಭಕ್ತಿಯಲ್ಲಿ ಸೋಗಿನ ಲವಕೇಶವೂ ಇರುವುದಿಲ್ಲ, ಮತ್ತು ಅದು ಜ್ಞಾನ ಪ್ರಕಾಶನದ ಜೊತೆ ಜೊತೆಯಾಗಿಯೇ ಇರುತ್ತದೆ. ಪ್ರಾರಂಭಿಕ ಹಂತದಲ್ಲಿ ತನ್ನ ಪ್ರೇಮದ ವಸ್ತುವಿನ ಕುರಿತ ತನ್ನ ಭಾವನೆಯ ಅರಿವು ಭಕ್ತನಿಗೆ ಇರಬಹುದು, ಆದರೆ ಉನ್ನತ ಸ್ತರಗಳಲ್ಲಿ ಅದರ ಬುರುಗು, ಉಬ್ಬರಗಳು ತಗ್ಗಿ ಹೋಗಿ, ಅಂತಿಮ ಹಂತದಲ್ಲಿ ಅರಿವು ಬಹುತೇಕವಾಗಿ ಸಂಪೂರ್ಣ ಲುಪ್ತವಾಗಿ ಬಿಡುತ್ತದೆ. ಭಕ್ತಿಯ ಸೂಕ್ಷ್ಮತಮ ದಶೆಯೆಂದರೆ, ಸಂಪೂರ್ಣ ಸಮರ್ಪಣೆಯೆಂದು ಹೇಳಬಹುದು. ಅದರಲ್ಲಿ (ಸಂಪೂರ್ಣ ಸಮರ್ಪಣೆಯಲ್ಲಿ) ಸಮರ್ಥ ಸದ್ಗುರುವಿನ ಅನುಗ್ರಹದಿಂದ, ಸಮರ್ಪಣೆಯ ಅರಿವು ಕೂಡ ಸಂಪೂರ್ಣವಾಗಿ ಹಿಂದೆ ಸರಿದಿರುತ್ತದೆ.

ಭಕ್ತಿ, ಸಮರ್ಪಣೆ ಮುಂತಾದವುಗಳನ್ನು ಸಹಜ ರೀತಿಯಲ್ಲಿ ಅಭ್ಯಾಸ ಮಾಡುವುದು ಹೇಗೆಂಬ ಸಮಸ್ಯೆಯೊಂದಿದೆ. ಈ ಉದ್ದೇಶಕ್ಕೆ ಮಾನವನೊಬ್ಬನು ಮಾನವ ವರ್ಗಕ್ಕೆ ಸೇರಿದ ವ್ಯಕ್ತಿಯನ್ನು ಅತ್ಯಂತ ಹೆಚ್ಚು ಪ್ರೀತಿಸಬಲ್ಲನೆಂದು

ಹೇಳಲಾಗುತ್ತದೆ. ಆದುದರಿಂದ ಗುರುವನ್ನು ಪರತತ್ತ್ವದ ಮೂರ್ತರೂಪವೆಂದು ಪರಿಗಣಿಸಲಾಗುವುದು. ನನ್ನ ಮಟ್ಟಿಗೆ, ನನ್ನ ಗುರುಗಳು ನನ್ನ ಪ್ರೇಮದ ಏಕಮಾತ್ರ ವಸ್ತುವಾಗಿದ್ದರು. ನಾನು ಕೇವಲ ಅವರನ್ನು, ಅವರನ್ನೊಬ್ಬರನ್ನೇ ಪ್ರೀತಿಸುವವನಾಗಿದ್ದೇನೇ ಹೊರತು, ಸ್ವಾತಂತ್ರ್ಯವನ್ನಾಗಲಿ, ಶಾಂತಿಯನ್ನಾಗಲಿ, ಪರಿಪೂರ್ಣತೆಯನ್ನಾಗಲಿ, ಅಥವಾ ಇನ್ನಾವುದನ್ನಾಗಲಿ ಪ್ರೀತಿಸುವವನಾಗಿರಲಿಲ್ಲ. ಅವರ ಮೇಲೆ ಧ್ಯಾನ ಮಾಡಲಿಕ್ಕೆ ಮತ್ತು ಭಕ್ತಿ ನಿಷ್ಠರಾಗಿರಲಿಕ್ಕೆ, ಅತ್ಯಂತ ಯೋಗ್ಯ ವ್ಯಕ್ತಿಯಾಗಿದ್ದ ಅವರು, ನಾನು ಅವರನ್ನು ಹಾಗೆ ಪ್ರೇಮಿಸಲು ನಿಃಸಂದೇಹವಾಗಿ ಅರ್ಹರಾಗಿದ್ದರು. ಅಹಂಕಾರದ ಭಾವನೆಗಳಿಂದಲೂ, ಆಶೆಗಳಿಂದಲೂ, ಪ್ರಾಪಂಚಿಕ ಲೇಪಗಳಿಂದಲೂ ಸಂಪೂರ್ಣ ಮುಕ್ತರಾಗಿದ್ದ ಅವರು ಕೇವಲ ಆತ್ಮನಿಷ್ಠರಾಗಿದ್ದರು. ಈ ಮಾತು ಮಾನವನಿಗೆ ಸಾಮಾನ್ಯವಾಗಿ ದಯಪಾಲಿಸಲಾಗಿರದಂಥ ಉನ್ನತ ಮಟ್ಟದ ಆಧ್ಯಾತ್ಮಿಕ ಸ್ಥಿತಿಗೆ ಅನ್ವಯಿಸುತ್ತದೆ. ಆ ಕಾರಣದಿಂದಲೇ ನಾನು ಅವರನ್ನು ನನ್ನ ಸಾಮರ್ಥ್ಯವಿದ್ದಷ್ಟು ಹೆಚ್ಚು ಪ್ರೀತಿಸುತ್ತಿದ್ದೆ. ಅವರಲ್ಲಿ ಹೃದಯ ಪೂರ್ವಕವಾಗಿ ಸಂಪೂರ್ಣ ಲಯ ಹೊಂದಲು ಪ್ರಯತ್ನಿಸುತ್ತಿದ್ದೆ. ಮತ್ತು ಅದೇ ನನಗೆ ಜೀವನದ ಧ್ಯೇಯಾನ್ವೇಷಣೆಯಾಗಿತ್ತು. ಅಸಾಮಾನ್ಯರೂ, ಅಸದೃಶರೂ ಆದ ಗುರುಗಳು ನನಗೆ ದೊರಕಿದ್ದುದೇ ಇದಕ್ಕೆ ಕಾರಣ. ಅದರಿಂದ ಪಡೆದ ಫಲವನ್ನು ವರ್ಣಿಸಲು ನನ್ನಲ್ಲಿ ಶಬ್ದಗಳಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರು ಅನಂತ ಕೃಪಾಸಾಗರವೇ ಆಗಿದ್ದರು; ಆ ಸಾಗರದಲ್ಲಿಯೇ ನಾವೆಲ್ಲರೂ ಲಯ ಹೊಂದಬೇಕು. ತೀವ್ರಾಸಕ್ತಿಯುಳ್ಳ ಎಲ್ಲ ಸತ್ಯಾನ್ವೇಷಕರಿಗೂ ಅದು ಲಭ್ಯವಾಗಲಿ.

## ಸಮರ್ಪಣೆ

ಗುರಿಯನ್ನು ಸಾಧಿಸುವುದಕ್ಕೆ, ನಿಮ್ಮನ್ನು ಗುರುವಿಗೆ ಸಮರ್ಪಣೆ ಮಾಡಿಕೊಂಡು, ನೀವು ಸ್ವತಃ 'ಜೀವನ್ ಮೃತ'ರಾಗುವುದೇ ಅತ್ಯಂತ ಸುಲಭವಾದ ಮತ್ತು ನಿಶ್ಚಿತವಾಗಿ ನೆಚ್ಚಬಹುದಾದ ಉಪಾಯ. ಈ ಸಮರ್ಪಣೆಯ ಭಾವವನ್ನು ಯಾಂತ್ರಿಕವಾದ ಅಥವಾ ಬಲವಂತಪಡಿಸುವ ಉಪಾಯಗಳಿಂದ ಬೆಳೆಸಿದರೆ ಅದು ನೈಜವಾಗುವುದು ಅಪರೂಪವೇ ಸರಿ. ಅದು ನಿಮ್ಮ ಆಂತರ್ಯದಲ್ಲಿ ಸ್ವಲ್ಪವೂ ಆಯಾಸ ಅಥವಾ ಒತ್ತಡವಿಲ್ಲದೆ ತನ್ನಷ್ಟಕ್ಕೆ ತಾನೇ ವಿಕಾಸವಾಗಬೇಕು. ತಾನೆಂಬ ಅರಿವು ಉಳಿದರೆ, ಆಗ ಕೂಡ ಅದು ನಿಜವಾದ ಸಮರ್ಪಣೆಯೆಂದಾಗುವುದಿಲ್ಲ. ನೀವು ನಿಮ್ಮನ್ನು ನಿಜವಾದ ಅರ್ಥದಲ್ಲಿ ಸಮರ್ಪಿಸಿಕೊಂಡಾಗ, ಮಾಡುವುದು ಉಳಿಯುವುದಾದರೂ ಏನು? ಏನೂ ಇಲ್ಲ. ಈ ಸ್ಥಿತಿಯಲ್ಲಿ ಅಭ್ಯಾಸಿಯು ಸದಾ ಸತ್ಯದ ನಿಕಟ ಸಂಪರ್ಕದಲ್ಲಿರುತ್ತಾನೆ. ಮತ್ತು ದಿವ್ಯ ಪ್ರಕಾಶದ ಪ್ರವಾಹವು ಅವನಲ್ಲಿಗೆ ಅವಿಚ್ಛಿನ್ನವಾಗಿ ಹರಿಯುತ್ತಿರುವುದೆಂದು ನಾನು ನಂಬುತ್ತೇನೆ. ಈ ರೀತಿಯಲ್ಲಿ ನೀವು ನಿಮ್ಮ ಜೀವನದ ಸಮಸ್ಯೆಯನ್ನು ಅತ್ಯಂತ ಸುಲಭವಾಗಿ ಮತ್ತು ಸಮರ್ಥವಾಗಿ

ಬಗೆಹರಿಸಿಕೊಳ್ಳಬಹುದು. ಆದುದರಿಂದ, ಓರ್ವನು ತನ್ನ ಹೃದಯವನ್ನು ಮಾರಿ ಕೊಳ್ಳಲು ಅರ್ಥಾತ್, ದಿವ್ಯ ಸದ್ಗುರುವಿಗೆ ಕಾಣಿಕೆಯಾಗಿ ಅರ್ಪಿಸಬಲ್ಲನೆಂದಾದರೆ, ಮಾಡಲು ಉಳಿಯುವುದು ಏನೂ ಇಲ್ಲವೆಂದು ಹೇಳಬಹುದು. ಇದು ಸಹಜವಾಗಿಯೇ ಅವನಿಗೆ ಪರಮ ಸತ್ಯದಲ್ಲಿ ಲಯಾವಸ್ಥೆಯನ್ನು ಉಂಟು ಮಾಡುವುದು. ಈ ಸರಳವೂ ಸುಲಭವೂ ಆದ ತಂತ್ರವನ್ನು ಅನುಸರಿಸುವುದರಿಂದ, ಪ್ರಾರಂಭವೇ ಕೊನೆಯೂ ಆಗುತ್ತದೆ. ನಮ್ಮ ಜೀವನದ ಅತ್ಯಂತ ಪ್ರಿಯವಸ್ತುವಿನ ಪ್ರಾಪ್ತಿಗೆ, ನಮ್ಮ ಹೃದಯದ ಹೊರತು ಇನ್ನೇನು ತಾನೆ ಅತ್ಯಂತ ಸೂಕ್ತ ಕಾಣಿಕೆಯಾಗಬಲ್ಲುದು?

ಇನ್ನೊಂದು ಮಾತು. ಅತಿ ಸುಲಭವಾದ ಹೃದಯವನ್ನು ಅರ್ಪಣೆ ಮಾಡಲು ಬೇಕಾದುದು 'ಸಂಕಲ್ಪ'ದ ಒಂದು ಕ್ರಿಯೆ ಮಾತ್ರ, ಅಲ್ಲದೆ, ಸಂಕಲ್ಪವು ಹಗುರವೂ ಸೂಕ್ಷ್ಮವೂ ಆದಂತೆಲ್ಲ ಅದರ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಈ ವಿಧಾನವನ್ನು ಅನುಸರಿಸಿದರೆ, ಮೊತ್ತ ಮೊದಲ ದಿನದಿಂದಲೇ ವೈರಾಗ್ಯದ ಮನಃಪ್ರವೃತ್ತಿಯನ್ನು ತರುವುದು ನಿಶ್ಚಿತ. ಈ ಉದ್ದೇಶಕ್ಕೆ, ಧೈರ್ಯದಿಂದ ಮುಂದಡಿಯಿಡುವುದೊಂದೇ (ಪ್ರಾರಂಭ ಮಾಡುವುದೊಂದೇ) ಬೇಕಾಗಿರುವುದು.

ಆತ್ಮಸಮರ್ಪಣೆಯೆಂದರೆ, ಸ್ವಂತದ ಪರಿವೆಯು ಸ್ವಲ್ಪವೂ ಇಲ್ಲದಂತೆ, ಗುರುವಿನ ಇಚ್ಛೆಗೆ ಸಂಪೂರ್ಣವಾಗಿ ತನ್ನನ್ನು ಒಪ್ಪಿಸಿ ಬಿಡುವುದಲ್ಲದೆ ಬೇರೇನೂ ಅಲ್ಲ. ಈ ಸ್ಥಿತಿಯಲ್ಲಿ ಸ್ಥಿರವಾಗಿ ನೆಲೆಗೊಂಡು ನಿಂತರೆ, ಅದು ಆತ್ಮನಿರಸನದ ಸ್ಥಿತಿಯು ಪ್ರಾರಂಭಕ್ಕೆ ಒಯ್ಯುತ್ತದೆ. ಸಮರ್ಥ ಸದ್ಗುರುವಿಗೆ ನಾವು ಶರಣಾಗತರಾದಾಗ ಆತನಿಂದ ದಿವ್ಯ ಶಕ್ತಿಯ ನಿರಂತರ ಪ್ರವಾಹವನ್ನು ಸೆಳೆಯಲಾರಂಭಿಸುತ್ತೇವೆ. ಈ ಸ್ಥಿತಿಯಲ್ಲಿ, ಮನುಷ್ಯನು ಮಾಡುವುದು, ಯೋಚಿಸುವುದು ಎಲ್ಲವೂ ಕೇವಲ ಗುರುವಿನ ಅಪ್ಪಣೆಯ ಪ್ರಕಾರವೇ ಆಗಿರತ್ತದೆ. ಪ್ರಪಂಚದಲ್ಲಿ ತನಗೆ ಸೇರಿದ್ದುದು ಏನೂ ಇಲ್ಲವೆಂದೂ, ಎಲ್ಲವೂ ಗುರುವಿನಿಂದ ಅವನಿಗೆ ವಹಿಸಲ್ಪಟ್ಟ ಪವಿತ್ರ ನ್ಯಾಸವೆಂದೂ ತಿಳಿಯುತ್ತಾನೆ ಮತ್ತು ಎಲ್ಲವನ್ನೂ ಗುರುವಿನ ಆದೇಶವೆಂದು ತಿಳಿದು ಮಾಡುತ್ತಾನೆ. ಆತನ ಇಚ್ಛೆಯು ಗುರುವಿನ ಇಚ್ಛೆಗೆ ಸಂಪೂರ್ಣ ಅಧೀನವಾಗಿರುತ್ತದೆ. ಶರಣಾಗತಿಯೆಂಬುದು ಸುಲಭಸಾಧ್ಯವಾದ ಸಾಮಾನ್ಯ ಮಾತಲ್ಲ. ಎಲ್ಲ ಇಂದ್ರಿಯಗಳೂ, ಸ್ವಶಕ್ತಿಗಳೂ ಸಂಪೂರ್ಣ ನಿರಸನಗೊಂಡ ನಂತರವಷ್ಟೆ ಅದು ಆರಂಭವಾಗುವುದು. ಅದಕ್ಕೋಸ್ಕರ ಭಕ್ತಿಯ ಪ್ರಾಥಮಿಕ ನಿಯಮಗಳ ಮೂಲಕ ಮುಂದುವರಿಯುತ್ತೇವೆ. ಗುರುವನ್ನು ಅತಿಮಾನವನೆಂದು ತಿಳಿದು ಆತನಿಗೆ ಒಪ್ಪಿಸಿಕೊಂಡು ಬಿಡುತ್ತೇವೆ. ಭಕ್ತಿ, ಶ್ರದ್ಧೆ ಮತ್ತು ಗೌರವಗಳಿಂದ ಆತನನ್ನು ಪ್ರೀತಿಸುತ್ತೇವೆ. ಎಲ್ಲ ಉಪಾಯಗಳಿಂದಲೂ ಆತನ ಗಮನವನ್ನು ಮತ್ತು ಕೃಪೆಯನ್ನು ಆಕರ್ಷಿಸಲು ಪ್ರಯತ್ನಿಸುತ್ತೇವೆ.

ಶಿಷ್ಯರನ್ನು 'ಮನ್ಮತ' ಮತ್ತು 'ಗುರುಮತ' ಎಂದು ಎರಡು ಗುಂಪುಗಳಾಗಿ ಸಂತರು ವರ್ಗೀಕರಿಸಿದ್ದಾರೆ. ಮೊದಲನೆಯವರು, ಸಂಪತ್ತಿನ ಆಶೆ, ಕಷ್ಟ ಪರಿಹಾರ ಮುಂತಾದ ಪ್ರಾಪಂಚಿಕ ಉದ್ದೇಶವನ್ನು ದೃಷ್ಟಿಯಲ್ಲಿರಿಸಿಕೊಂಡು ಗುರುವಿನ ಬಳಿಗೆ ಹೋಗುವವರು. ತಮ್ಮ ಆಶೆಗಳು ತೃಪ್ತರಾಗುವವೆಂಬ ಭರವಸೆ ಇರುವವರೆಗೂ ಅವರು ಗುರುವಿಗೆ ವಿಧೇಯರಾಗಿರುತ್ತಾರೆ. ಅವರು ನಿರಾಶೆ ಹೊಂದಿದರೆ, ಆ ಪ್ರಸಕ್ತಿಯಿಂದ, ಅವರು ದೂರ ಸರಿಯುತ್ತಾರೆ. ಅಂಥ ಶಿಷ್ಯರ ವಿಷಯದಲ್ಲಿ ವಿಧೇಯತೆ, ಅಧೀನತೆಗಳ ಪ್ರಶ್ನೆ ಏಳುವುದಿಲ್ಲ; ಇನ್ನು ಆತ್ಮಸಮರ್ಪಣೆ ಅಥವಾ ಶರಣಾಗತಿಯನ್ನು ಕುರಿತು ಹೇಳುವುದೇನು? 'ಗುರುಮತ'ದ ಶಿಷ್ಯರು ಎಲ್ಲ ವಿಷಯಗಳಲ್ಲಿಯೂ ಗುರುವಿನ ಆದೇಶಗಳನ್ನು ವಿಧೇಯತೆಯಿಂದ ಪಾಲಿಸುತ್ತಾರೆ ಮತ್ತು ಎಲ್ಲ ರೀತಿಯಲ್ಲಿಯೂ ಆತನ ಇಚ್ಛೆಗೆ ಅಧೀನರಾಗಲು ಪ್ರಯತ್ನಿಸುತ್ತಾರೆ. ಅರ್ಪಣೆಯು ವಿಧೇಯತೆಯಿಂದ ಮೊದಲಾಗುತ್ತದೆ. ಆಧ್ಯಾತ್ಮಿಕ ವಿದ್ಯೆಯಲ್ಲಿ ಉನ್ನತ ಸಿದ್ಧಿಗಳನ್ನು ಪಡೆದಿರುವ ಗುರುವಿನ ಘನವಾದ ಮಹಿಮೆ(ಶಕ್ತಿ)ಗಳಿಂದ ಆಳವಾಗಿ ಪ್ರಭಾವಿತರಾದಾಗ ನಾವು ಆತನ ಆದೇಶಗಳನ್ನು ಪಾಲಿಸಲು ಆಂತರಿಕವಾಗಿ ಒಲವುಳ್ಳವರಾಗುತ್ತೇವೆ.

ಆತ್ಮ ಸಮರ್ಪಣೆಯ ಸುಂದರ ಉದಾಹರಣೆಯಾಗಿ 'ಭರತ' ನಮ್ಮ ಮುಂದೆ ಇದ್ದಾನೆ. ರಾಮನನ್ನು ಹಿಂದೆ ಬರುವಂತೆ ಮನವೊಲಿಸಲು ಅವನು ಅಯೋಧ್ಯೆಯ ಜನರನ್ನೊಡಗೂಡಿ ಕಾಡಿಗೆ ಹೋದಾಗ, ಜನರ ಬಿನ್ನಹಕ್ಕೆ ಪ್ರತ್ಯುತ್ತರವಾಗಿ ರಾಮನು, ಒಂದು ವೇಳೆ ರಾಜಧಾನಿಗೆ ಮರಳಬೇಕೆಂದು ಭರತನು ಹೇಳಿದರೆ, ಹಾಗೆ ಮಾಡಲು ಒಲ್ಲೆ ಎನ್ನುವುದಿಲ್ಲ ಎಂದು ಹೇಳುತ್ತಾನೆ. ಎಲ್ಲರ ದೃಷ್ಟಿಯೂ ಭರತನತ್ತ ತಿರುಗಿತು; ಅವನೂ ರಾಮನನ್ನು ಮನವೊಲಿಸಲು ಬಂದಿದ್ದನಷ್ಟೆ ಆದರೆ ಅವನು, "ನಾನು ಅಪ್ಪಣೆ ಕೊಡುವವನಲ್ಲ, ಅನುಸರಿಸುವವನು ಮಾತ್ರ" ಎಂದು ಶಾಂತವಾಗಿ ಉತ್ತರಿಸಿದನು.

ಹೀಗೆ, ಆತ್ಮ ಸಮರ್ಪಣೆಯು ಧ್ಯೇಯ ಸಾಧನೆಯಲ್ಲಿ ಅಭ್ಯಾಸಿಗೆ ಬಹಳೇ ಮಹತ್ತ್ವಪೂರ್ಣವಾದುದು.

# ಅಧ್ಯಾಯ – ೬

# ಸಾಕ್ಷಾತ್ಕಾರಕ್ಕೆ ಮಾರ್ಗ (ಮಾರ್ಗದರ್ಶಿಯ ಪಾತ್ರ)

## ಗುರು ಮತ್ತು ಅವನ ಕಾರ್ಯ

ಸಾಕ್ಷಾತ್ಕಾರವನ್ನು ಕೇವಲ ಅಭ್ಯಾಸದಿಂದ ಪಡೆಯಲಾಗುವುದಿಲ್ಲ. ಯಾಕೆಂದರೆ ಉನ್ನತ ಹಂತಗಳಲ್ಲಿ ಸ್ಥಿತಿಗಳು ಎಂಥವಿರುತ್ತವೆಯೆಂದರೆ, ಸ್ವಪ್ರಯತ್ನದಿಂದ ಮನುಷ್ಯನು ಕೊಂಚ ಮೇಲೇರಿದರೂ, ಮೇಲಿನಿಂದ ಇರುವ ಬಲವಾದ ಒತ್ತಡದಿಂದಾಗಿ ಅವನು ಬೇಗ ಕೆಳಕ್ಕೆ ಜಾರುತ್ತಾನೆ. ಆದುದರಿಂದ, ಉನ್ನತ ವಲಯಗಳಿಗೆ ನಾವು ಪ್ರವೇಶ ಪಡೆಯುವ ವಿಷಯದಲ್ಲಿ ಗುರುವಿನ ಸಹಾಯ ಅನಿವಾರ್ಯ. ಪ್ರಾಯೋಗಿಕವಾದ ಸಾಧನಾಭ್ಯಾಸದ ಮಟ್ಟಿಗೆ ಕೂಡ, ಪ್ರತಿಯೊಬ್ಬರೂ ಆಧ್ಯಾತ್ಮಿಕ ಶಿಕ್ಷಣದ ಪ್ರಾಯೋಗಿಕ ಕ್ರಮವನ್ನು ಅನುಸರಿಸಬೇಕಾದುದು ಅತಿ ಮುಖ್ಯವಾದ್ದರಿಂದ ನಾವು ಸರಿಯಾದ ಮಾರ್ಗದರ್ಶನವನ್ನು ಪಡೆಯಬೇಕು. ನೇರವಾಗಿ ದೇವರಿಗೆ ಶರಣಾಗತರಾಗಿ, ಕೇವಲ ಸ್ವಪ್ರಯತ್ನದಿಂದಲೇ ಪರಿಪೂರ್ಣತೆಯನ್ನು ಪಡೆದ ಮಹಾತ್ಮರೂ (ಸಂತರೂ) ಇದ್ದರೆಂದರೂ, ಅಂಥ ಉದಾಹರಣೆಗಳು ವಿರಳ. ಅದು ಬಹಳ ಕಷ್ಟದ ದಾರಿ. ಅಸಾಧಾರಣ ಪ್ರತಿಭಾ ಸಾಮರ್ಥ್ಯವನ್ನು ದೈವದತ್ತವಾಗಿ ಪಡೆದ ವ್ಯಕ್ತಿಗಳು ಮಾತ್ರ ಅದನ್ನು ಅನುಸರಿಸಲು ಸಾಧ್ಯ. ಗುರುವು ದೇವರು ಮತ್ತು ಮನುಷ್ಯನನ್ನು ಜೋಡಿಸುವ ಕೊಂಡಿ. ಅವನ ಮುಖಾಂತರವೇ ನಾವು ದೇವರನ್ನು ತಲುಪಬಲ್ಲೆವು. ಮಾರ್ಗದಲ್ಲಿಯ ತೊಡಕುಗಳಿಂದ ನಮ್ಮನ್ನು ಹೊರತರುವ ಶಕ್ತಿ ಆತನೊಬ್ಬನೇ.

ನಾವು ಆರಿಸಿಕೊಳ್ಳುವ ಮಾರ್ಗದರ್ಶಕನು ಅತ್ಯುನ್ನತ ಸಾಮರ್ಥ್ಯವುಳ್ಳವನಾಗಿರಬೇಕಾದುದು ಅವಶ್ಯ. ತನ್ನ ಅಸಾಧಾರಣ ಶಕ್ತಿ ಮೂಲಕ, ಎಲ್ಲ ತೊಡಕುಗಳನ್ನೂ ದೃಷ್ಟಿ ಮಾತ್ರದಿಂದ ಹರಿದೊಗೆಯಲು ಆತನು ಸಮರ್ಥನಿರಬೇಕು. ಪರಿಪೂರ್ಣತೆಯನ್ನು ಪಡೆದವನೂ ಮತ್ತು ಸಂಪೂರ್ಣ ಆತ್ಮನಿರಸನ ಮಾಡಿಕೊಂಡವನೂ ಆಗಿರುವವನೇ ಗುರುವಾಗಬಲ್ಲನು.

ಸಮರ್ಥ ಗುರುವನ್ನು ಆರಿಸಿಕೊಳ್ಳುವುದು ಅತಿ ಕಷ್ಟದ ಕೆಲಸವೆಂಬುದು ನಿಃಸಂದೇಹ. ಆಯ್ಕೆಯ ಸುಲಭ ನಿರ್ಣಯದ ವಿಧಾನವನ್ನು, ನನ್ನ ವೈಯಕ್ತಿಕ ಅನುಭವದ ಆಧಾರದ ಮೇಲೆ, ನಾನು ವಿವರಿಸಬಹುದು. ನೀವು ಯಾರಾದರೊಬ್ಬರ ಸಂಪರ್ಕದಲ್ಲಿ ಬಂದಾಗ, ಆ ಸಾಹಚರ್ಯವು ತತ್ಕಾಲದ ಮಟ್ಟಿಗಾದರೂ, ನಿಮ್ಮ ಮನಸ್ಸಿನ ಮೇಲೆ ಯಾವ ಭಾರವನ್ನಾಗಲಿ, ಪರಿಣಾಮವನ್ನಾಗಲಿ ಉಂಟು ಮಾಡದೆ, ಅದರ ಅಶಾಂತ ಪ್ರವೃತ್ತಿಗಳನ್ನು ಶಮನಗೊಳಿಸಿ, ಶಾಂತಿ, ಸಮಾಧಾನಗಳ ಭಾವನೆಯನ್ನು ಉದ್ದೀಪಿಸುವುದೇ ಎಂದು ಅರಿತುಕೊಳ್ಳಲು ಪ್ರಯತ್ನಿಸಿರಿ. ಅದು ಹಾಗಿದ್ದರೆ, ಆತನು ನಿಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಯೋಗ್ಯನೆಂಬ ತೀರ್ಮಾನಕ್ಕೆ ಬರಬಹುದು. ಮತ್ತೊಂದು ತೊಂದರೆಯೂ ಇದೆ. ಅಂಥ ಗುರುವೊಬ್ಬನು ದೊರೆತು, ಅವನು ಗಮ್ಯನಾಗಿದ್ದರೂ, ಅವನು ದೊಡ್ಡ ಪವಾಡವನ್ನು ತೋರಿಸಿದ ಹೊರತು ಅವನನ್ನು (ಜನರು) ನಂಬುವುದಿಲ್ಲ. ಪ್ರಾಣಾಹುತಿಯನ್ನು ನೀಡಬಲ್ಲ ರಾಜ ಯೋಗಿಯೋರ್ವನು ನಿಃಸಂದೇಹವಾಗಿ ಪವಾಡಗಳನ್ನು ತೋರಿಸಬಲ್ಲನು; ಆದರೆ ಅದನ್ನು ಎಂದೂ ತೋರಿಸಲು ಬಯಸುವುದಿಲ್ಲ. ಯಾಕೆಂದರೆ ಅದು ಅವನ ನಿಜವಾದ ಸ್ಥಿತಿಗೆ ಅಗೌರವಪ್ರಾಯವಾಗುತ್ತದೆ. ತನ್ನ ಜೀವನದಲ್ಲಿ ಪವಾಡಗಳನ್ನು ತೋರಿಸಿದ ಕ್ರಿಸ್ತನ ಉದಾಹರಣೆ ನಮ್ಮೆದುರಿಗಿದೆ. ಅಷ್ಟಾದರೂ ಅವನಿಗೆ ಹನ್ನೆರಡು ಜನ ಶಿಷ್ಯರು ಮಾತ್ರ ದೊರೆತರು; ಅದರಲ್ಲಿಯೂ ಒಬ್ಬನು, ಅನಂತರ ಅವನನ್ನು ಶಿಲುಬೆಗೇರಿಸಲು ಕಾರಣನಾದನು. ಅವನ ಪವಾಡಗಳು ಜನರಲ್ಲಿ ಶ್ರದ್ಧೆಯನ್ನು ಹುಟ್ಟಿಸಲು ಉಪಯುಕ್ತವಾಗಲಿಲ್ಲವೆಂಬುದನ್ನು ಇದು ತೋರಿಸುತ್ತದೆ. ನಂತರದ ಕಾಲದಲ್ಲಿ, ಅವನಿಗೆ ಅಷ್ಟು ದೊಡ್ಡ ಅನುಯಾಯಿಗಳ ಸಮೂಹವನ್ನು ದೊರಕಿಸಿ ಕೊಟ್ಟಿರುವುದು, ವಾಸ್ತವದಲ್ಲಿ, ಅವನ ಉದಾತ್ತವಾದ ಉಪದೇಶಗಳೇ. ಪವಾಡಗಳಿಗಿಂತ ಸತ್ಯದ ಮೇಲೆ ನಮ್ಮ ದೃಷ್ಟಿಯನ್ನು ನೆಟ್ಟಿರಬೇಕು. ಅದೇ ನಮ್ಮ ಉದ್ದೇಶಕ್ಕೆ ಅತ್ಯುತ್ತಮವಾದುದು. ಪವಾಡಗಳು ತೀರ ಕ್ಷುಲ್ಲಕ ವಿಷಯಗಳು. ಅವುಗಳನ್ನು ಇನ್ನೂ ಕಡಿಮೆ ಮಟ್ಟದ ಸಿದ್ಧಿ, ಕೌಶಲಗಳುಳ್ಳವನೂ ಪ್ರದರ್ಶಿಸಬಹುದು. ಪವಾಡಗಳು ಒಬ್ಬ ಸಂತನ ಅಥವಾ ಯೋಗಿಯ ಒರೆಗಲ್ಲಾಗದು. ಏತದ್ವಿರುದ್ಧವಾಗಿ, ಚಾಣಾಕ್ಷರಾದ ಗುರುಗಳು ದುರ್ಬಲರೂ ಮತ್ತು ಮುಗ್ಧರೂ ಆದ ಜನರನ್ನು ತಮ್ಮ ಗುರುತ್ವದ ಬಲೆಗೆ ಎಳೆದುಕೊಳ್ಳಲು, ಬುದ್ಧಿಪೂರ್ವಕ ಮಾಡುವ ಮೋಸವೇ ಸರಿ. ಅಂತಿಮ ಆಯ್ಕೆಯ ತೀರ್ಮಾನ ತೆಗೆದುಕೊಳ್ಳುವ ಮುನ್ನ, ಆತನ (ಗುರುವಿನ) ಯೋಗ್ಯತೆ ಮತ್ತು ಶಕ್ತಿಗಳ ಬಗ್ಗೆ, ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ಆತನ ಪ್ರಾಯೋಗಿಕ ಸಿದ್ಧಿಗಳ ಬಗ್ಗೆ ಸಂಪೂರ್ಣ ಮನದಟ್ಟು ಮಾಡಿಕೊಳ್ಳಬೇಕು. ಇದಕ್ಕೆ ಅವರೊಡನೆ ಸಂತತ ಸಹವಾಸ ಬೇಕು. ಆಗಲೇ, ಪ್ರಾಯೋಗಿಕ ಅನುಭವ ಮತ್ತು ಅನಿಸಿಕೆಗಳ ಮೂಲಕ ನಿರ್ಣಯಕ್ಕೆ ಬರಬಹುದು. ಹೀಗೆ ಮನದಟ್ಟು ಮಾಡಿಕೊಂಡ ಮೇಲೆ, ಆತನ ಮೇಲೆ ಪೂರ್ಣ ವಿಶ್ವಾಸದಿಂದ ಭರವಸೆಯಿಡಬೇಕು, ಮತ್ತು, ದೃಢವಾಗಿ ಅವನನ್ನು ಅವಲಂಬಿಸಬೇಕು. ಸಾಧನೆಯ ಯಶಸ್ಸಿಗೆ ಇದು ಅಗತ್ಯವಾದುದು.

ಅಗತ್ಯವಿರಬಹುದಾದ ಯಾರಿಗಾದರೂ ಸಹಾಯ ಮಾಡಲು ನನ್ನ ಹೃದಯ ಸದಾ ಸಿದ್ಧವಾಗಿದೆ. ಮಾನವ ಜಾತಿಯ ನಮ್ರ ಸೇವಕನಂತೆ ನಾನು ಈ ಕೆಲಸವನ್ನು ಕೈಗೊಳ್ಳುತ್ತೇನೆ. ತಮ್ಮ ಕಾಲದಲ್ಲಿ, ಯಜಮಾನನಂತೆ ಕೆಲಸ ಮಾಡಿದ, ಮಾಡುತ್ತಿರುವ ಗುರುಗಳು ಇರುತ್ತಾರೆ ಮತ್ತು ಇದ್ದಾರೆ. ಆದರೆ ನಾನು ಸಾಮಾನ್ಯವಾಗಿ ಜನರ ಹಿತಕ್ಕಾಗಿ ಒಬ್ಬ ಸೇವಕನಂತೆ ಇದ್ದು ಕೆಲಸ ಮಾಡಲು ಬಯಸುತ್ತೇನೆ. ನಿಮಗೆ ಹೇಳಿದಂತೆ ಮಾಡಿರಿ ಮತ್ತು ನಿಮ್ಮ ದೈನಂದಿನ ಪ್ರಗತಿಯನ್ನೂ, ಮತ್ತು ತೊಂದರೆಗಳೇನಾದರೂ ಇದ್ದರೆ ಅವನ್ನೂ ತಿಳಿಸುತ್ತ ಇರಿ. ನಿರಂತರ ಸ್ಮರಣೆಯೊಂದಿಗೆ ಪಟ್ಟು ಹಿಡಿದು ನೀವು ಮುಂದುವರಿದರೆ ನೀವು ಬಹು ಸುಲಭವಾಗಿ ಗುರಿಯನ್ನು ಮುಟ್ಟಬಲ್ಲಿರೆಂದು ನಾನು ಭರವಸೆ ಕೊಡಬಲ್ಲೆ.

ಪಂಡಿತರಾದ ಧರ್ಮ ಗುರುಗಳು ಸಾಮಾನ್ಯವಾಗಿ ದೇವ-ದೇವತೆಗಳನ್ನು ಪೂಜಿಸಲು ಪ್ರೋತ್ಸಾಹಿಸುತ್ತಾರೆ. ಅಂತಿಮ ಬಿಂದುವಿನವರೆಗೆ ಮಾರ್ಗಕ್ರಮಣವನ್ನು ಪೂರೈಸಿದವನೊಬ್ಬನೇ ಯಶಸ್ವಿಯಾಗಿ ಮಾರ್ಗದರ್ಶನ ನೀಡಬಲ್ಲನು. ವಿದ್ವದ್ಗುರುಗಳು ಬಹುತೇಕ, ರಸ್ತೆಯು ಎಲ್ಲಿಗೆ ಕೊಂಡೊಯ್ಯುವುದನ್ನು ತಿಳಿಸುವ ಕೈಮರಗಳಂತೆ ಇರುತ್ತಾರೆ. ಅವರಿಂದಾಗುವ ಪ್ರಯೋಜನವು ಅಷ್ಟೇ ಸರಿ. ಭೌತಿಕತೆಯಿಂದ ಬಿಡುಗಡೆಯಾಗುವುದನ್ನೇ ಗುರಿಯಾಗಿಟ್ಟುಕೊಂಡವನೋರ್ವನು ಭೌತಿಕ ರೂಪಗಳನ್ನೂ ಸ್ಥೂಲ ಕಲ್ಪನೆಗಳನ್ನೂ ಆಶ್ರಯಿಸುವುದೆಂದರೆ ಬಹಳ ವಿಚಿತ್ರವೇ ಸರಿ.

'ಮಹಾತ್ಮ' ಶಬ್ದದ ವ್ಯಾಖ್ಯೆಯನ್ನು ಅನೇಕ ರೀತಿಗಳಲ್ಲಿ ಕೊಡಲಾಗಿದೆ : ಬಹುಶಃ ಅದಕ್ಕೆ ಸಕಾರಣ ಆಧಾರವಿಲ್ಲದೆ ಇಲ್ಲ. ಆ ಶಬ್ದಕ್ಕೆ ನಾನು ಕೊಡುವ ವ್ಯಾಖ್ಯೆ 'ವ್ಯಕ್ತಿತ್ವರಹಿತ ವ್ಯಕ್ತಿ' ಎಂದು. ಅದು ವಿಲಕ್ಷಣವಾಗಿ ತೋರುವುದಾದರೂ ಅರ್ಥವತ್ತಾಗಿದೆ. ಅಧ್ಯಾತ್ಮದಿಂದ ದೂರವಿರುವವನಿಗೂ ಅನ್ವಯಿಸುವಂತೆ ಅದನ್ನು ಅರ್ಥೈಸಬಹುದು. ಆದರೆ ಅದು ಅಧ್ಯಾತ್ಮವನ್ನು ಬಯಸುವವರಿಗೆ ಒಪ್ಪಿಗೆಯಾಗದು. ಆದರೆ ಅದರ ನಿಜವಾದ ಅಂತರರ್ಥವನ್ನು ನಾನು ವಿವರಿಸುವಷ್ಟು ಆಳಕ್ಕೆ ಹೋದರೆ, ಅದು ಗ್ರಹಿಕೆಗೆ ನಿಲಕದು ಎಂಬ ಅಳುಕು ನನಗಿದೆ. ಆದ್ದರಿಂದ ಆ ವಿಷಯವನ್ನು ಇಷ್ಟಕ್ಕೇ ಕೈಬಿಡುತ್ತೇನೆ. ರಾಜನ ವೇಷಭೂಷಣಗಳಷ್ಟೇ ಓರ್ವನನ್ನು ರಾಜನನ್ನಾಗಿ ಮಾಡುವುದಿಲ್ಲವೆಂಬುದು ನಮಗೆ ಗೊತ್ತು. ಅಂತೆಯೇ ಬಾಹ್ಯ ರೂಪ ಮತ್ತು ವೇಷಗಳೇ ಓರ್ವನನ್ನು ಸಂತನನ್ನಾಗಿ ಅಥವಾ ಯೋಗಿಯನ್ನಾಗಿ ಮಾಡಲಾರವು. ಬಾಹ್ಯ ಲಕ್ಷಣಗಳು ಅಂತರ್ಹೃದಯದ ಖಚಿತ ಸೂಚಕಗಳಲ್ಲ.

ಆಧುನಿಕ ಗುರುಗಳನ್ನು, ಅನುಕೂಲಕ್ಕೆಂಬಂತೆ, ಈ ಕೆಳಗೆ ಹೇಳಿದಂತೆ ವರ್ಗೀಕರಿಸಬಹುದು :

೧. **ಕಪಟಿಗಳು** : ಮರಗಳು, ಪ್ರಾಣಿಗಳು, ಕೀಟಗಳು, ರೋಗಗಳು, ದೆವ್ವಗಳು ಮತ್ತು ದೇಹ ಬಿಟ್ಟ ಆತ್ಮಗಳು ಇವುಗಳನ್ನು ಪೂಜೆ ಮಾಡುತ್ತ, ಅದನ್ನೇ ಇತರರಿಗೂ ಬೋಧಿಸುತ್ತ ಇರುವವರು.

೨. **ಪುಸ್ತಕ ಕೀಟಗಳು** : ತಾವು ಪುಸ್ತಕ ಓದಿ ತಿಳಿದ ಪದ್ಧತಿಗಳನ್ನೂ, ಅನುಷ್ಠಾನ ಕ್ರಮಗಳನ್ನೂ ಇತರರಿಗೆ ಹೇಳುವವರು.

೩. **ಸಾಧಕ ಗುರುಗಳು** : ಗುಣಾವಗುಣಗಳನ್ನು ಗಣಿಸದೆ, ತಾವು ಮಾಡುವ ಅಥವಾ ಮಾಡಿದುದನ್ನೇ ಇತರರಿಗೆ ಉಪದೇಶ ಮಾಡುವವರು.

೪. **ಅಂತಃಸ್ಫುರಣೆಯುಳ್ಳ ಗುರುಗಳು** : (Inspired Teachers) ತಮ್ಮ ಅಂತಃಸ್ಫುರಣೆಯ ಆಧಾರದ ಮೇಲೆ ಜನರಿಗೆ ಮಾರ್ಗದರ್ಶನ ಮಾಡುವವರು.

೫. **ಅಂತಃಸ್ಫುರಣೆಯುಳ್ಳ, ಅನುಭವ ಪಡೆದ ಗುರುಗಳು** : ಉನ್ನತವಾದ ಅಂತಃಸ್ಫುರಣೆಯ ಸಹಾಯ ಪಡೆದ ಮತ್ತು ಸ್ವಾನುಭವದ ಆಧಾರದ ಮೇಲೆ ಮಾರ್ಗದರ್ಶನ ಮಾಡುವವರು.

ಇದೇ ರೀತಿಯಲ್ಲಿ ಶಿಷ್ಯರನ್ನೂ ಈ ಕೆಳಗೆ ತೋರಿಸಿದಂತೆ ವರ್ಗೀಕರಿಸಬಹುದು :

೧. **ಸ್ವಾರ್ಥಿಗಳು** : ತಮ್ಮ ಐಂದ್ರಿಯಕ ಬಯಕೆಗಳನ್ನು ನೆರವೇರಿಸಿಕೊಳ್ಳಲು ಸಾಧನೆಯನ್ನು ಕೈಗೊಳ್ಳುವವರು.

೨. **ಕಾಲಕ್ಷೇಪಕರು** : ಸಾಧನೆಯನ್ನು ಒಂದು ವಿನೋದ ಕ್ರೀಡೆಯೆಂದು ಕೈಗೊಳ್ಳುವವರು.

೩. **ಅನುಯಾಯಿಗಳು** : ಗುರುವಿನ ನಿರ್ದೇಶನಗಳನ್ನು ಅನುಸರಿಸಲು ಪ್ರಯತ್ನಿಸುವವರು.

೪. **ಶ್ರದ್ಧಾವಂತ ಶಿಷ್ಯರು** : ಗುರುವಿನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಅವನನ್ನು ಅನುಸರಿಸಲು ಪ್ರಯತ್ನಿಸುವವರು.

೫. **ಭಕ್ತಿ–ಶ್ರದ್ಧಾ ಸಂಪನ್ನ ಶಿಷ್ಯರು** : ಗುರುವಿನ (ಅನುಗ್ರಹ) ದೃಷ್ಟಿಗೆ ಕೇಂದ್ರಗಳಾಗಿ ಸಲ್ಲುವವರು.

ತಮ್ಮ ಆಧ್ಯಾತ್ಮಿಕ ಲಾಭದ ಅಭೀಪ್ಸೆಯನ್ನು ಪೂರೈಸಲು ಒಬ್ಬ ಗುರುವನ್ನು ಪಡೆಯುವುದು ಅತಿ ಅಗತ್ಯವೆಂದು ಪ್ರತಿಯೊಬ್ಬ ಶ್ರದ್ಧಾವಂತ ಹಿಂದುವೂ ನಂಬುವನಾದರೂ, ಈಗಿನ ಕಾಲದಲ್ಲಿ ದುರ್ದೈವದಿಂದ ಯೋಗ್ಯ ಗುರುವಿನ ಆಯ್ಕೆಯು ಅಲಕ್ಷಿಸಲ್ಪಟ್ಟಿದೆ. ಸಾಮಾನ್ಯವಾಗಿ ಯಾರನ್ನಾದರೂ, ಅವನ ಯೋಗ್ಯತೆ

ಮತ್ತು ಸಾಮರ್ಥ್ಯಗಳನ್ನು ಗಣಿಸದೆ, ಈ ಉದ್ದೇಶಕ್ಕೆ ಆರಿಸಿಕೊಳ್ಳುತ್ತಾರೆ. ಅಜ್ಞಾನಿ ಜನತೆಯನ್ನು ಆಕರ್ಷಿಸಲು ತಥಾಕಥಿತ ಗುರುಗಳು ಪ್ರದರ್ಶಿಸುವ ಪವಾಡಗಳಿಂದಲೋ ಅಥವಾ ಯಾರೊಬ್ಬರ ಮನವೊಲಿಕೆಯ ಯತ್ನದಿಂದಲೂ ಬಹುಮಟ್ಟಿಗೆ ಅವರು ಹಾಗೆ ಮಾಡಲು ಪ್ರೇರೇಪಿಸಲ್ಪಟ್ಟಿರುತ್ತಾರೆ. ಶಿಷ್ಯಾರ್ಥಿಗಳಿಗೆ ಏನೂ ಕೊರತೆಯಿಲ್ಲ; ಅವರು ಮರದ ಎಲೆಗಳಷ್ಟು ಅಸಂಖ್ಯಾತರಾಗಿದ್ದಾರೆ. ಅವರಲ್ಲಿ ಬಹು ಮಂದಿಗೆ, ಗುರು ಪದವಿಯು ಅಪಾರ ಆದಾಯ ತರುವ ಲಾಭದಾಯಕ ವೃತ್ತಿಯಾಗಿದೆ. ಬೇರಾವ ರೀತಿಯಿಂದಲೂ ಅದನ್ನು ಅವರು ಸಂಪಾದಿಸಲಾರರು. ಅದಲ್ಲದೆ, ಅವರು ತಮ್ಮ ಶಿಷ್ಯರಿಂದ ಉನ್ನತ ಗೌರವವನ್ನು ಮತ್ತು ವೈಯಕ್ತಿಕ ಸೇವೆಯನ್ನು ಅಧಿಕಾರಪೂರ್ವಕ ಪಡೆಯುತ್ತಾರೆ. ಈ ಸ್ವಾರ್ಥಿಗಳಾದ ವೃತ್ತಿಪರರ ಬಲೆಗೆ ಅಜ್ಞಾನಿ ಜನತೆ ಸುಲಭವಾಗಿ ಬಲಿ ಬೀಳುತ್ತದೆ. ಒಂದು ಪುಟ್ಟ ಪವಾಡ, ಅಥವಾ ಆಕರ್ಷಣೀಯವಾದ ಏನಾದರೊಂದರ ಪ್ರದರ್ಶನ ಇಂಥ ನೂರಾರು ಅಜ್ಞಾನಿ ಕುರಿಗಳನ್ನು ತಮ್ಮ ಗುರುತ್ವದ ತೆಕ್ಕೆಗೆ ಸೆಳೆಯಲು ಸಾಕು. ತಮ್ಮನ್ನು ಅಸಂತುಷ್ಟಗೊಳಿಸುವವರಿಗೆ ಅವರು ತೋರಿಸುವ ಒಂದು ಶಾಪದ ಭಯ, ಸಾವಿರಾರು ಜನರನ್ನು ದೀನ ಶರಣಾಗತಿಗೆ ತಳ್ಳಬಹುದು. ಇಷ್ಟೇ ಅಲ್ಲ, ತಮ್ಮ ವೃತ್ತಿಯ ಏಕಸ್ವಾಮ್ಯವನ್ನು ದೃಢಪಡಿಸಿಕೊಳ್ಳಲು, ಗೃಹಸ್ಥನಾಗಲಿ, ಸಂನ್ಯಾಸಿಯಾಗಲಿ, ತಮ್ಮ ವಿಶಿಷ್ಟ ಜಾತಿಯವನು ಮಾತ್ರವೇ ಗುರುವಾಗುವ ಹಕ್ಕು ಉಳ್ಳವನೆಂದು ಸಾರುತ್ತಾರೆ. ತಮ್ಮ ಸಾಮರ್ಥ್ಯ ಯೋಗ್ಯತೆಗಳು ಏನೇ ಇರಲಿ, ತಮ್ಮ ಜನ್ಮಸಿದ್ಧ ಹಕ್ಕಿನಿಂದಲೇ ತಾವು ಜಗದ್ಗುರುಗಳೆಂದು ಸಾಧಿಸುತ್ತಾರೆ. ಮಹಾತ್ಮರೆಂದು, ತಮಗೆ ತಾವೇ ಹೇಳಿಕೊಳ್ಳುತ್ತಿರುವ ಸಂನ್ಯಾಸಿಗಳನ್ನು ಈ ಕಾಲದಲ್ಲಿ ನೀವು ಗುಂಪು ಗುಂಪಾಗಿ ಕಾಣಬಲ್ಲಿರಿ, ತಮ್ಮ ಸ್ವಾರ್ಥ ಸಾಧನೆಗೋಸ್ಕರ ಅಜ್ಞರನ್ನು ವಂಚಿಸುತ್ತ, ಯಾವ ದಂಡ ಭೀತಿಯಿಲ್ಲದೆ ತಿರುಗಾಡುತ್ತ, ದೇಶಕ್ಕೂ ಧರ್ಮಕ್ಕೂ ನಾಚಿಕೆಯನ್ನುಂಟು ಮಾಡುವ ಈ ವೃತ್ತಿಶೀಲ ವಂಚಕರು ಕಾಣ ಸಿಗುವುದು ಶೋಚನೀಯವಲ್ಲವೆ?

ಅಂಥವರಿಂದ ಎಂಥ ಅನಾಹುತ ಸಂಭವಿಸಿದೆಯೆಂದು ನೋಡಲು ಜನತೆ ಕಣ್ಣು ತೆರೆಯುವ ಕಾಲ ಸನ್ನಿಹಿತವಾಗಿದೆ. ಗುರುತ್ವದ ಅಧಿಕಾರವು ವಿಶಿಷ್ಟ ಸವಲತ್ತು ಪಡೆದ ವರ್ಗದ ಏಕಸ್ವಾಮ್ಯವೆಂಬುದು ಅರ್ಥಹೀನವಾದುದು, ಮತ್ತು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು 'ಗುರು'ಗಳೆಂದೆನಿಸಿಕೊಂಡವರು ಪ್ರಚಾರ ಮಾಡಿದುದು. ಶಿಷ್ಯನಾದವನು ತನ್ನ ಗುರುವಿನ ಸಂಬಂಧವನ್ನು ಯಾವ ಸಂನಿವೇಶದಲ್ಲಿಯೇ ಆಗಲಿ ಕಿತ್ತೊಗೆಯಲಾರನೆಂಬ, ಜನಜನಿತವಾಗಿ ನಂಬಲಾದ ನಿಯಮವು, ತಮ್ಮ ಸ್ಥಾನ ಭದ್ರತೆಗೋಸ್ಕರ ಠಕ್ಕ ಗುರುಗಳು ತಾವೇ ಅನ್ವಯಿಸಿದ ಕುಯುಕ್ತಿಯ ತಂತ್ರವಾಗಿದೆ. ಅದು ಮೋಸವಲ್ಲದೆ ಬೇರೆ ಅಲ್ಲ. ಅನೇಕ ಆಧುನಿಕ ವೃತ್ತಿಶೀಲ ಗುರುಗಳಿಂದ. ಶಿಷ್ಯನಿಗೆ 'ದೀಕ್ಷೆ' ಕೊಡುವ ಪರಿಪಾಠವೂ ದುರುಪಯೋಗಕ್ಕೆ ಒಳಗಾಗಿದೆ; ಅವರಿಗೆ ಅದರ (ದೀಕ್ಷೆಯ) ನಿಜವಾದ ಮರ್ಮದ ಅರಿವಿಲ್ಲ.

ಗುರುವಾಗಿ ಅವರು ಮಾಡುವ ಒಂದೇ ಒಂದು ಕೆಲಸವೆಂದರೆ, ದೀಕ್ಷಾ ಕಾಲದಲ್ಲಿ ಶಿಷ್ಯನ ಕಿವಿಯಲ್ಲಿ ಕೆಲವು ರಹಸ್ಯ ಮಂತ್ರಗಳನ್ನು ಉಸುರಿ, ಪೂಜಾ ರೂಪದಲ್ಲಿ ಕೆಲವು ಆಡಂಬರದ ಅನುಷ್ಠಾನಗಳನ್ನು ಅನುಸರಿಸುವಂತೆ ಹೇಳುವುದು. ಶಿಷ್ಯನ ಬಗೆಗಿನ ಅವರ ಕರ್ತವ್ಯ ಅಲ್ಲಿಗೆ ಮುಗಿದು ಹೋಗುತ್ತದೆ; ಪ್ರತಿ ವರ್ಷವೂ ಅವನಿಗೆ ದರ್ಶನ ಕೊಡುವುದು ಮತ್ತು ವಾರ್ಷಿಕ ಕಪ್ಪ ಕಾಣಿಕೆಯನ್ನು ವಸೂಲು ಮಾಡುವುದನ್ನು ಹೊರತುಪಡಿಸಿದರೆ, ಶಿಷ್ಯನ ಪ್ರಗತಿಗಾಗಿ ಅವರು ಮತ್ತೇನೂ ಮಾಡುವುದಿಲ್ಲ. ನಿಜವಾದ ಶ್ರದ್ಧೆ ಶಿಷ್ಯನಲ್ಲಿ ಇದ್ದಾಗ ಮತ್ತು ಅವನ ಹೃದಯದಲ್ಲಿ ದೈವೀ ಪ್ರೇಮವು ಪ್ರಧಾನವಾಗಿ ಬೇರೂರಿದಾಗ ಮಾತ್ರ ಶಿಷ್ಯನಿಗೆ ವಿಧಿಪೂರ್ವಕ ದೀಕ್ಷೆ ಕೊಡಬೇಕು. 'ದೀಕ್ಷೆ' ಎಂದರೆ ಶಿಷ್ಯನ ಸಂಬಂಧದ ಕೊಂಡಿಯು ಪರಾತ್ಪರ ಶಕ್ತಿಯೊಡನೆ ಜೋಡಿಸಲ್ಪಟ್ಟಿದೆಯೆಂದು ಅರ್ಥ. ಆಗ ಶಿಷ್ಯನು ತನ್ನೊಳಗೆ ಹೀರಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಂಡ ಪ್ರಮಾಣದಲ್ಲಿ ಆಧ್ಯಾತ್ಮಿಕ ಶಕ್ತಿಯು ಅವನೆಡೆಗೆ ತನ್ನಷ್ಟಕ್ಕೆ ತಾನೇ ಪ್ರವಹಿಸಲು ತೊಡಗುತ್ತದೆ. ಈ ಯೋಗ್ಯ ದೃಢ ಸಂಬಂಧವನ್ನು ಸ್ಥಾಪಿಸುವುದು ಗುರುವಿನ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಅವಲಂಬಿಸಿದೆ; ಅದಕ್ಕೆ ಅತ್ಯುನ್ನತ ಮಟ್ಟದ ಯೋಗ್ಯತೆಯು ಆವಶ್ಯಕ. ಒಮ್ಮೆ ಈ ದೃಢ ಸಂಬಂಧ ಸ್ಥಾಪಿತವಾಯಿತೆಂದರೆ, ಶಿಷ್ಯನು ಮುಕ್ತಿ ಸಂಪಾದಿಸುವವರೆಗೂ ಅದು ಮುಂದುವರಿದಿರುತ್ತದೆ. ಇಂಥ ಸಂದರ್ಭದಲ್ಲಿ ಮುಕ್ತಿಯೆಂಬುದು ಅನೇಕ ಜನ್ಮಗಳ ನಂತರ ಸಿದ್ಧಿಸುವ ದೂರದ ವಿಷಯವಾಗಿ ಉಳಿಯುವುದಿಲ್ಲ. ಮೇಲೆ ಹೇಳಿದಂತೆ, ಉಚ್ಚ ಯೋಗ್ಯತೆಯುಳ್ಳ ಗುರುವಿನಿಂದ ಶಿಷ್ಯನು ನಿಜವಾದ ಅರ್ಥದಲ್ಲಿ 'ದೀಕ್ಷೆ' ಹೊಂದಿದ್ದಾದರೆ, ಅದೆಂದಿಗೂ ಕಡಿದು ಹೋಗುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ತಮ್ಮ ಸ್ವಾರ್ಥೋದ್ದೇಶಕ್ಕೋಸ್ಕರ ನಕಲಿ ದೀಕ್ಷೆ ಕೊಡುವ ವೃತ್ತಿಶೀಲ ಗುರುಗಳಿಗೆ ಅದು (ಸಂಬಂಧ ಭಂಗವು) ಒಂದು ನಿರಂತರ ಕಳವಳವಾಗಿರುತ್ತದೆ. ಆದ್ದರಿಂದ, ಶಿಷ್ಯನನ್ನು ಶಾಶ್ವತವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು, ತಮ್ಮನ್ನು ಬಿಟ್ಟು ಹೋಗುವ ಯೋಚನೆಯನ್ನು ಎಂದಾದರೂ ಮಾಡಿದರೆ ನರಕದ ಸಂಕಟಗಳಿಗೆ ಭಾಜನನಾಗುವನೆಂಬುದು ದೈವಾಜ್ಞೆ ಎಂದು ಅವರು ಘೋಷಿಸುತ್ತಾರೆ. ಅಜ್ಞರು, ತಮ್ಮ ಗುರುಗಳಿಗೆ ಅಸಂತೋಷವುಂಟು ಮಾಡಬಹುದಾದ ಏನನ್ನಾದರೂ ತಾವು ಮಾಡುವೆವೆಂಬ ಯೋಚನೆ ಬಂದ ಮಾತ್ರಕ್ಕೆ ಭಯಕಂಪಿತರಾಗಿ, ಅಂಥ ಘೋಷಣೆಯನ್ನು ವೇದವಾಕ್ಯವೆಂದು ಸ್ವೀಕರಿಸುತ್ತಾರೆ. ಹೀಗೆ, ಅಂಥ ವಿಧೇಯತೆಯಲ್ಲಿ ಅವರ ಎಲ್ಲ ಅಮಾನವೀಯ ಕೃತ್ಯಗಳನ್ನು ತೆಪ್ಪಗೆ ಸಹಿಸಿಕೊಳ್ಳಲು ಹೆಣಗಾಡುತ್ತಾರೆ. ಶಾಸ್ತ್ರಗಳಲ್ಲಿ ಈ ಅರ್ಥ ಕೊಡುವ ಸೂಚನೆ ಎಳ್ಳಷ್ಟಾದರೂ ಇಲ್ಲವೆಂದು ನನಗೆ ಖಾತ್ರಿ ಇದೆ. ಅದು ಈ ಧಾರ್ಮಿಕ ಗುರುಗಳ ಚತುರತೆಯಷ್ಟೆ. ತಾನು ಗುರುವಿನ ಆಯ್ಕೆಯನ್ನು ತಪ್ಪಾಗಿ ಮಾಡಿದೆನೆಂದು ಅಥವಾ ಗುರುವಿನ ಶಕ್ತಿ ಸಾಮರ್ಥ್ಯಗಳನ್ನು ತಪ್ಪಾಗಿ ನಿರ್ಣಯಿಸಿದೆನೆಂದು ಕಂಡು ಬಂದರೆ, ಯಾವುದೇ ಸಮಯದಲ್ಲಿ ಅಂಥ ಗುರುವನ್ನು ಬಿಟ್ಟು ಹೋಗುವುದು ಪ್ರತಿಯೊಬ್ಬನ ಆಜನ್ಮ

ಹಕ್ಕು ಎಂಬುದು ನನ್ನ ನಿಲುವು. ತಾನು ಈಗಾಗಲೇ ಸಂಪಾದಿಸಿರುವ ಸ್ಥಿತಿಗಿಂತ ಆಚೆಗೆ ಕರೆದೊಯ್ಯುವ ಶಕ್ತಿ ತನ್ನ ಗುರುವಿಗೆ ಇಲ್ಲವೆಂದು ಯಾವುದೇ ಹಂತದಲ್ಲಿ ಕಂಡು ಬಂದರೆ, ಅವನು ಮತ್ತೊಬ್ಬ ಗುರುವನ್ನು ಹುಡುಕಲು ಸ್ವತಂತ್ರನಿದ್ದಾನೆ. ಇದಕ್ಕೆ ಪ್ರತಿಯಾಗಿ, ಇಂಥ ಸಂದರ್ಭದಲ್ಲಿ, ಶಿಷ್ಯನ ಪ್ರಗತಿ ಕುಂಠಿತವಾಗಬಾರದೆಂದು, ತನಗಿಂತ ಹೆಚ್ಚಿನ ಯೋಗ್ಯತೆಯುಳ್ಳ ಹೆಚ್ಚಿನ ಪ್ರಗತಿ ಸಾಧಿಸಿದ ಗುರುವನ್ನು ಹುಡುಕುವಂತೆ, ಆತ್ಮಸಾಕ್ಷಿ ನಿಷ್ಠನಾದ ಗುರುವು ಶಿಷ್ಯನಿಗೆ ತಾನೇ ನಿರ್ದೇಶಿಸಬೇಕು. ಇದು ನಿಜವಾದ, ನಿಸ್ವಾರ್ಥಿಯಾದ ಗುರುವಿನ ಪವಿತ್ರ ಕರ್ತವ್ಯ. ಶಿಷ್ಯನು ಗುರುವನ್ನು ಬಿಟ್ಟು ಹೋಗಲು ಅನುಮತಿ ಕೇಳಿದಾಗ, ಗುರುವು ತನ್ನ ಸ್ವಾರ್ಥದ ಉದ್ದೇಶಕ್ಕೋಸ್ಕರ ಹೇಗೋ ನಿರಾಕರಿಸಿದರೆ, ಆಗ ಶಿಷ್ಯನು ತತ್‌ಕ್ಷಣವೇ ಅವನನ್ನು ಬಿಟ್ಟು, ಬೇರೊಬ್ಬ ಗುರುವನ್ನು ಹುಡುಕಲು ಸ್ವತಂತ್ರನಿದ್ದಾನೆ. ಯಾವ ನೈತಿಕ, ಅಥವಾ ಧಾರ್ಮಿಕ ನಿಯಮವೂ ಅವನು ಹಾಗೆ ಮಾಡುವುದನ್ನು ನಿಷೇಧಿಸಲಾರದು.

ತಮ್ಮ ಶಾಸ್ತ್ರಗಳ ಮತ್ತಿತರ ಧರ್ಮ ಗ್ರಂಥಗಳ ಜ್ಞಾನದ ಆಧಾರದ ಮೇಲಿಂದ ಉಪದೇಶ ಮಾಡುವವರು ಗುರುವರ್ಗಗಳಲ್ಲಿ ಸ್ವಲ್ಪ ಪ್ರಗತಿ ಹೊಂದಿದವರೆಂದು ಗಣಿಸಲಾಗುತ್ತದೆ. ಅವರು ಸಂಸ್ಥೆಗಳನ್ನು ಆಶ್ರಮಗಳನ್ನೂ ಸ್ಥಾಪಿಸಿ, ಅಲ್ಲಿ ತಮ್ಮ ಅನುಯಾಯಿಗಳ ಮಧ್ಯದಲ್ಲಿ ರಾಜ ಪದವಿಯನ್ನು ಅನುಭವಿಸುತ್ತಾರೆ. ದೊಡ್ಡ ದೊಡ್ಡ ಸಭೆಗಳಲ್ಲಿ ಏನು ಮಾಡಬೇಕು ಏನು ಮಾಡಬಾರದು ಎಂದು ಜನರಿಗೆ ಹೇಳುತ್ತಾರೆ. ಮಾಯೆ, ಜೀವ, ಮತ್ತು ಬ್ರಹ್ಮ ಮುಂತಾದವುಗಳನ್ನು ಕುರಿತ ಸಮಸ್ಯೆಗಳನ್ನು ವಿವರಿಸುತ್ತಾರೆ. ಜನರು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಅವರನ್ನು ಮುತ್ತುತ್ತಾರೆ; ಅವರ ಉನ್ನತ ವಿಚಾರಗಳನ್ನು, ವಿಸ್ತಾರವಾದ ಜ್ಞಾನವನ್ನು ಶ್ಲಾಘಿಸುತ್ತಾರೆ. ಅವರನ್ನು ಮಹಾತ್ಮರೆಂದು ಅಥವಾ ಸಂತರೆಂದು ಗೌರವಿಸುತ್ತಾರೆ. ಅವರು ಅನೇಕ ಜಟಿಲ ಪ್ರಶ್ನೆಗಳನ್ನು ಕೇಳುತ್ತಾರೆ. ಅವರು ತಮ್ಮ ಶಾಸ್ತ್ರ ಜ್ಞಾನದಿಂದ ಅದನ್ನು ಉತ್ತರಿಸಲು ಶಕ್ತರಾದರೆ ಅವರ 'ಮಹಾತ್ಮ'ರೆಂಬ ಹಿರಿಮೆ ಜನರ ಮನಸ್ಸಿನಲ್ಲಿ ಸುಸ್ಥಾಪಿತವಾಗುತ್ತದೆ ಹಾಗೂ ಅವರನ್ನು ಗುರುಗಳೆಂದು ಒಪ್ಪಿಕೊಳ್ಳಲು ಜನರು ಪ್ರೇರೇಪಿತರಾಗುತ್ತಾರೆ. ಆದರೆ ಜನರು ಅವರ ವಿದ್ವತ್ತೆಯನ್ನು ಒರೆಗೆ ಹಚ್ಚಿದಂತಾಯಿತೇ ಹೊರತು ಅವರ ನಿಜವಾದ ಯೋಗ್ಯತೆಯನ್ನಲ್ಲ. ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುವುದು ಅವರ ವಿದ್ಯೆ ಅಥವಾ ಶಾಸ್ತ್ರಜ್ಞಾನವಲ್ಲ. ನಿಜವಾದ ಅರ್ಥದ ಸಾಕ್ಷಾತ್ಕಾರವೊಂದೇ ನಿಜವಾದ ಯೋಗಿಯನ್ನು ಅಥವಾ ಸಂತನನ್ನು ಮಾಡುವುದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಬಾಹ್ಯ ವೇಷ, ವಿದ್ಯೆ ಅಥವಾ ವಾಗ್ಮಿತೆಯಿಂದ ನಿಮ್ಮನ್ನು ಪ್ರಭಾವಿತಗೊಳಿಸಿದವನು ಪ್ರಾಯೋಗಿಕ ಸಾಧನೆಯ ದೃಷ್ಟಿಯಿಂದ ಅತಿ ಕೆಳಗಿನ ಮಟ್ಟದಲ್ಲಿರಬಹುದು. ಆದ್ದರಿಂದ, ಜ್ಞಾನವು ನಿಜವಾದ ಮಹಾತ್ಮ ಅಥವಾ ಯೋಗಿಯ ಒರೆಗಲ್ಲಾಗುವುದಿಲ್ಲ. ಅಂತೆಯೇ ನಿಜವಾದ ಮಹಾತ್ಮನ ಅಥವಾ ಸಂತನ ಪರೀಕ್ಷೆ ಸಾಕ್ಷಾತ್ಕಾರದ ಮಾರ್ಗದಲ್ಲಿಯ

ಅವನ ಅನುಭವಗಳೇ ಆಗಬಹುದು, ಹೊರತು ಪವಾಡಗಳಲ್ಲ. ದೊಡ್ಡ ವ್ಯಕ್ತಿಯೇ ಮಹಾತ್ಮನೆಂಬ ಜನಪ್ರಿಯ ಅರ್ಥವು ನನ್ನ ಮನಸ್ಸಿಗೆ ಮುಟ್ಟುವುದಿಲ್ಲ. ಮಹಾತ್ಮನೆಂದರೆ, ಸಂಪೂರ್ಣ ಆತ್ಮನಿರಸನದ ಸ್ಥಿತಿಯಲ್ಲಿ ಸದಾಕಾಲ ನೆಲೆಸಿದ್ದು, ದೊಡ್ಡತನ, ಜಂಬ, ಅಹಂಕಾರಗಳ ಭಾವನೆಯನ್ನು ಮೀರಿ ನಿಂತ, ಅತ್ಯಂತ ನಗಣ್ಯ ಅಥವಾ ಉಪೇಕ್ಷಿತ(ಕಣ್ಣಿಗೆ ಬೀಳದ) ವ್ಯಕ್ತಿಯೆಂದು ನಾನು ವ್ಯಾಖ್ಯೆ ಮಾಡಿಯೇನು.

ಜ್ಞಾನವು ಸಾಕ್ಷಾತ್ಕಾರದ ಪೂರ್ವಸ್ಥಿತಿಯಾದುದರಿಂದ ಅದು ಅಗತ್ಯ ಮತ್ತು ಅಪರಿಹಾರ್ಯವೆಂಬ ಅಭಿಮತ ಹೊಂದಿದವರೂ ಕೆಲವರಿದ್ದಾರೆ. ನಾನು ಅವರೊಡನೆ ಸಮ್ಮತಿಸುವುದಿಲ್ಲ, ಯಾಕೆಂದರೆ, ಜ್ಞಾನವು ಮಸ್ತಿಷ್ಕದ ಸಿದ್ಧಿ, ಆದರೆ ಸಾಕ್ಷಾತ್ಕಾರವು ಆತ್ಮದ ಜಾಗೃತಿ, ಆದುದರಿಂದ ಜ್ಞಾನದ ಕ್ಷೇತ್ರವನ್ನೂ ಮೀರಿದುದು. ಹಾಗಿರುವುದರಿಂದ, ಧಾರ್ಮಿಕ ಸಿದ್ಧಾಂತಗಳ ಸಿಂಧುತ್ವವನ್ನು ವಿವರಿಸಬಲ್ಲವನು ಮತ್ತು ವಿಧಿ–ನಿಷೇಧಗಳನ್ನು ಆದೇಶಿಸಬಲ್ಲವನು, ಅಷ್ಟಕ್ಕೇ, ನಿಜವಾದ ಗುರುವೆಂದೆನಿಸಲಾರನು. ನಮಗೆ ಗುರುವಿನಿಂದ ಬೇಕಾದುದು ಆತ್ಮವನ್ನು ಜಾಗೃತಗೊಳಿಸಬಲ್ಲ ನಿಜವಾದ ಶಕ್ತಿಯ ಪ್ರೇರಣೆ ಮತ್ತು ಸಾಕ್ಷಾತ್ಕಾರದ ಮಾರ್ಗದಲ್ಲಿ ನಾವು ಕ್ರಮಣ ಮಾಡುವಾಗ ಆತನ ನೇರವಾದ ನೆರವಿನ ಆಧಾರ. ನಾವು ಯಶಸ್ಸಿಗೆ ಗುರಿಯಿಡುವುದಾದರೆ, ಅಂಥ ಮನುಷ್ಯನನ್ನು (ಗುರುವನ್ನು) ನಾವು ಹುಡುಕಬೇಕು. ಯಾರನ್ನಾದರೂ ನಮ್ಮ ಗುರುವೆಂದು ನಿರ್ಣಯಿಸಬೇಕಾದರೆ, ನಾವು ಅವನ ವಿದ್ವತ್ತೆಯನ್ನಲ್ಲ, ಅದರ ಬದಲಿಗೆ, ಸಾಕ್ಷಾತ್ಕಾರದ ಕ್ಷೇತ್ರದಲ್ಲಿ ಅವನ ಪ್ರಾಯೋಗಿಕ ಅನುಭವ, ಸಿದ್ಧಿಗಳನ್ನು ಗಣನೆಗೆ ತೆಗೆದುಕೊಳ್ಳ ತಕ್ಕದ್ದು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ತಾನು ಸ್ವತಃ ಮುಕ್ತನಾಗಿರುವವನೇ ನಿಮ್ಮನ್ನು ಶಾಶ್ವತ ಬಂಧನದಿಂದ ಬಿಡುಗಡೆ ಮಾಡಬಲ್ಲನು. ಸಂಸ್ಕಾರಗಳಿಂದ, ಮಾಯೆ, ಅಹಂಕಾರಗಳಿಂದ ನಿಮ್ಮ ಗುರು ಬಿಡುಗಡೆ ಹೊಂದಿರದಿದ್ದರೆ, ನಿಮ್ಮನ್ನು ಆತನು ಬಂಧನಗಳಿಂದ ಬಿಡುಗಡೆ ಮಾಡುವುದು ಸಾಧ್ಯವಿಲ್ಲ.

## ಪ್ರಾಣಾಹುತಿ

ನನ್ನ ಗುರುಗಳ ಕೃಪೆಯಿಂದ ನಾನು ಒಂದು ದೊಡ್ಡ ರಹಸ್ಯವನ್ನು ಪ್ರಕಾಶಕ್ಕೆ ತರುವ ಪ್ರಯತ್ನ ಮಾಡುತ್ತೇನೆ; ಆ ರಹಸ್ಯ ಸಾಮಾನ್ಯ ಜನರಿಗೆ ಗೊತ್ತಿಲ್ಲ. ಭಗವಾನ್ ಕೃಷ್ಣ, ಸ್ವಾಮಿ ವಿವೇಕಾನಂದ, ಅಥವಾ ನನ್ನ ಗುರುಗಳಂಥ ಮಹಾ ವ್ಯಕ್ತಿಯೊಬ್ಬರು ಮಾನವ ಜೀವನದ ಮಾರ್ಗವನ್ನೇ ಸಂಪೂರ್ಣ ಬದಲಾಯಿಸಿದಾಗ, ಒಂದು ಮಹದಾಶ್ಚರ್ಯವೆನಿಸುತ್ತದೆ. ತನ್ನ ಸಾಮರ್ಥ್ಯದಿಂದ ನಮ್ಮನ್ನು ಮತ್ತೂ ಮೇಲಕ್ಕೆ ಎತ್ತಬಲ್ಲ ಗುರುವನ್ನು ಕಂಡುಕೊಳ್ಳುವುದು ಅತ್ಯಗತ್ಯ. ಈ ರಹಸ್ಯವೇ 'ಪ್ರಾಣಾಹುತಿ' ಎಂದು ಕರೆಯಲಾದ 'ಪ್ರಾಣ ಸಂವಹನ ಶಕ್ತಿ'. ಈ ಶಕ್ತಿಯು ಶುದ್ಧ ಮನಸ್ಸಿನ ಕಾಲುವೆಗಳ ಮೂಲಕ ಕೆಲಸ ಮಾಡುತ್ತದೆ. ಇಚ್ಛಾಶಕ್ತಿ (ಸಂಕಲ್ಪ ಶಕ್ತಿ)ಯ ಮೂಲಕ

ಅದನ್ನು ಪ್ರಯೋಗಿಸಲಾಗುತ್ತದೆ; ಅದರ ಪರಿಣಾಮಕಾರಿತ್ವ ಚ್ಯುತಿಯಾಗದಂಥದು. ಆಧ್ಯಾತ್ಮಿಕ ಶಿಕ್ಷಕನು ಅಭ್ಯಾಸಿಯ ಮನಸ್ಸನ್ನು ರೂಪಿಸಲು ತನ್ನ ಸ್ಂಕಲ್ಪ ಶಕ್ತಿಯನ್ನು ಪ್ರಯೋಗಿಸಿದರೆ ಅದು ಪ್ರಭಾವಶಾಲಿಯಾಗಿರುತ್ತದೆ ಮತ್ತು ಅತ್ಯುತ್ತಮ ಫಲ ನೀಡುತ್ತದೆ. ತಾವು ಕಾವಿ ಬಟ್ಟೆಯನ್ನು ಧರಿಸಿದ ಕೂಡಲೆ ಗುರುವೃತ್ತಿಯನ್ನು ಪ್ರಾರಂಭಿಸುವ ಅನೇಕ ಸ್ವಾಮಿಗಳು ತಮ್ಮ ಶಿಷ್ಯರು ತಮ್ಮ ಉಪದೇಶವನ್ನು ಆಸಕ್ತಿಯಿಂದ ಕೇಳಿದರೂ, ನಂತರ ನಾಯಿಯ ಬಾಲದಂತೆ ವಕ್ರವಾಗಿಯೇ ಇರುತ್ತಾರೆಂದು ದೂರುತ್ತಾರೆ. ಕಾರಣ ಸುಸ್ಪಷ್ಟವಿದೆ. ಒಂದೋ ಆ ಸ್ವಾಮಿ ತನ್ನ ಸಂಕಲ್ಪ ಶಕ್ತಿಯನ್ನು ಪ್ರಯೋಗಿಸುವುದಿಲ್ಲ, ಅಥವಾ ಅವನಿಗೆ ಆ ಸಾಮರ್ಥ್ಯವಿಲ್ಲ. ಮೆದುಳಿಗೆ ಕಷ್ಟಕರವಾದ ಅಭ್ಯಾಸಗಳನ್ನು ಶಿಷ್ಯರಿಗೆ ವಿಧಿಸಿ, ಅವರನ್ನು ತಮ್ಮ ಹಣೆಬರಹಕ್ಕೆ ಬಿಟ್ಟುಬಿಡುತ್ತಾರೆ. ಈ ಅಭ್ಯಾಸಗಳ ಫಲಿತಾಂಶವು ಗುರುವಿಗೂ ಗೊತ್ತಾಗುವುದಿಲ್ಲ, ಶಿಷ್ಯನೂ ತನ್ನ ವಿವೇಕವನ್ನು ಉಪಯೋಗಿಸುವ ಗೋಜಿಗೆ ಹೋಗುವುದಿಲ್ಲ. ಇದರ ಫಲವಾಗಿ, ಶಿಷ್ಯನಲ್ಲಿ ಸ್ಥೂಲತೆ ಮತ್ತು ಬೌದ್ಧಿಕ ಮೌಢ್ಯ ಉಂಟಾಗುತ್ತದೆ. ಮತ್ತು ಉಪದೇಶ ಮಾಡುವ ತಮ್ಮ ಹಕ್ಕಿನ ಅಭಿಮಾನ ಮಾತ್ರ ಹೊಂದಿ, ತಮ್ಮ ಕರ್ತವ್ಯ, ಬಾಧ್ಯತೆಗಳ ಬಗ್ಗೆ ಗಮನವಿಲ್ಲದ ಗುರುಗಳಲ್ಲಿ ಭ್ರಷ್ಟತನ, ಅಧಃಪತನ ಮತ್ತು ನೈತಿಕ ಕ್ಷುದ್ರತೆಗಳು ಬೆಳೆಯುತ್ತವೆ.

ತನ್ನನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ಬಯಸುವ ವ್ಯಕ್ತಿಯೇ ಅದಕ್ಕೆ ಕಾರಣನೇ ಹೊರತು ಗುರುವಲ್ಲ, ಗುರುವು ಹೆಸರಿಗೆ ಮಾತ್ರ ಎಂದು ಕೆಲವು ಸಂಶಯಿಗಳು ಹೇಳಬಹುದು. ಭಗವಾನ್ ಕೃಷ್ಣನಿಗೆ ಆ ಶಕ್ತಿ ಇದ್ದಿದ್ದರೆ, ಕುರುಕ್ಷೇತ್ರ ಯುದ್ಧಕ್ಕೆ ಬದಲಾಗಿ ದುರ್ಯೋಧನನ ಹೃದಯ ಪರಿವರ್ತನೆಯನ್ನೇಕೆ ಮಾಡಲಿಲ್ಲ? (ಎಂದೂ ಕೇಳಬಹುದು). ಒಬ್ಬ ಯೋಗ್ಯನನ್ನೋ, ಜಡವಸ್ತುವನ್ನೋ ಗುರುವಾಗಿ ಸ್ವೀಕರಿಸಿ ಮಹಾತ್ಮರಾದವರ ಅನೇಕ ಕಥೆಗಳನ್ನೂ ಅವರು ಉದಾಹರಿಸಬಹುದು. ಆದರೆ ಸತ್ಯವನ್ನು ಕಂಡುಕೊಳ್ಳುವಲ್ಲಿ ನಮಗೆ ಇದು ಬಾಧಕವಾಗುವುದಿಲ್ಲ; ಯಾಕೆಂದರೆ, ದೇವರ ಕಾರ್ಯರೀತಿಗಳು ಗಹನವಾಗಿವೆ. ಕೆಲವರು ತಮ್ಮ ಸ್ವಂತ ವಿಚಾರಗಳಿಂದ ಭ್ರಮೆಗೊಳಗಾಗುತ್ತಾರೆ; ಮತ್ತೆ ಕೆಲವರು ದೈವೀ ಕೃಪೆಯಿಂದ ಬೆಳಕನ್ನು ಪಡೆಯುತ್ತಾರೆ.

ಯೋಗ್ಯನಾದ ಶಿಕ್ಷಕನು, ತನ್ನ ಯೌಗಿಕ ಪ್ರಾಣಾಹುತಿ ಶಕ್ತಿಯಿಂದ ಅಭ್ಯಾಸಿಯ ಮನಸ್ಸಿನ ಹೀನ ಪ್ರವೃತ್ತಿಗಳನ್ನು ದುರ್ಬಲಗೊಳಿಸುತ್ತಾನೆ ಮತ್ತು ಅವನ ಹೃದಯದ ಅಂತರಾಳದಲ್ಲಿ ಪ್ರಕಾಶದ ಬೀಜಾರೋಪಣೆ ಮಾಡುತ್ತಾನೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಕನು, ಅನಂತ ದೈವಿಕತೆಯ ಬೆಂಬಲ ಹೊಂದಿದ ತನ್ನ ಸಂಕಲ್ಪ ಶಕ್ತಿಯನ್ನು ಉಪಯೋಗಿಸುತ್ತಾನೆ. ಒಂದು ರೀತಿಯಲ್ಲಿ, ಅದರ (ಅನಂತವಾದ ದೈವತ್ವದ) ಅರಿವು ಹೊಂದಿದ್ದು, ತನ್ನ ಸತ್‌ಸಂಕಲ್ಪದ ಮಸೂರದ (lens) ದ್ವಾರಾ ಅಭ್ಯಾಸಿಯ ಹೃದಯದ ಮೇಲೆ ಕೇಂದ್ರಿತಗೊಳಿಸುತ್ತಾನೆ. ಅಭ್ಯಾಸಿಗೆ

ಸಲುವಾಗಿ, ಪ್ರಾಣಾಹುತಿಯಲ್ಲಿ ವಿಶೇಷವೇನೂ ಇಲ್ಲವೆಂದು ವ್ಯಾಖ್ಯಾನ ಮಾಡುವುದಕ್ಕೆ ಎಡೆ ಮಾಡಿಕೊಟ್ಟಿದೆ. ನೀವು ಒಬ್ಬ ಮಹಾತ್ಮ ಅಥವಾ ಸಂತನ ಸಹವಾಸದಲ್ಲಿದ್ದಾಗ, ಸಾಮಾನ್ಯವಾಗಿ ನಿಮ್ಮನ್ನು ಕದಡುವ ವಿಚಾರಗಳಿಂದ ಬಿಡುಗಡೆಯನ್ನೂ, ಕೆಲಕಾಲ ಶಾಂತಿಯನ್ನೂ ಅನುಭವಿಸುತ್ತೀರಿ. ಇದು ಆ ಮಹಾತ್ಮನ ಪ್ರಾಣಾಹುತಿಯ ಪರಿಣಾಮವೆಂದು ಅವರು ಸಾಧಿಸುತ್ತಾರೆ. ತಮ್ಮ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಈ ರೀತಿ ವಿವರಣೆಯನ್ನು ಕೊಡುವವರು ಜನತೆಯನ್ನು ಮೋಸ ಮಾಡುತ್ತಿರುವರೆಂದೇ ಅರ್ಥ. ಅವರು ಪ್ರಾಣಾಹುತಿ ಎಂದು ವಿವರಿಸುವ ವಸ್ತು ನಿಜವಾಗಿ ಆ ಮಹಾತ್ಮನಿಂದಾಗುವ ಪವಿತ್ರ ಪರಮಾಣು(ಕಣ)ಗಳ ಸ್ವಯಂ ವಿಕಿರಣ. ಅದು ಅಲ್ಲಿ ಪರಿಣಾಮವಾಗಿ, ಅವರು ಅಲ್ಲಿರುವವರೆಗೆ ಶಾಂತತೆ ಪಸರಿಸುವಂತೆ ಮಾಡುತ್ತದೆ. ಇದೊಂದು ಸ್ವಾಭಾವಿಕ ಕ್ರಿಯೆ. ಇದಕ್ಕೂ ಪ್ರಾಣಾಹುತಿಗೂ ಸಂಬಂಧವಿಲ್ಲ. ಹಾಗೆ, ಪರಮಾಣುಗಳು ವಿಕಿರಣಗೊಳ್ಳುವುದು ಕೇವಲ ಸಂತ ಅಥವಾ ಮಹಾತ್ಮರಿಂದಷ್ಟೇ ಅಲ್ಲ, ಧಾರ್ಮಿಕನಿರಲಿ, ದುಷ್ಟನಿರಲಿ, ಸಂತನಿರಲಿ, ಅಸುರನಂತಿರಲಿ, ಯಾರೊಬ್ಬರಿಂದಲೂ ಪಸರಿಸುತ್ತವೆ. ಆ ಧಾರ್ಮಿಕ ಅಥವಾ ನೈತಿಕ ಅಧಃಪತನ ಹೊಂದಿದ ಮನುಷ್ಯನ ಸಂಗಡ ಕೆಲ ಕಾಲವಿದ್ದರೆ, ಅವನಿಂದ ದುಷ್ಟ ಪರಮಾಣುಗಳು ಪಸರಿಸಿ ನಿಮ್ಮ ಮೇಲೆ ಪ್ರಭಾವ ಬೀರುವುದನ್ನು ನೀವು ಕಾಣುವಿರಿ; ಅದರ ಪರಿಣಾಮವಾಗಿ, ಕೆಲ ಕಾಲ ನಿಮ್ಮ ವಿಚಾರಗಳೂ ಅದೇ ಜಾಡಿನಲ್ಲಿ ಹರಿಯುತ್ತವೆ. ಇಂಥ ವಿಕಿರಣದ ಪರಿಣಾಮ ಅಲ್ಪ ಕಾಲವಿದ್ದು, ನೀವು ಅಲ್ಲಿಂದ ದೂರವಾದಾಗ ಮಾಯವಾಗುತ್ತದೆ. ತಾವು ಉಪದೇಶಿಸುವುದನ್ನು ಜನರು ಅನುಸರಿಸಲು ಉದಾಸೀನ ಮಾಡುತ್ತಾರೆಂದು ಧಾರ್ಮಿಕ ಗುರುಗಳು ಗೊಣಗುವುದಕ್ಕೆ ಇದೇ ಕಾರಣ. ತಮ್ಮ ಉಪದೇಶವನ್ನು ಕೇಳಿದ ನಂತರ ಹಿಂದಿರುಗಿ ಹೋಗುವಾಗ ಅದನ್ನು ಜನರು ಆಗಲೇ ಎಸೆದುಬಿಟ್ಟು, ತಮ್ಮ ಮನಸ್ಸಿನಲ್ಲಿ ಏನನ್ನೂ ಉಳಿಸಿಕೊಳ್ಳುವುದೇ ಇಲ್ಲ ಎಂದು ಅವರು ಹೇಳುತ್ತಾರೆ. ಈ ವಿಷಯದಲ್ಲಿ ದೂಷಿಸಬೇಕಾಗಿರುವುದು ಜನರನ್ನಲ್ಲ, ಆ ಉಪದೇಶಕರನ್ನು ಎಂದು ನನಗೆ ಅನಿಸುತ್ತದೆ. ಯಾಕೆಂದರೆ ತಾವು ವೇದಿಕೆಯ ಮೇಲಿಂದ ಮಾಡುವ ಉಪದೇಶವನ್ನು ಜನರಿಗೆ ಪ್ರಾಣಾಹುತಿಯ ಮೂಲಕ ಮುಟ್ಟಿಸಲು ಅವರಿಗೆ ಶಕ್ತಿಯಿಲ್ಲ. ಆದರೆ, ಪ್ರಾಣಾಹುತಿ ಶಕ್ತಿಯು ಉನ್ನತ ಮಟ್ಟದ ಯೌಗಿಕ ಸಿದ್ಧಿ. ಇದರ ಮೂಲಕ, ಯೋಗಿಯಾದವನು ತನ್ನ ಸಂಕಲ್ಪ ಶಕ್ತಿಯ ಮೂಲಕ ಯಾರಲ್ಲಿಯೇ ಆಗಲಿ ಯೋಗಶಕ್ತಿಯನ್ನು ಅಥವಾ ದೈವೀ ಪ್ರಭೆಯನ್ನು ತುಂಬಬಹುದು, ಮತ್ತು ಆಧ್ಯಾತ್ಮಿಕ ಪ್ರಗತಿಗೆ ಹಾನಿಕಾರಕವಾದುದನ್ನು ಅಥವಾ ಅನಿಷ್ಟವಾದುದನ್ನು ತೆಗೆದು ಹಾಕಬಹುದು. ಅವನು ಈ ಶಕ್ತಿಯನ್ನು ತನ್ನ ಸುತ್ತ ಸೇರಿರುವವರ ಮೇಲಷ್ಟೇ ಅಲ್ಲ, ದೂರದಲ್ಲಿರುವವರ ಮೇಲೆಯೂ ಬೀರಬಲ್ಲನು. ಯಾವಾಗಲೇ ಆಗಲಿ, ಯಾವ ರೀತಿಯಲ್ಲಿಯೇ ಆಗಲಿ ಈ ಶಕ್ತಿಯನ್ನು ಉಪಯೋಗಿಸಬಹುದು. ಈ ಶಕ್ತಿಯ ಮೇಲೆ ಪ್ರಭುತ್ವ ಪಡೆದವನು, ತನ್ನ ಒಂದು

ಕಟಾಕ್ಷದಿಂದ, ಅಭ್ಯಾಸಿಯು ಸದ್ಯ ಇರುವ ಸ್ಥಿತಿಗಿಂತಲೂ ಬಹಳ ಮುಂದಿನ ಸ್ಥಿತಿಯನ್ನು ತಾತ್ಕಾಲಿಕವಾಗಿಯಾಗಲಿ, ಶಾಶ್ವತವಾಗಿಯಾಗಲಿ ಉಂಟಾಗುವಂತೆ ಮಾಡಬಲ್ಲನು. ಈ ರೀತಿಯಲ್ಲಲ್ಲದೆ, ಬೇರೆ ರೀತಿಯಲ್ಲಿ ಅದನ್ನು ಸಾಧಿಸಲು ಇಡೀ ಜೀವಮಾನ ಸಾಲುತ್ತಿರಲಿಲ್ಲ. ಇದು ಜಂಬದ ಮಾತಲ್ಲ; ನಗ್ನ ಸತ್ಯ. ಮತ್ತು, ಯಾರೇ ಆಗಲಿ, ಹಾಗೆ ಬಯಸುವುದಾದರೆ, ಪ್ರತ್ಯಕ್ಷ ಪ್ರಯೋಗದ ಮೂಲಕ ಪರೀಕ್ಷಿಸಿ ದೃಢಪಡಿಸಿಕೊಳ್ಳಬಹುದು. ಪ್ರಾಣಾಹುತಿ ಶಕ್ತಿಯ ಮೂಲಕ ಅನೇಕ ವೇಳೆ ಸಂತರು ದೃಷ್ಟಿ ಮಾತ್ರದಿಂದ ಮನುಷ್ಯನ ಸಂಪೂರ್ಣ ಸ್ವಭಾವವನ್ನು ಪರಿವರ್ತನೆ ಮಾಡಿರುತ್ತಾರೆ. ನನ್ನ ಗುರುಗಳಾದ ಫತೇಗಡದ ಸಮರ್ಥ ಗುರು ಮಹಾತ್ಮಾ ರಾಮಚಂದ್ರಜಿ ಮಹಾರಾಜ, ಸ್ವಾಮೀ ವಿವೇಕಾನಂದ ಮುಂತಾದ ಸಂತರ ಆಶ್ಚರ್ಯಕರ ಉದಾಹರಣೆಗಳು ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ನೀಡುತ್ತವೆ.


ನಾನು ಅನೇಕ ಸಂಸ್ಥೆಗಳ ಮುಖ್ಯಸ್ಥರನ್ನು ಭೇಟಿ ಮಾಡಿದ್ದೇನೆ. ಆ ಎಲ್ಲ ಕಡೆಗಳಲ್ಲಿಯೂ 'ಪ್ರಾಣಾಹುತಿ'ಯು ಇಲ್ಲದಿರುವುದನ್ನು ಕಂಡಿದ್ದೇನೆ; ಎಷ್ಟರ ಮಟ್ಟಿಗೆಂದರೆ, ಅವರಲ್ಲಿ ಅನೇಕರಿಗೆ ಅದು ತೀರ ಪರಕೀಯ (ಅಪರಿಚಿತ)ವಾಗಿದೆ. ಸ್ವಾಮಿ ವಿವೇಕಾನಂದರಿಗೆ ನಿಃಸಂಶಯವಾಗಿ ಆ ಶಕ್ತಿಯಿತ್ತು. ಆದರೆ ಅಂಥ ವ್ಯಕ್ತಿಗಳು ಯಾವಾಗಲೂ ವಿರಳ. ನನ್ನ ಪೂಜ್ಯ ಗುರುವಿನಂಥ ವ್ಯಕ್ತಿಗಳು ಆಕಸ್ಮಿಕವಾಗಿ ಜನಿಸಿ ಬರುವಂಥವರಲ್ಲ.

ನಿಜಕ್ಕೂ ನಾವೆಲ್ಲರೂ ಕೈಯಲ್ಲಿ ಭಿಕ್ಷಾ ಪಾತ್ರೆ ಹಿಡಿದು ಗುರುವಿನ ಮನೆಯ ಮುಂದೆ ನಿಂತ ಭಿಕ್ಷುಕರಂತಿದ್ದೇವೆ. ಅದನ್ನು ಗುರುವು ಶೀಘ್ರ ತುಂಬಿ ಕೊಡುತ್ತಾನೆ. ಆದರೆ ಆಧ್ಯಾತ್ಮಿಕ ವಿಷಯಗಳಿಗೆ ವ್ಯತಿರಿಕ್ತವಾದ ವಸ್ತುಗಳಿಂದಲೇ ಆ ಪಾತ್ರೆ ತುಂಬಿರುವಾಗ ಆತನಿಂದ ಏನನ್ನಾದರೂ ಪಡೆಯುವ ಪ್ರಶ್ನೆಯೇ ಏಳುವುದಿಲ್ಲ; ಯಾಕೆಂದರೆ, ಏನನ್ನಾದರೂ ಸುರಿದರೆ, ಅದು ಕೂಡಲೇ ಹೊರಕ್ಕೆ ಚೆಲ್ಲುತ್ತದೆ. ಆದುದರಿಂದ, ಭಿಕ್ಷಾ ಪಾತ್ರೆಯು ಗುರು ಕೃಪೆಯಿಂದ ತುಂಬಿಕೊಳ್ಳುವಂತಾಗಲು, ಅದನ್ನು ಬರಿದು ಮಾಡಿಕೊಳ್ಳುವುದು ನಾವು ಮಾಡತಕ್ಕ ಪ್ರಾಥಮಿಕ ಕಾರ್ಯ.

# ಅಧ್ಯಾಯ – ೭

## ಸಾಕ್ಷಾತ್ಕಾರದ ಮಾರ್ಗದಲ್ಲಿಯ ಹಂತಗಳು

ಜೀವನದ ಚರಮ ಧ್ಯೇಯ ಅಥವಾ ಗಂತವ್ಯದ ಅಂತಿಮ ಬಿಂದು. ಸಂಪೂರ್ಣ ಲಯಾವಸ್ಥೆ, ಆತ್ಮನಿರಸನ ಅಥವಾ ಶೂನ್ಯತೆ. ಅದನ್ನೇ ನಾನು ಈ ಚಿತ್ರದಲ್ಲಿ ತೋರಿಸಲು ಪ್ರಯತ್ನಿಸಿದ್ದೇನೆ.




ಕೇಂದ್ರದ ಸುತ್ತಲೂ ಇರುವ ಏಕಕೇಂದ್ರೀಯ ವೃತ್ತಗಳು ನಮ್ಮ ಪ್ರಗತಿ ಮಾರ್ಗದಲ್ಲಿ ಹಾದು ಹೋಗಬೇಕಾದ ವಿವಿಧ ಆಧ್ಯಾತ್ಮಿಕ ವಲಯಗಳನ್ನು ಸ್ಥೂಲವಾಗಿ ಸೂಚಿಸುತ್ತವೆ. ಅತ್ಯಂತ ಹೊರಗಿರುವ ವೃತ್ತದಿಂದ ನಮ್ಮ ಪ್ರಯಾಣವನ್ನಾರಂಭಿಸಿ ಒಂದೊಂದೇ ವೃತ್ತವನ್ನು ದಾಟಿ ಮುಂದಿನ ಹಂತ ತಲುಪುತ್ತ ನಾವು ಕೇಂದ್ರದತ್ತ ಸಾಗುತ್ತೇವೆ. ಅದು ಅಪಾರ ವಿಸ್ತಾರದ ಪ್ರದೇಶ.

ಜೀವಕೇಂದ್ರವಾದ ಹೃದಯದಿಂದ ನಾವು ಧ್ಯಾನವನ್ನು ಆರಂಭಿಸಿ ಗುರಿ ಮುಟ್ಟುವವರೆಗೂ ಮುಂದುವರಿಯುತ್ತೇವೆ. ನಮ್ಮ ಯಾತ್ರಾ ಕಾಲದಲ್ಲಿ ಹಾದು ಹೋಗಬೇಕಾದ ಐದು ಬಿಂದುಗಳು ಅಥವಾ ಉಪಕೇಂದ್ರಗಳು ಈ ಹೃದಯ ಮಂಡಲದಲ್ಲಿವೆ. ಪ್ರತಿಯೊಂದು ಬಿಂದುವಿನಲ್ಲಿಯೂ ಕೆಳಗೆ ಕೊಡಲಾದ, ನಾಲ್ಕು ಸ್ಥಿತಿಗಳು, ಈ ಕ್ರಮದಲ್ಲಿ ಅನುಭವಕ್ಕೆ ಬರುತ್ತವೆ.

೧. ಎಲ್ಲೆಲ್ಲೂ ವಿಚಿತ್ರ ಸ್ಥಿತಿ, ದೈವೀ ಶಕ್ತಿಯು ಎಲ್ಲೆಡೆ ವ್ಯಾಪಿಸಿರುವುದರ ಅರಿವು ಮನಸ್ಸಿನಲ್ಲಿ ಜಾಗೃತವಾಗುವುದು.

೨. ಅದರ ಸ್ಮರಣೆಯಲ್ಲಿಯೇ ಮಗ್ನವಾದ ದೈವೀ ಸ್ಥಿತಿ ಸರ್ವತ್ರ ವ್ಯಾಪಿಸಿದಂತಿರುವುದು.

೩. ದೈವೀ ಶಕ್ತಿಯ ಅನುಭವವೂ ಇಲ್ಲ, ಸ್ಮರಣೆಯೂ ಇಲ್ಲ, ಆದರೆ ಒಂದು ರೀತಿಯ ಶೂನ್ಯಾನುಭವ ಮಾತ್ರ.

೪. ಎಲ್ಲವೂ ಮರೆಯಾಗಿ ಹೋದಂತೆ. ಹೃದಯದ ಮೇಲೆ ಯಾವ ಸಂಸ್ಕಾರವೂ ಇಲ್ಲ, ಅಸ್ತಿತ್ವದ್ದೂ ಕೂಡ ಇಲ್ಲ.

ಈ ನಾಲ್ಕು ಸ್ಥಿತಿಗಳು ಪ್ರತಿಯೊಂದು ಮಂಡಲದಲ್ಲಿಯೂ, ಪ್ರತಿಯೊಂದು ಬಿಂದುವಿನಲ್ಲಿಯೂ ಅನುಭವಕ್ಕೆ ಬರುತ್ತವೆ. ಸಹಜಮಾರ್ಗ ಪದ್ಧತಿಯ ಆಧ್ಯಾತ್ಮಿಕ ಶಿಕ್ಷಣದಲ್ಲಿ ಪ್ರತಿಯೊಬ್ಬನೂ ಅವುಗಳನ್ನು ಹಾದು ಹೋಗುತ್ತಾನೆ. ಆದರೆ, ಬಹುಶಃ ಹೆಚ್ಚು ಸೂಕ್ಷ್ಮಗ್ರಾಹಿಗಳು ಮಾತ್ರ ಎಲ್ಲ ಸ್ಥಿತಿಗಳನ್ನು ವಿವರವಾಗಿ ಅನುಭವಪಡಲು ಶಕ್ತರಾಗುತ್ತಾರೆ. ಅತ್ಯಂತ ಕೆಳಗಿನ ಬಿಂದುವಿನಿಂದ, ಅತ್ಯುಚ್ಚ ಬಿಂದುವಿನವರೆಗೆ, ನಾವು ಬೇರೆ ಬೇರೆ ಬಿಂದುಗಳನ್ನು ಹಾದು ಮುಂದುವರಿದಂತೆಲ್ಲ ಈ ಸ್ಥಿತಿಗಳು ಹೆಚ್ಚು ಹೆಚ್ಚು ಸೂಕ್ಷ್ಮತರವಾಗುತ್ತ ಹೋಗುತ್ತವೆ.

ನಾವು ಐದನೆಯ ಬಿಂದುವನ್ನು ದಾಟಿದಾಗ ಆಜ್ಞಾಚಕ್ರದತ್ತ ನಮ್ಮ ದಾರಿ ನೇರವಾಗುತ್ತದೆ. ಈ ಬಿಂದುವಿನಲ್ಲಿಯ ಸ್ಥಿತಿ ವಿಚಿತ್ರವಾಗಿದೆ. ನಾವು ಹೀರಿಕೊಳ್ಳುವ ಶಕ್ತಿ ಈ ಬಿಂದುವಿನಿಂದ ಕೆಳಗಿನ ವಲಯಗಳತ್ತ ಹೊರಳಿಸಲ್ಪಡುತ್ತದೆ. ಯಾತ್ರೆಯಲ್ಲಿ ಈ ಬಿಂದುವಿನಲ್ಲಿ ಬರುವ ಸಮಯದಲ್ಲಿ ಮಸಕು ಮಸಕಾದ ಕತ್ತಲೆಯಂಥ ಏನೋ ಒಂದು ಸ್ಥಿತಿ ಅಭ್ಯಾಸಿಯ ಅನುಭವಕ್ಕೆ ಬರುತ್ತದೆ. ಇದು ನಾವು ಅಂತಿಮವಾಗಿ ಬೆಳಕನ್ನೂ ದಾಟಿ ಆಚೆಗೆ ಹೋಗಬೇಕೆಂದು ತೋರಿಸುವ ಸುಳುಹು ಮಾತ್ರ. ಅದರ ನಿಜವಾದ ಸ್ವರೂಪವು ಬೆಳಕಿಗಾಗಲಿ, ಕತ್ತಲೆಗಾಗಲಿ ಸಂಬಂಧಿಸಿದೆ, ಉಷಃಕಾಲವರ್ಣದಂತಹುದಕ್ಕೆ ಸಂಬಂಧಿಸಿದೆ.

ಹೃದಯ ಮಂಡಲದ ಐದನೆಯ ವೃತ್ತವನ್ನು ದಾಟಿದ ಮೇಲೆ ಅಭ್ಯಾಸಿಯು ಮನೋಮಂಡಲವನ್ನು ಪ್ರವೇಶಿಸುತ್ತಾನೆ. ಈ ಮಂಡಲದ ಹನ್ನೊಂದು ವೃತ್ತಗಳು ಅಹಂಕಾರದ ವಿವಿಧ ಸ್ತರಗಳನ್ನು ಚಿತ್ರಿಸುತ್ತವೆ. ಅವುಗಳ ಮೂಲಕ ಮುಂದುವರಿದಂತೆಲ್ಲ, ಸ್ಥಿತಿಯು ಸೂಕ್ಷ್ಮವೂ, ನವುರೂ ಆಗಿರುತ್ತದೆ. ಈ ಪ್ರತಿಯೊಂದು

ವೃತ್ತದಲ್ಲಿಯೂ ಅಸಂಖ್ಯ ಬಿಂದುಗಳು ಮತ್ತು ಗ್ರಂಥಿಗಳು ಇವೆ. ಈ ಅದ್ಭುತ ಪ್ರಾಣಾಹುತಿಯ ಯೌಗಿಕ ಪ್ರಕ್ರಿಯೆಯೊಂದಿಲ್ಲದಿದ್ದರೆ, ಒಂದು ಬಿಂದುವಿನಿಂದ ಇನ್ನೊಂದಕ್ಕೆ ಸಾಗಲು ಇಡೀ ಜೀವಮಾನವೇ ಬೇಕಾಗುತ್ತದೆ.

ನಾವು ಹದಿನಾರನೆಯ ವೃತ್ತವನ್ನು ತಲುಪುವ ಹೊತ್ತಿಗೆ, ಅಹಂಕಾರದಿಂದ ಬಹುತೇಕ ಬಿಡುಗಡೆ ಪಡೆದಂತಾಗುವುದು. ದೊಡ್ಡ–ದೊಡ್ಡ ಋಷಿಗಳಲ್ಲಿಯೂ ಈ ಸ್ಥಿತಿಯನ್ನು ಪಡೆದವರು ಅಪರೂಪವೇ ಸರಿ. ಮಾನವ ಪಡೆಯಬಹುದಾದ ಎಲ್ಲೆಯ ಆಚೆಯ ಹಂತವನ್ನು ಮುಟ್ಟಿದ ನಮ್ಮ ಗುರು ಮಹಾರಾಜ (ಲಾಲಾಜಿ)ರನ್ನು ಬಿಟ್ಟರೆ, ಹದಿನಾರನೆಯ ವೃತ್ತವನ್ನು ಮುಟ್ಟಿರಬಹುದಾದವರಲ್ಲಿ ಕಬೀರನ ಹೊರತು ಇನ್ನಾರನ್ನೂ ನಾನು ಕಾಣೆ. ಈ ವೃತ್ತದ ನಂತರ, ಇನ್ನೂ ಸ್ಥೂಲ ರೂಪದಲ್ಲಿರುವ ಸಾರೂಪ್ಯತೆ ಮಾತ್ರವೇ ಉಳಿಯುವುದು.

ಈ ಬಿಂದುವಿಗೆ ತಲುಪುವ ಮೊದಲು ನಾವು ಸಹಸ್ರದಳ ಕಮಲದ ವಿರಾಡ್ ಮಂಡಲವನ್ನು ಹಾದು ಹೋಗುತ್ತೇವೆ. ಮಹಾಭಾರತ ಯುದ್ಧದ ಸಮಯದಲ್ಲಿ, ವಿರಾಡ್ರೂಪವು ಅರ್ಜುನನಿಗೆ ಗೋಚರವಾಗುವಂತೆ ಮಾಡಿರುವುದು ಈ ಮಂಡಲದಿಂದಲೇ. ಅದು ಬ್ರಹ್ಮಾಂಡ. ಇಲ್ಲಿ ನಾವು ಸ್ವಲ್ಪ ಮಟ್ಟಿಗೆ ಬ್ರಹ್ಮಗತಿ ಅಥವಾ ದೈವೀ ಸ್ತರವೆಂದು ಕರೆಯಬಹುದಾದ ಅಪರಿವರ್ತನೀಯ ಸ್ಥಿತಿಯನ್ನು ಅನುಭವಪಡಲಾರಂಭಿಸುತ್ತೇವೆ. ಈ ಯಾತ್ರೆಯ ಅವಧಿಯಲ್ಲಿ ವಿಶಿಷ್ಟ ಸ್ಥಿತಿಗಳಿರುವ ವಿವಿಧ ಕೇಂದ್ರಗಳನ್ನು ಹಾದು ಹೋಗುತ್ತೇವೆ.

ಕೇಂದ್ರ ಮಂಡಲದ ಏಳು ಜ್ಯೋತಿರ್ಮಯ ವೃತ್ತಗಳನ್ನು ದಾಟಿದ ಮೇಲೆ 'ಅನಂತ'ದ ವಿಶಾಲ ಅಸೀಮ ವಿಸ್ತಾರದಲ್ಲಿ ಪ್ರವೇಶಿಸಿ, ನಾವು ಅದರಲ್ಲಿ ಈಜಾಡಲು ಪ್ರಾರಂಭಿಸುತ್ತೇವೆ. ಇಲ್ಲಿ, ಗುರುವಿನ ಸಹಾಯ ಇನ್ನೂ ಅಗತ್ಯವಿದೆ. ಯಾಕೆಂದರೆ, ಈಜುವವನ ಬಿರುಸಾದ ಈಜುವ ಕ್ರಿಯೆಯು ಉಂಟು ಮಾಡುವ ಶಕ್ತಿ ತರಂಗಗಳು ಪ್ರಗತಿಗೆ ಅಡ್ಡಿಯಾಗಿ ನಿಲ್ಲುತ್ತವೆ. ಅನುಭವಿಕ, ಸಮರ್ಥ ಮತ್ತು ಜಾಗರೂಕನಾದ ಗುರು ಮಾತ್ರ, ಈ ತೆರೆಗಳನ್ನು ಶಮನಗೊಳಿಸಿಕೊಳ್ಳಲಿಕ್ಕೆ ಮತ್ತು ಈಜುವವನಿಗೆ ಲಘುವಾಗಿ ಈಜುವ ಕಲೆಯನ್ನು ಕಲಿಸುವುದಕ್ಕೆ, ಸಹಾಯ ಮಾಡುತ್ತಾನೆ. ತೇಲುವುದು ಎನ್ನುವುದಕ್ಕೆ ಬಹುಶಃ ಸದೃಶವಾದ, ಆದರೂ ತೇಲುವುದು ಎಂದೆನ್ನಲಾಗದ ಈ ಈಜುವಿಕೆಯು ವಿರೋಧವುಂಟುಮಾಡುವಂಥ ತೆರೆಗಳನ್ನು ಹುಟ್ಟಿಸುವುದಿಲ್ಲ. ಈ ಲಘುವಾದ ಈಜಿನ ಆನಂದಾನುಭವಕ್ಕೆ ಜಾರುವುದೂ ಪ್ರಗತಿಯನ್ನು ಕುಂಠಿತಗೊಳಿಸುವುದರಿಂದ, ಗುರುವು ಅಭ್ಯಾಸಿಯು ಹಾಗೆ ಜಾರದಂತೆ ರಕ್ಷಿಸಿ, ಅವನನ್ನು ಮುಂದಕ್ಕೊಯ್ಯುತ್ತಾನೆ.

ಈಗ ನಾವು ಸುಪ್ತವಾಗಿರುವ ಕೇಂದ್ರದ ವಲಯವನ್ನು ತಲುಪುತ್ತೇವೆ. ಅದೂ ಕೂಡ, ಉಂಗುರದಂತಹ ಏನೋ ಒಂದು ವಸ್ತುವಿನಿಂದ ಸುತ್ತುವರಿದಿರುವಂತೆ ತೋರುತ್ತದೆ, ಅದೇ ಕೊನೆಯದು. ಪ್ರಯೋಗಕ್ಕೋಸ್ಕರ ಮತ್ತು ಅಭಿವ್ಯಕ್ತಗೊಳಿಸಲು ಅನುವಾಗುವುದಕ್ಕೆ ನಾನು ಅದರೊಳಕ್ಕೆ ಪ್ರವೇಶಿಸಲು

ಒಮ್ಮೆ ಪ್ರಯತ್ನ ಮಾಡಿದೆನು. ನಾನು ಅದರೊಳಗಿನ ಕ್ಷಣಮಾತ್ರದ ಇಣುಕು ನೋಟವನ್ನು ನೋಡಲು ಶಕ್ತನಾದೆನೆಂದರೂ, ಥಟ್ಟನೆ, ಒಂದು ಬಲವಾದ ರಭಸದ ಆಘಾತವು ನನ್ನನ್ನು ಹಿಂದಕ್ಕೆ ತಳ್ಳಿತು. ಇದೇ ಬಹುಶಃ ಮಾನವನಿಗೆ ಸಾಧ್ಯವಾಗಬಹುದಾದ ಚರಮ ಸೀಮೆಯೆಂಬ ತೀರ್ಮಾನಕ್ಕೆ ನಾನು ಬಂದೆ. ಪ್ರತಿಯೊಬ್ಬನೂ ಅಲ್ಲಿಯವರೆಗೂ, ಸಾಧ್ಯವಾದರೆ ಅದಕ್ಕೂ ಆಚೆಗೆ ಮುಂದಕ್ಕೆ ಹೋಗಲಿ ಎಂದು ನಾನು ಆಶಿಸುತ್ತೇನೆ. 'ಸ್ಥೂಲ ಸಾರೂಪ್ಯತೆ' ಎಂದು ನಾನು ಹೇಳಿರುವಂಥದು, ಕೊನೆಯ ಪರಿಮಿತಿಯವರೆಗೂ, ಉತ್ತರೋತ್ತರ ಸೂಕ್ಷ್ಮತರವಾಗುತ್ತ ಹೋಗುತ್ತದೆ. ನಾವೀಗ ಕೇಂದ್ರಕ್ಕೆ ನಿಕಟತಮವಾದ ಸ್ಥಾನವನ್ನು ಪಡೆದಂತಾಯಿತು. ಮಾನವನಿಗೆ ಸಾಧ್ಯವಾದ ಅತ್ಯುನ್ನತ ನಿಲುಕು ಅದೇ ಆಗಿದೆ. ಇಲ್ಲಿ ನಾವು 'ಸತ್ಯ' ಸ್ಥಿತಿಯೇ ಆಗಿರುವುದರೊಂದಿಗೆ ನಿಕಟ ಸಮರಸತೆಯಲ್ಲಿರುತ್ತೇವೆ. ಮಾನವನು, 'ಭೂಮ' 'ಚರಮಸ್ಥಿತಿ' 'ಪರಮಾತ್ಮ' ಅಥವಾ 'ಕೈವಲ್ಯ' ಎಂಬುದರ ಸಮೀಪತಮ ಸಂಪರ್ಕದಲ್ಲಿ ಬಂದಾಗ, ತಾನು ಏನಿದ್ದೇನೆ, ಎಲ್ಲಿದ್ದೇನೆ. ಎಂಬುದು ಅವನ ಅರಿವಿಗೆ ಅತೀತವಾಗಿರುತ್ತದೆ. ಕೇಂದ್ರದಲ್ಲಿ ಅಥವಾ ಸರ್ವಶಕ್ತನಲ್ಲಿ ಸಂಪೂರ್ಣ ಲಯ ಹೊಂದುವುದು ಸಾಧ್ಯವಿಲ್ಲವೆನ್ನಬಹುದು; ಏಕೆಂದರೆ ದೇವರಿಗೂ, ಜೀವಾತ್ಮಕ್ಕೂ ನಾಮಮಾತ್ರ ಅಂತರವಿರಬೇಕಾದುದು ಅಗತ್ಯ.

ಮಾನವನ ಸಿದ್ಧಿಯ ಸಾಧ್ಯತೆಯ ವಿಸ್ತಾರ ಇಂತಹುದು. ಸಾಕ್ಷಾತ್ಕಾರ ಪಥದಲ್ಲಿ ಮಹತ್ತಮ ಪ್ರಗತಿಯನ್ನು ಸಾಧಿಸಲು ಬಯಸಿದರೆ, ಆರಂಭದಿಂದಲೂ ಅದರ ಮೇಲೆ ದೃಷ್ಟಿಯನ್ನು ನೆಟ್ಟಿರಬೇಕು. ಸಂತರಲ್ಲಿ ಯೋಗಿಗಳಲ್ಲಿ ಕೆಲವರಿಗೂ ಕೂಡ ಇದರ ಕಲ್ಪನೆ ಇದ್ದಿರಲಿಕ್ಕಿಲ್ಲವೇನೊ ! ಬಹುತೇಕ ಸಂದರ್ಭಗಳಲ್ಲಿ, ಇದ್ದ ಅತಿ ದೂರವೆನ್ನಬಹುದಾದ ನಿಲುಕು ಎರಡನೆಯ ಅಥವಾ ಮೂರನೆಯ ವೃತ್ತದವರೆಗೆ ಮಾತ್ರ. ಈ ಪ್ರಾರಂಭಿಕ ಹಂತವನ್ನೇ ಅವರು ಅತಿ ದೊಡ್ಡ ಸ್ಥಿತಿಯೆಂದು ಕೆಲವು ಸಾರೆ ಭಾವಿಸಿದರೆಂಬುದು ದುರ್ದೈವದ ಸಂಗತಿ. ದೈವ ವಿದ್ಯಾ ಪ್ರವೀಣರೆನಿಸಿಕೊಂಡವರ ಯೋಗ್ಯತೆಯನ್ನು ನಿರ್ಣಯಿಸಲು ಜನರಿಗೆ ಸಾಧ್ಯವಾಗಲೆಂದು ನಾನು ಇದನ್ನೆಲ್ಲ ಹೇಳಿದ್ದೇನಷ್ಟೆ. ಯಾಕೆಂದರೆ, ತಾವು ಪರಿಪೂರ್ಣತೆ ಪಡೆದವರೆಂದು ಅವರು ಭಾವಿಸುತ್ತಾರೆ ಮತ್ತು ಅವರ ಬಾಹ್ಯ ಸ್ವರೂಪ, ಮತ್ತು ಸೊಬಗುಗಳಿಂದಷ್ಟೇ ನಿರ್ಣಯಿಸಿ, ಅಜ್ಞ ಜನರು ಅವರನ್ನು ಹಾಗೆಂದು ಪರಿಗಣಿಸುತ್ತಾರೆ.

## ಪ್ರಾರ್ಥನೆ

ಓ ನಾಥ ! ನೀನೇ ಮಾನವ ಜೀವನದ ಗುರಿ.
ನಮ್ಮ ಇಚ್ಛೆಗಳು ನಮ್ಮ ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ.
ನೀನೇ ನಮ್ಮ ಏಕಮಾತ್ರ ಸ್ವಾಮಿ ಹಾಗೂ ಇಷ್ಟದೈವ.
ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿಯು ಅಸಂಭವ.

# ಸಹಜ ಮಾರ್ಗದ ಹತ್ತು ನಿಯಮಗಳು

೧. ಬೆಳಗು ಮುಂಜಾನೆ ಏಳಿರಿ. ಸಂಧ್ಯೋಪಾಸನೆಯನ್ನು ನಿಯಮಿತ ಸಮಯಕ್ಕೆ ಸೂರ್ಯೋದಯಕ್ಕೆ ಮುಂಚಿತವಾದರೆ ಒಳಿತು,– ಮುಗಿಸಿರಿ. ಪೂಜೆಗಾಗಿ ಪ್ರತ್ಯೇಕ ಸ್ಥಳವನ್ನು ಆಸನವನ್ನೂ ಇರಿಸಿಕೊಳ್ಳಿರಿ. ಶಾರೀರಿಕ ಮತ್ತು ಮಾನಸಿಕ ಪವಿತ್ರತೆಯ ಕಡೆಗೆ ವಿಶೇಷ ಲಕ್ಷ್ಯವಿರಲಿ.

೨. ನಿಮ್ಮ ಪೂಜೆಯನ್ನು ಆತ್ಮೋನ್ನತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿರಿ. ಹೃದಯವು ಪ್ರೇಮ ಭಕ್ತಿಗಳಿಂದ ತುಂಬಿರಲಿ.

೩. ದೇವರಲ್ಲಿ ಪೂರ್ಣ ಸಮರಸವಾಗುವುದೇ ನಿಮ್ಮ ಧ್ಯೇಯವಾಗಿರಲಿ. ಧ್ಯೇಯವು ಪ್ರಾಪ್ತವಾಗುವವವರೆಗೆ ನಿಲ್ಲಬೇಡಿರಿ.

೪. ನಿಮ್ಮ ಜೀವನವು ನಿಸರ್ಗದ ಹಾಗೆ ಸರಳ ಹಾಗೂ ಸಾಧಾರಣವಾಗಿರಲಿ.

೫. ಸತ್ಯವಂತರಾಗಿರಿ. ಕಷ್ಟಗಳು ನಿಮ್ಮ ಹಿತಕ್ಕಾಗಿಯೇ ಬಂದ ದೈವೀ ಕೃಪೆಯೆಂದು ತಿಳಿದು ಕೃತಜ್ಞರಾಗಿರಿ.

೬. ಎಲ್ಲರನ್ನೂ ಸಹೋದರರೆಂದು ತಿಳಿದು ಹಾಗೆ ವರ್ತಿಸಿರಿ.

೭. ಯಾರಾದರೂ ಕೇಡು ಮಾಡಿದರೆ ಸೇಡು ಬಗೆಯಬೇಡಿರಿ. ಬದಲು ದೈವೀ ಸಂಪತ್ತೆಂದು ತಿಳಿದು ಧನ್ಯವಾದಗಳನ್ನರ್ಪಿಸಿರಿ.

೮. ಊಟ ಮಾಡುವಾಗ ದೇವರನ್ನು ನೆನೆಯುತ್ತ ದೊರೆತದ್ದನ್ನು ಪ್ರಸನ್ನತೆಯಿಂದ ಸ್ವೀಕರಿಸಿರಿ. ಶುದ್ಧ ಹಾಗೂ ಪವಿತ್ರ ಗಳಿಕೆಯ ಕಡೆಗೆ ಲಕ್ಷ್ಯವಿರಲಿ.

೯. ಜನರಲ್ಲಿ ಪ್ರೇಮ ಹಾಗೂ ಪವಿತ್ರ ಭಾವನೆಗಳನ್ನು ಮೂಡಿಸುವ ಹಾಗೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿರಿ.

೧೦. ಮಲಗುವಾಗ ದೇವರು ನಿಮ್ಮ ಎದುರಿನಲ್ಲಿರುವನೆಂದು ತಿಳಿದು ಮಾಡಿದ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುತ್ತ ದೈನ್ಯದಿಂದ ಕ್ಷಮೆ ಬೇಡಿರಿ. ಮುಂದೆ ಎಂದಿಗೂ ಅಂಥ ಅಪರಾಧ ಮಾಡದಂತೆ ನಿರ್ಧರಿಸಿ ಪ್ರಾರ್ಥನೆ ಮಾಡಿರಿ.